
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ನನ್ನ ಕನಸಿನ ಕಸ್ಲಾಸ್

• ಚಂಪಾ
• ಹಾಲಂಬಿ


ಏಪ್ರಿಲ್ 25, 2012 ಪುಟ 20 ರೂ. 14/-



ನರಭಕ್ಷಕ ಹುಲಿ
ಚಂದಪ್ಪ ಹರಿಜನ ಹೆಸರಲ್ಲಿ ನರಿಗಳ ಕಚ್ಚಾಟ

ಂತಾಮಣಿ: ಪೋಲೀಸ್ ಸರ್ದಾರನ ಪುಂಡಾಟ

ಎಂಪಿ ಮೇಯರ್
ುರುಬನ ುಂದೆ ರುಬ



ಸ್ವಯಂ ಕೃಷಿ ಸರ್ವನಾಶ



ಅಣ್ಣಾಬಾಂಡ್ ಹೆದರಿದನೆ?



ಉತ್ತರ ಕನ್ನಡ
ಯಡ್ಡಿಯ ಮುಂಡಕ್ಕೆ ಕುಮಾರಣ್ಣನ ರುಂಡ ಅಂಟಿಸಿದ ಶಾಸಕ



ನಮಗೆಲ್ಲ ಧಿಕ್ಕಾರ ಹೇಳಿಹೋದ ಕಂದ ಆಫ್ರೀನ್



ಗುಜರಾತ್

ನ್ಯಾಯದ ತಕ್ಕಡಿ ಒಮ್ಮೆ ನ್ಯಾಯದತ್ತ ಮತ್ತೊಮ್ಮೆ...!

ಚಾರ್ವಾಕ



• ಶಿವಸುಂದರ

ಭಾರತ ವಿಭಜನೆಯ ನಂತರ ಸ್ವತಂತ್ರ ಭಾರತದ ಇತಿಹಾಸದಲ್ಲೇ ಅತ್ಯಂತ ಭೀಕರವಾದ ಕೋಮುವಾದಿ ನರಹತ್ಯೆ ನಡೆದ ಗುಜರಾತ್ ಹತ್ಯಾಕಾಂಡಕ್ಕೆ ಹತ್ತು ವರ್ಷಗಳು ತುಂಬಿರುವ ಈ ಹೊತ್ತಿನಲ್ಲಿ ನಿಧಾನಕ್ಕೆ ನ್ಯಾಯದ ಪ್ರಕ್ರಿಯೆಗೆ ಚಾಲನೆ ದೊರೆತಿದೆ. ನ್ಯಾಯದ ತಕ್ಕಡಿ ರಾಜಕಾರಣದ ಬಿರುಗಾಳಿಯಲ್ಲಿ ಒಮ್ಮೆ ನ್ಯಾಯದತ್ತ ಇನ್ನೊಮ್ಮೆ ಅನ್ಯಾಯದತ್ತ ತೂಗುತ್ತಾ ಸಾಗಿದೆ. ಈ ಅನಿಶ್ಚಿತತೆಯ ನಡುವೆ ಗುಜರಾತಿನ ಓಡ್ ಹತ್ಯಾಕಾಂಡಕ್ಕೆ ಸಂಬಂಧಪಟ್ಟಂತೆ ಇದೇ ಏಪ್ರಿಲ್ 8ಕ್ಕೆ ಗುಜರಾತ್ ವಿಶೇಷ ಕೋರ್ಟು ಆರೋಪಿಗಳೆಂದು ಹೆಸರಿಸಲಾದ 46 ಜನರಲ್ಲಿ 23 ಜನರನ್ನು ದೋಷಿಗಳೆಂದು ಘೋಷಿಸಿದೆ. 2002ರ ಮಾರ್ಚ್ 1ರಂದು ಹಿಂದೂತ್ವ ಸಂಘಟನೆಗಳ ದಾಳಿಗೆ ಹೆದರಿ ಓಡ್ ಗ್ರಾಮದಲ್ಲಿನ ಒಂದು ಕೊಠಡಿಯಲ್ಲಿ ರಕ್ಷಣೆಗಾಗಿ ಅವಿತುಕೊಂಡಿದ್ದ 23 ಮುಸ್ಲಿಮರನ್ನು - ಅವರಲ್ಲಿ 18 ಜನ ಹೆಂಗಸರು ಮತ್ತು ಮಕ್ಕಳು - ಈ ಆರೋಪಿಗಳನ್ನು ಒಳಗೊಂಡಂತೆ ಒಂದು ದೊಡ್ಡ ಗುಂಪು ದಾಳಿ ಮಾಡಿ ಇಡೀ ಕೊಠಡಿಗೆ ಬೆಂಕಿ ಹಚ್ಚಿ ಜೀವಂತ ಕೊಂದುಹಾಕಿದ್ದರು. ಈ ಪ್ರಕರಣದಲ್ಲಿ ಅಳಿದುಳಿದವರು ಮತ್ತು ಜೀವಂತ ಸಾಕ್ಷಿಗಳು ಇದರ ಬಗ್ಗೆ ನಂತರ ಠಾಣೆಯಲ್ಲಿ ದೂರುಕೊಡಲು ಹೋದರೆ ಅದನ್ನು ಪೊಲೀಸರು ಸ್ವೀಕರಿಸಲಿಲ್ಲ, ನಂತರ ಸ್ವೀಕರಿಸಿದರೂ ಕೇಸನ್ನು ಅತ್ಯಂತ ಪೇಲವ ಗೊಳಿಸಲಾಯಿತು. ಕೆಳಗಿನ ಹಂತದಲ್ಲಿ ಕೇಸು ಖುಲಾಸೆಯಾಗಿ ಆರೋಪಿಗಳು ಸತ್ತವರ ಸಂಬಂಧಿಕರ ಎದುರೇ ವೀರಾವೇಶದಿಂದ ಓಡಾಡುತ್ತಿದ್ದರು. ಇಂತಹುದೇ ಹಲವು ಪ್ರಕರಣಗಳಲ್ಲಿ ಕೇಸುಗಳನ್ನು ಅತ್ಯಂತ ದುರ್ಬಲಗೊಳಿಸಿ ಅಪರಾಧಿಗಳನ್ನು ಮೋದಿ ಸರ್ಕಾರ ಅತ್ಯಂತ ಠೇಂಕಾರದಿಂದ ಬಿಡುಗಡೆ ಮಾಡಿಸಿತು. ಗುಜರಾತ್ ಹತ್ಯಾಕಾಂಡದ ನಂತರ ನಡೆಯುತ್ತಿರುವ ಈ ನ್ಯಾಯದ ಹತ್ಯಾಕಾಂಡವನ್ನು ವಿರೋಧಿಸಿ ದೇಶಾದ್ಯಂತ ಪ್ರಜ್ಞಾವಂತ ಜನತೆ ಹೋರಾಡಲು ಪ್ರಾರಂಭಿಸಿದರು. ಅದರಲ್ಲಿ ಮುಂಬೈ ಮೂಲದ ತೀಸ್ತಾ ಸೆತೆಲ್‌ವಾದ್ ನಾಯಕತ್ವದ Citizens For Justice And Peace (CJP) ಅತ್ಯಂತ ಮುಖ್ಯವಾದುದು. ಕೆಳಹಂತದ ನ್ಯಾಯಾಲಯಗಳಿಂದ ಮೊದಲುಗೊಂಡು ಸುಪ್ರೀಂಕೋರ್ಟಿನವರೆಗೆ ಗುಜರಾತಿನಲ್ಲಿ ಆಗುತ್ತಿರುವ ನ್ಯಾಯದ ಹತ್ಯಾಕಾಂಡದ ಬಗ್ಗೆ ಜನತೆಯ ಮತ್ತು ವರಿಷ್ಠ ನ್ಯಾಯಾಲಯದ ಗಮನಕ್ಕೆ ತಂದಿದ್ದರಿಂದಲೇ ಸುಪ್ರೀಂಕೋರ್ಟು ಅತ್ಯಂತ ಭೀಕರವಾದ ಹತ್ಯಾಕಾಂಡ ನಡೆದ 11 ಪ್ರಕರಣಗಳ ವಿಚಾರಣೆಯನ್ನು ನೇರವಾಗಿ ತನ್ನ ಉಸ್ತುವಾರಿಯಲ್ಲಿ ನಡೆಸಲು ಪ್ರಾರಂಭಿಸಿತು. ಅದರ ಭಾಗವಾಗಿ ಈಗ ತೀರ್ಮಾನವಾಗಿರುವ ಓಡ್ ಪ್ರಕರಣ, ನರೋದಾ ಪಾಟಿಯಾ, ಗುಲ್ಬರ್ಗ್ ಸೊಸೈಟಿ, ಏಶಾನ್ ಝಾಫ್ರಿ ಪ್ರಕರಣಗಳ ನೇರವಾದ ತನಿಖೆಗೆ ವಿಶೇಷ ತನಿಖಾ ತಂಡವನ್ನು ತನ್ನ ಉಸ್ತುವಾರಿಯಲ್ಲಿ ನೇಮಿಸಿತು. ಇಷ್ಟೆಲ್ಲಾ ಒತ್ತಡಗಳನ್ನು ಹೇರಿದ್ದರಿಂದ ಕೆಲವೇ ಕೆಲವು ಕೇಸುಗಳಲ್ಲಾದರೂ ಆರೋಪಿಗಳಿಗೆ ಶಿಕ್ಷೆಯಾಗಲು ಪ್ರಾರಂಭವಾಗಿದೆ.

ಅದರ ಭಾಗವಾಗಿಯೇ ಕಳೆದ ನವಂಬರ್ 2011ರಲ್ಲಿ ಸರ್ದಾರ್‌ಪುರ ಎಂಬಲ್ಲಿ ನಡೆದ ಮುಸ್ಲಿಮರ ಕಗ್ಗೊಲೆಗೆ ಕಾರಣವಾದ 31 ಜನರಿಗೆ ಶಿಕ್ಷೆಯಾಯಿತು.

ಈಗ ಓಡ್ ಹತ್ಯಾಕಾಂಡದಲ್ಲಿ ಪಾಲ್ಗೊಂಡಿದ್ದ ಮತೋನ್ಮತ್ತ ಪಾತಕಿಗಳಿಗೆ ಶಿಕ್ಷೆಯಾಗಿದೆ. ಅವರ ಮೇಲೆ ಹಾಕಲಾದ ಕೊಲೆ, ಸಂಚು ಇನ್ನಿತ್ಯಾದಿ ಆರೋಪಗಳನ್ನು ನಿಜವೆಂದು ಕೋರ್ಟು ಅಂಗೀಕರಿಸಿದೆ. ಅವರ ಮೇಲಿನ ಶಿಕ್ಷಾ ಪ್ರಮಾಣವನ್ನು ಇದೇ ಏಪ್ರಿಲ್ 12ಕ್ಕೆ ಕೋರ್ಟು ಘೋಷಿಸಲಿದೆ.

ಇವೆಲ್ಲವೂ ಈ ದೇಶದಲ್ಲಿ ಸ್ವಲ್ಪವಾದರೂ ಇನ್ನೂ ನ್ಯಾಯ ಉಸಿರಾಡುತ್ತಿದೆ ಎಂದು ನಂಬಿಕೊಳ್ಳುವಷ್ಟರಲ್ಲಿ ಏಶಾನ್ ಝಾಫ್ರಿ ಪ್ರಕರಣದಲ್ಲಿ ಮುಖ್ಯಮಂತ್ರಿ ಮೋದಿಯದ್ದೇನೂ ಪಾತ್ರವಿಲ್ಲವೆಂದು ವಿಶೇಷ ತನಿಖಾ ತಂಡವು ವರದಿ ನೀಡಿ ಕೇಸನ್ನು ಮುಚ್ಚಿಹಾಕಲು ಸಲಹೆ ನೀಡಿದೆಯೆಂದು ನಿನ್ನೆ ಅಹಮದಾಬಾದಿನ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಕೋರ್ಟು ಹೇಳಿದೆ. 2002ರ ಫೆಬ್ರವರಿ 28ರಂದು ಅಹಮದಾಬಾದಿನ ಗುಲ್ಬರ್ಗ್ ಸೊಸೈಟಿಯಲ್ಲಿ ಮುಸ್ಲಿಮರ ನರಮೇಧ ನಡೆದುಹೋಯಿತು. ನೂರಕ್ಕೂ ಹೆಚ್ಚು ಮುಸ್ಲಿಮರ ಮಾರಣಹೋಮವನ್ನು ಹಿಂದೂತ್ವವಾದಿ ಮತೋನ್ಮತ್ತರು ಸರ್ಕಾರದ ಸಂಪೂರ್ಣ ಬೆಂಬಲದೊಂದಿಗೆ ನಡೆಸಿದರು. ಅದೇ ಗುಲ್ಬರ್ಗ್ ಸೊಸೈಟಿಯಲ್ಲಿ ಈ ದೇಶದ ಘನತೆವೆತ್ತ ಪಾರ್ಲಿಮೆಂಟಿನ ಗೌರವಾನ್ವಿತ ಸದಸ್ಯರಾದ ಏಶಾನ್ ಝಾಫ್ರಿಯವರು ಇದ್ದರು. ಗುಲ್ಬರ್ಗ್ ಸೊಸೈಟಿಯ ಭಯಭೀತ ಮುಸ್ಲಿಮ್ ಹೆಣ್ಣು ಮಕ್ಕಳು, ಗಂಡಸರು ಝಾಫ್ರಿಯವರ ಮನೆಯಲ್ಲಿ ಅವಿತುಕೊಂಡಿದ್ದರು. ಆದರೆ ನೂರಾರು ಸಂಖ್ಯೆಯಲ್ಲಿ ಮನೆಯ ಮೇಲೆ ಆಕ್ರಮಣ ನಡೆಸಿದ ಸಂಘಪರಿವಾರದ ರಕ್ಕಸರಿಂದ ಬಚಾವಾಗಲು ಈ ಸಂಸತ್ ಸದಸ್ಯರು ಸತತವಾಗಿ ಮೋದಿಗೆ ಫೋನು ಮಾಡುತ್ತಲೇ ಇದ್ದರು. ಆದರೆ ಅವರು ರಕ್ಷಣೆ ಕೊಡಲೇ ಇಲ್ಲ. ಅಂತಿಮವಾಗಿ ತನ್ನನ್ನು ಬೇಕಾದರೆ ಕೊಂದು ಉಳಿದವರನ್ನು ರಕ್ಷಿಸಿ ಎಂದು ಝಾಫ್ರಿಯವರು ನಿರಾಯುಧರಾಗಿ ಆ ಮತೋನ್ಮತ್ತ ಪಾತಕಿಗಳ ಮುಂದೆ ಹೋದರು. ಆದರೆ ಝಾಫ್ರಿಯವರನ್ನು ಆ ಪಾಶವೀ ಮನಸ್ಸಿನ ಜನ ಕೊಂದು ಬಿಸಾಡಿದ್ದಲ್ಲದೆ ಅಲ್ಲಿ ಅವಿತಿದ್ದವರನ್ನು ಕೊಂದುಹಾಕಿದರು. ಅದು ಹೇಗೋ ಬಚಾವಾದ ಝಾಫ್ರಿಯವರ ಹೆಂಡತಿ ಝಾಕಿಯಾ ಝಾಫ್ರಿ ಇದರ ಬಗ್ಗೆ ನಂತರ ಪೊಲೀಸರಿಗೆ ದೂರು ಸಲ್ಲಿಸಿ ಮೋದಿಯೇ ನೇರವಾಗಿ ತನ್ನ ಗಂಡನ ಕೊಲೆಗೆ ಕಾರಣವೆಂದು ಆಧಾರ ಸಮೇತ ವಾದಿಸುತ್ತ ಬಂದಿದ್ದಾರೆ.

ಈ ಕೇಸನ್ನೂ ಸುಪ್ರೀಂ ಕೋರ್ಟು ವಿಶೇಷ ತನಿಖಾ ತಂಡಕ್ಕೆ ವಹಿಸಿತು. ಆದರೆ ಇದು ನೇರವಾಗಿ ಮೋದಿಯನ್ನೇ ಆರೋಪಿಯೆಂದು ಸಾಬೀತು ಮಾಡುವ ಪ್ರಕರಣವಾದ್ದರಿಂದ ಪ್ರಾರಂಭದಿಂದಲೂ ತನಿಖಾ ತಂಡ ತನಿಖೆಯನ್ನು ದಾರಿ ತಪ್ಪಿಸುತ್ತಲೇ ಬಂದಿದೆ. ಈ ನಿರ್ದಿಷ್ಟ ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡಕ್ಕೆ ಗುಜರಾತ್ ಪೊಲೀಸ್ ಆಶೀಶ್ ಭಾಟಿಯಾ, ಶಿವಾನಂದ ಝಾ ಮತ್ತು ಗೀತಾ ಜೋಹ್ರಿ ಎಂಬ ಅಧಿಕಾರಿಗಳನ್ನು ಒದಗಿಸಿದೆ. ಇದರಲ್ಲಿ ಶಿವಾನಂದ ಝಾ ಎನ್ನುವವರು ಎಸಿಪಿ ಆಗಿದ್ದು 2002ರ ಹತ್ಯಾಕಾಂಡದಲ್ಲಿ ಇವರ ಪರಿಧಿಯಲ್ಲೇ 500ಕ್ಕೂ ಹೆಚ್ಚು ಮುಸ್ಲಿಮರ ಕಗ್ಗೊಲೆ ನಡೆದಿತ್ತು. ಅಲ್ಲದೆ ಇಡೀ ಹತ್ಯಾಕಾಂಡದಲ್ಲಿ ಮುಖ್ಯಮಂತ್ರಿಯಾಗಿದ್ದ ಮೋದಿಯ ನೇರ ಕೃಪಾಶೀರ್ವಾದ ಇತ್ತು ಎನ್ನುವ ಬಗ್ಗೆ ಹಲವು ಪುರಾವೆಗಳಿದ್ದರೂ ಆ ನಿಟ್ಟಿನಲ್ಲಿ ತನಿಖೆ ನಡೆಸದ ತನಿಖಾ ತಂಡದ ಪೂರ್ವಾಗ್ರಹ ಪೀಡಿತ ವಿಧಾನಕ್ಕೆ ಬೇಸತ್ತು ಇಬ್ಬರು ನಿಷ್ಠಾವಂತ ವಕೀಲರು ತಂಡಕ್ಕೆ ರಾಜೀನಾಮೆ ನೀಡಿಬಿಟ್ಟರು. ಎಲ್ಲಕ್ಕಿಂತ ಹೆಚ್ಚಾಗಿ ಸಂಜೀವ್ ಭಟ್ ಮತ್ತು ಅಶೀಶ್ ಕೇತನ್ ಎಂಬ ಇಬ್ಬರು ಹಿರಿಯ ಪೊಲೀಸ್ ಅಧಿಕಾರಿಗಳು ಫೆಬ್ರವರಿ 28ರಂದು ಮೋದಿ ನಡೆಸಿದ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ಸಂಘಪರಿವಾರದ ನೇತೃತ್ವದಲ್ಲಿ ಮರುದಿನದಿಂದ ನಡೆಯಲಿರುವ ಮುಸ್ಲಿಮರ ಕಗ್ಗೊಲೆಗಳ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳಬಾರದೆಂದು ಆದೇಶ ನೀಡಿದ್ದರ ಬಗ್ಗೆ ಸಾಕ್ಷ್ಯ ನೀಡಿದರೂ ಅದನ್ನು ವಿಶೇಷ ತನಿಖಾ ತಂಡ ಕುಂಟು ಕಾರಣಗಳನ್ನು ನೀಡಿ ಪರಿಗಣನೆಗೆ ತೆಗೆದುಕೊಳ್ಳಲಿಲ್ಲ.

ಈ ಪ್ರಕರಣದಲ್ಲಿ ವಿಶೇಷ ತನಿಖಾ ತಂಡ ಮೋದಿಯನ್ನು ಉಳಿಸಲು ನಡೆಸುತ್ತಿರುವ ವಿಶೇಷ ಕಸರತ್ತನ್ನು ಗಮನಿಸಿದ ಝಾಫ್ರಿಯವರು ಇದನ್ನು ಸುಪ್ರೀಂ ಕೋರ್ಟಿನ ಗಮನಕ್ಕೆ ತಂದರು. ಇದನ್ನು ಪರಿಗಣಿಸಿದ ಸುಪ್ರೀಂಕೋರ್ಟು ತನಿಖಾ ತಂಡದ ತನಿಖೆಯ ವಿಶ್ವಾಸಾರ್ಹತೆಯನ್ನು ಪರಿಶೀಲಿಸಲು ರಾಜು ರಾಮಚಂದ್ರನ್ ಎಂಬ ಹಿರಿಯ ಕಾನೂನು ತಜ್ಞರನ್ನು ಸಲಹೆಗಾರನನ್ನಾಗಿ ನೇಮಿಸಿತು. ರಾಜು ರಾಮಚಂದ್ರನ್ ಅವರು ಇರುವಷ್ಟು ಪುರಾವೆಗಳಲ್ಲಿ ಖಂಡಿತ ಮೋದಿಯ ವಿರುದ್ಧ ಮೊಕದ್ದಮೆ ಹೂಡಬಹುದೆಂದು ಶಿಫಾರಸ್ಸು ಮಾಡಿದ್ದಾರೆ. ಈ ಮಧ್ಯೆ ಗುಲ್ಬರ್ಗ್ ಸೊಸೈಟಿಯ ಹತ್ಯಾಕಾಂಡದಲ್ಲಿ ಮೋದಿಯ ಪಾತ್ರವಿದೆಯೇ ಎಂಬ ಬಗ್ಗೆ ಕಳೆದ ಜನವರಿಯಲ್ಲಿ ಕೋರ್ಟಿಗೆ ವಿಶೇಷ ತನಿಖಾ ತಂಡ ಹಾಜರು ಪಡಿಸಿದ ವರದಿಯನ್ನು ನಿನ್ನೆ ಕೋರ್ಟು ಬಹಿರಂಗಪಡಿಸಿದೆ. ಊಹಿಸಿದಂತೆ ತನಿಖಾ ತಂಡ ಮೋದಿಯ ಮೇಲೆ ಮೊಕದ್ದಮೆ ಹೂಡಲು ಯಾವುದೇ ಕಾರಣವಿಲ್ಲವೆಂದು ಅಭಿಪ್ರಾಯಿಸಿ ವರದಿ ನೀಡಿದೆ. ಇದರ ಬಗ್ಗೆ ಅಭಿಪ್ರಾಯ ನೀಡಿರುವ ಸಿಜೆಪಿಯ ತೀಸ್ತಾ ಸೆತೆಲ್‌ವಾದ್ ಅವರು "ಎಸ್‌ಐಟಿ ತಂಡ ಮೋದಿಯ ಮೇಲಿನ ಯಾವುದೇ ಆಪಾದನೆಗಳಿಗೆ ಆಧಾರವಿಲ್ಲವೆಂದು ಕೇಸನ್ನು ಮುಗಿಸುವ ವರದಿ ಕೊಟ್ಟಿದೆಯೆಂಬ ಸುದ್ದಿ ಮೊದಲಿಂದಲೂ ಇತ್ತು, ಅದಕ್ಕೆಂದೇ ನಮಗೆ ಆ ವರದಿಯ ಪ್ರತಿಯೊಂದನ್ನು ಕೊಡಬೇಕೆಂದು ನಾವು ಸತತವಾಗಿ ಆಗ್ರಹಿಸುತ್ತಿದ್ದೆವು. ಈಗ ಕೋರ್ಟ್ ಆದೇಶ ನಮ್ಮ ಅನುಮಾನವನ್ನು ಸಾಬೀತು ಪಡಿಸಿದೆಯಲ್ಲದೇ ನಮಗೆ ಒಂದು ಪ್ರತಿಯನ್ನು ಕೊಡಬೇಕೆಂದೂ ಎಸ್‌ಐಟಿಗೆ ಆದೇಶಿಸಿದೆ. ಸುಪ್ರೀಂಕೋರ್ಟು ಆದೇಶಕ್ಕೆ ಒಳಪಟ್ಟೇ ವಿಶೇಷ ತನಿಖಾ ತಂಡ ರಚಿತವಾಗಿದ್ದರೂ ಅದರಲ್ಲಿ ಅತ್ಯಂತ ಕೋಮುವಾದಿಯಾದ ಹಲವು ಸ್ಥಳೀಯ ಪೊಲೀಸ್ ಅಧಿಕಾರಿಗಳಿದ್ದರು ಹಾಗೂ ತನಿಖಾ ತಂಡ ಸಂಜೀವ್ ಭಟ್ ಮತ್ತು ಅಶೀಶ್ ಕೇತನ್‌ರಂಥ ಅಧಿಕಾರಿಗಳ ಸಾಕ್ಷ್ಯವನ್ನು ಪರಿಗಣಿಸಲು ಸಿದ್ಧವೇ ಇರಲಿಲ್ಲ. ಆದ್ದರಿಂದಲೇ ಎಸ್‌ಐಟಿ ವರದಿಯ ವಿಶ್ವಾಸಾರ್ಹತೆಯ ಬಗ್ಗೆ ಸಲಹೆ ಮಾಡಲು ಸುಪ್ರೀಂ ಕೋರ್ಟು ನೇಮಕ ಮಾಡಿದ್ದ ಸಲಹೆಗಾರ ರಾಜು ರಾಮಚಂದ್ರನ್ ಅವರ ಪ್ರಕಾರ ಮೋದಿಯ ಮೇಲೆ ಕೇಸು ಹೂಡಲು ಎಲ್ಲಾ ಕಾರಣಗಳು ಇವೆ ಎಂದು ವರದಿ ನೀಡಿದ್ದಾರೆ. ಕೋರ್ಟು ತನಿಖಾ ತಂಡ ಏನು ಹೇಳಿದೆಯೆಂದು ಹೇಳಿದೆಯಾಗಲೀ ಅದನ್ನು ಒಪ್ಪಿಕೊಂಡಿದ್ದೇವೆ ಎಂದೇನೂ ಹೇಳಿಲ್ಲ, ಆದ್ದರಿಂದ ನಮ್ಮ ಹೋರಾಟ ಮುಂದುವರೆಯುತ್ತದೆ" ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

2014ರ ಚುನಾವಣೆಯಲ್ಲಿ ಮೋದಿಯನ್ನು ಪ್ರಧಾನ ಮಂತ್ರಿ ಅಭ್ಯರ್ಥಿಯನ್ನಾಗಿ ಬಿಂಬಿಸಲು ಬಿಜೆಪಿ ಇನ್ನಿಲ್ಲದ ಸಾಹಸವನ್ನು ಮಾಡುತ್ತಿದೆ. ಇತ್ತೀಚೆಗೆ 'ಟೈಮ್' ಪತ್ರಿಕೆಯಲ್ಲೂ ಜಗತ್ತಿನ ನೂರು ಪ್ರಭಾವಿಗಳಲ್ಲಿ ಮೋದಿಯೂ ಒಬ್ಬ ಎಂದು ನಿರ್ಣಯಿಸಲು ಆತನ ಅನಿವಾಸಿ ವ್ಯಾಪಾರಿಗಳ ಕೂಟದಿಂದ ಪ್ರಯತ್ನಿಸಿ ವಿಫಲವಾಗಿತ್ತು. ಮೋದಿ ಸಹ ಸದ್ಭಾವನಾ ಯಾತ್ರಾ ಇನ್ನಿತ್ಯಾದಿಗಳ ಮೂಲಕ ಗಾಂಧಿ ಇಮೇಜನ್ನು ಪಡೆಯಲು ಪ್ರಯತ್ನಿಸುತ್ತಿದ್ದಾನೆ. ಇನ್ನು ಬಿಜೆಪಿ ಪಕ್ಷ ಗುಜರಾತ್ ಕಲಿಯುಗದ ಸ್ವರ್ಗ, ಅಲ್ಲಿನ ಅಭಿವೃದ್ಧಿಯನ್ನು ಮಾತ್ರ ನೋಡಿ, ಭಾರತವೂ ಹೀಗೆ ಭೂಸ್ವರ್ಗವಾಗುವುದನ್ನು ತಡೆಯಲು ವಿರೋಧಿಗಳು ಹತ್ಯಾಕಾಂಡವನ್ನು ಜನರು ಮರೆಯಲು ಬಿಡುತ್ತಿಲ್ಲ ಎಂದು ಆರೋಪಿಸುತ್ತಿದ್ದಾರೆ. ಜೊತೆಗೆ ಏನೂ ಮಾಡದೆಯೇ ಹೋರಾಡದೆಯೇ ಬಸವಳಿದ ಕೆಲವು ಬುದ್ಧಿಜೀವಿ ವರ್ಗ ಸಹ "ಇನ್ನು ಮುಂದಕ್ಕೆ ಹೋಗೋಣ. ಎಷ್ಟು ದಿನ ಹಳೆಯದರ ನೆನಪು?" ಎಂಬ ಬಿಜೆಪಿ ರಾಗವನ್ನು ತೋಡಿ ರಾಗದಲ್ಲಿ ಹಾಡುತ್ತಿದ್ದಾರೆ.

ಆದರೆ ಸಿಖ್ ಹತ್ಯಾಕಾಂಡಕ್ಕೆ 25 ವರ್ಷವಾದಾಗ 2009ರಲ್ಲಿ ಹತ್ಯಾಕಾಂಡಕ್ಕೆ ಬಲಿಯಾದ ಸಿಖ್ ಕುಟುಂಬದ ವ್ಯಕ್ತಿ ಹೇಳಿದ ಈ ಮಾತಲ್ಲಿ ಇತಿಹಾಸದ ಪಾಠವಿದೆ ಎಂಬುದನ್ನು ಯಾರೂ ಮರೆಯಬಾರದು: "1984ರಲ್ಲಿ ಸಿಖ್ ಹತ್ಯಾಕಾಂಡಕ್ಕೆ ಕಾರಣವಾದವರಿಗೆ ಸರಿಯಾದ ಶಿಕ್ಷೆ ಆಗಿದ್ದರೆ 2002ರಲ್ಲಿ ಮುಸ್ಲಿಂ ಹತ್ಯಾಕಾಂಡ ನಡೆಯುತ್ತಿರಲಿಲ್ಲ."

ಎಷ್ಟು ನಿಜವಲ್ಲವೇ?

❖

ನೋ ಕಾಮೆಂಟ್ಸ್

"ಎಸ್‌ಐಟಿ ತಂಡ ಮೋದಿಯ ಮೇಲಿನ ಯಾವುದೇ ಆಪಾದನೆಗಳಿಗೆ ಆಧಾರವಿಲ್ಲವೆಂದು ಕೇಸನ್ನು ಮುಗಿಸುವ ವರದಿ ಕೊಟ್ಟಿದೆಯೆಂಬ ಸುದ್ದಿ ಮೊದಲಿಂದಲೂ ಇತ್ತು, ಅದಕ್ಕೆಂದೇ ನಮಗೆ ಆ ವರದಿಯ ಪ್ರತಿಯೊಂದನ್ನು ಕೊಡಬೇಕೆಂದು ನಾವು ಸತತವಾಗಿ ಆಗ್ರಹಿಸುತ್ತಿದ್ದೆವು. ಈಗ ಕೋರ್ಟ್ ಆದೇಶ ನಮ್ಮ ಅನುಮಾನವನ್ನು ಸಾಬೀತುಪಡಿಸಿದೆಯಲ್ಲದೇ ನಮಗೆ ಒಂದು ಪ್ರತಿಯನ್ನು ಕೊಡಬೇಕೆಂದೂ ಎಸ್‌ಐಟಿಗೆ ಆದೇಶಿಸಿದೆ. ಸುಪ್ರೀಂ ಕೋರ್ಟು ಆದೇಶಕ್ಕೆ ಒಳಪಟ್ಟೇ ವಿಶೇಷ ತನಿಖಾ ತಂಡ ರಚಿತವಾಗಿದ್ದರೂ ಅದರಲ್ಲಿ ಅತ್ಯಂತ ಕೋಮುವಾದಿಯಾದ ಹಲವು ಸ್ಥಳೀಯ ಪೊಲೀಸ್ ಅಧಿಕಾರಿಗಳಿದ್ದರು ಹಾಗೂ ತನಿಖಾ ತಂಡ ಸಂಜೀವ್ ಭಟ್ ಮತ್ತು ಅಶೀಶ್ ಕೇತನ್‌ರಂಥ ಅಧಿಕಾರಿಗಳ ಸಾಕ್ಷ್ಯವನ್ನು ಪರಿಗಣಿಸಲು ಸಿದ್ಧವೇ ಇರಲಿಲ್ಲ, ಆದ್ದರಿಂದಲೇ ಎಸ್‌ಐಟಿ ವರದಿಯ ವಿಶ್ವಾಸಾರ್ಹತೆಯ ಬಗ್ಗೆ ಸಲಹೆ ಮಾಡಲು ಸುಪ್ರೀಂಕೋರ್ಟು ನೇಮಕ ಮಾಡಿದ್ದ ಸಲಹೆಗಾರ ರಾಜು ರಾಮಚಂದ್ರನ್ ಅವರ ಪ್ರಕಾರ ಮೋದಿಯ ಮೇಲೆ ಕೇಸು ಹೂಡಲು ಎಲ್ಲಾ ಕಾರಣಗಳು ಇವೆ ಎಂದು ವರದಿ ನೀಡಿದ್ದಾರೆ. ಕೋರ್ಟು ತನಿಖಾ ತಂಡ ಏನು ಹೇಳಿದೆಯೆಂದು ಹೇಳಿದೆಯಾಗಲೀ ಅದನ್ನು ಒಪ್ಪಿಕೊಂಡಿದ್ದೇವೆ ಎಂದೇನೂ ಹೇಳಿಲ್ಲ, ಆದ್ದರಿಂದ ನಮ್ಮ ಹೋರಾಟ ಮುಂದುವರೆಯುತ್ತದೆ."



- ತೀಸ್ತಾ ಸೆತೆಲ್‌ವಾದ್

"ನಾನು ಭ್ರಷ್ಟಾಚಾರಿಯೂ ಅಲ್ಲ, ದುರಹಂಕಾರಿಯೂ ಅಲ್ಲ, ಅಧಿಕಾರ ದುರುಪಯೋಗಪಡಿಸಿಕೊಂಡವನಲ್ಲ, ಜನತೆ ಪರವಾಗಿಲ್ಲ ಎಂದು ಪಾಸ್ ಮಾರ್ಕ್ ಕೊಡುವ ರೀತಿ ಆಡಳಿತ ನೀಡಿದ್ದೇನೆ. ಮುಂದೆಯೂ ಹುಟ್ಟೂರು ಮಂಡೆಕೋಲಿಗೆ ಗೌರವ ತರುವ ರೀತಿಯಲ್ಲಿ ಆಡಳಿತ ಕೊಡುತ್ತೇನೆ."

- ಸದಾನಂದ ಗೌಡ


"ಈಗ ಸರ್ಕಾರ ಅನುಸರಿಸುತ್ತಿರುವ ಬಡತನ ರೇಖೆಯೆಂಬ ಕಲ್ಪನೆಯೇ ಅಸಂಬದ್ಧ. ನಿರ್ದಿಷ್ಟ ಕ್ಯಾಲೋರಿ ಆಹಾರದ ಬಳಕೆಯ ಮಾನದಂಡವಾಗಲೀ, ವೆಚ್ಚದ ಮಾನದಂಡವಾಗಲೀ ಬಡತನದ ಎಲ್ಲಾ ಆಯಾಮಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದೇ ಇಲ್ಲ, ಆದ್ದರಿಂದ ಬಡತನ ರೇಖೆಯ ಮಾನದಂಡವನ್ನೇ ತೆಗೆದುಹಾಕಬೇಕು."

- ಎನ್. ಕೃಷ್ಣರಾಜ್, ಅರ್ಥಶಾಸ್ತ್ರಜ್ಞ

"ಇಂಗ್ಲಿಷ್ ಪರಂಪರೆಯನ್ನು ಮೆಚ್ಚಿಕೊಳ್ಳುವಷ್ಟು ಕೂಡಾ ಹಳೆಯ ಕನ್ನಡ ಕಾವ್ಯಗಳನ್ನು ಈಗಿನ ಕವಿಗಳು ಸಮೀಪಕ್ಕೆ ಬರಲು ಬಿಡುತ್ತಿಲ್ಲ. ಇದರಿಂದ ಪ್ರಸ್ತುತ ಕಾವ್ಯಗಳಲ್ಲಿ ಅಲಂಕಾರಗಳು, ಕತೆಗಳು ಕಾಣುವುದಿಲ್ಲ. ಇನ್ನು ಕಾವ್ಯಗಳಲ್ಲಿ ಉದ್ದೇಶಪೂರ್ವಕವಾಗಿ ಛಂದಸ್ಸನ್ನು ನಿರಾಕರಿಸಲಾಗುತ್ತಿದೆ."

- ಚಂದ್ರಶೇಖರ ಕಂಬಾರ

"ಬೆಂಗಳೂರಿನಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪಗೆ ಕುಳಿತುಕೊಳ್ಳಲು ಕುರ್ಚಿ ಇಲ್ಲ, ಹೀಗಾಗಿ ಬರಗಾಲದ ಹೆಸರಲ್ಲಿ ಪ್ರವಾಸ ಮಾಡುತ್ತಿದ್ದಾರೆ. ಅವರಿಗೆ ಸಿಎಂ ಕುರ್ಚಿ 'ಬರ' ಎದುರಾಗಿದೆ. ರಾಜ್ಯದ ಬರಕ್ಕಿಂತ ಅವರಿಗೆ ಕುರ್ಚಿ ಬರವೇ ಹೆಚ್ಚಾಗಿದೆ."



- ವೀರಪ್ಪ ಮೊಯ್ಲಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಅಧಿಕಾರಾವಧಿಯಲ್ಲಿ ಗಣಿ ಗುತ್ತಿಗೆಯೊಂದನ್ನು ಮಂಜೂರು ಮಾಡಲು ತಮ್ಮ ಕುಟುಂಬದ ಸದಸ್ಯರ ಪಾಲುದಾರಿಕೆಯ ಭಗತ್ ಹೋಮ್ಸ್ ಮತ್ತು ಧವಳಗಿರಿ ಪ್ರಾಪರ್ಟೀಸ್‌ಗೆ ಸಂದಾಯವಾದ 6 ಕೋಟಿ ರೂಪಾಯಿಗಳು ಸಾಲವೇ ವಿನಾ ಅಕ್ರಮ ಪ್ರತಿಫಲ ಅಲ್ಲ. 2004ರಲ್ಲೇ ತಾವು ಮತ್ತು ತಮ್ಮ ಮಕ್ಕಳು ಆಸ್ತಿ ಪಾಲು ಮಾಡಿಕೊಂಡಿದ್ದು ಪ್ರತ್ಯೇಕವಾಗಿ ವಾಸವಾಗಿದ್ದೇವೆ. ತಮ್ಮ ಯಾವುದೇ ಮಕ್ಕಳೊಂದಿಗೆ ಯಾವುದೇ ಹಂತದಲ್ಲಿ ಬಿಸಿನೆಸ್ ವ್ಯವಹಾರಕ್ಕೆ ಪ್ರವೇಶಿಸಿಲ್ಲ."

- ಯಡಿಯೂರಪ್ಪ

ನಮಗೆಲ್ಲ ಧಿಕ್ಕಾರ ಹೇಳಿಹೋದ ಕಂದ ಆಫ್ರಿನ್

ಕಂದ ಆಫ್ರಿನ್,

ನಿನಗೆ ಮೂರು ತಿಂಗಳೂ ತುಂಬಿರಲಿಲ್ಲ. ಆದರೆ ...ಷ್ಟು ಜನ ಮೂವತ್ತು ವರ್ಷಗಳಲ್ಲೂ ಕಾಣದಷ್ಟು ...ಶ ನೋವು, ಅನ್ಯಾಯ ಮತ್ತು ಹಿಂಸೆಯನ್ನು ಈ ...ಮಿಯ ಮೇಲಿದ್ದ ಅಲ್ಪಾವಧಿಯಲ್ಲೇ ಕಂಡ ನೀನು ...ಗೆ 'ನನಗೆ ಈ ನಿಮ್ಮ ಜಗತ್ತೇ ಬೇಡ' ಎಂದು ...ಲ್ಲರಿಗೂ ಧಿಕ್ಕಾರ ಹೇಳಿ ಹೊರಟುಹೋಗಿರುವೆ. ... ಧಿಕ್ಕಾರದ ಮುಂದೆ ಪ್ರತಿಕ್ರಿಯಿಸಲಾಗದೆ ನಾವೆಲ್ಲ ...ತ್ತು ತಲೆತಗ್ಗಿಸಿ ನಿಂತಿದ್ದೇವೆ.

...ನ್ನ ಸಾವಿಗೆ ಕಾರಣ ನಿನಗೆ ಜನ್ಮ ನೀಡಿದ ತಂದೆ. ... ಅವನ ಕೃತ್ಯದಲ್ಲಿ ನಾವೆಲ್ಲರೂ ಪಾಲುದಾರರು. ... ಗೊತ್ತ? ನೀನು ಈ ಜಗತ್ತಿನಲ್ಲಿ ಇದ್ದದ್ದು ನಮ್ಮೆಲ್ಲರಿಗೂ ...ದಿನಗಳ ಹಿಂದೆ ಮಾತ್ರ ಗೊತ್ತಾಗಿದ್ದರೂ ನಿನ್ನ ಕತ್ತು ...ಕಿದ ಆತನ ಕೈಗಳಲ್ಲಿನ ಸಾಮಾಜಿಕ ಧೋರಣೆ ...ಯಲ್ಲಿ, ಅದು ನಮ್ಮ ನಡುವೆ ಸಾವಿರಾರು ವರ್ಷಗಳ ...ನಿಂದಲೂ ಇದ್ದದ್ದೇ. ಆದರೆ ಅದನ್ನು ಬದಲಾಯಿಸು ... ಮನಷ್ಯರನ್ನು ತಿದ್ದುವಲ್ಲಿ, ಆ ಮೂಲಕ ನಿನ್ನಂತಹ ...ಾಯಕ ಕಂದಮ್ಮಗಳನ್ನು ರಕ್ಷಿಸುವಲ್ಲಿ ನಾವೆಲ್ಲರೂ ...ತಿರುವುದರಿಂದ ನಾವೂ ನಿನ್ನ ಸಾವಿಗೆ ಕಾರಣರು ...ದು ಹೇಳುತ್ತಿದ್ದೇನೆ.

...ಯಾವ ಕಾರಣಕ್ಕೆ ನಮ್ಮ ಸಮಾಜ ನಿನಗೆ ಈ ಶಿಕ್ಷೆಯನ್ನು ...ತು? ನೀನು ಯಾವ ತಪ್ಪನ್ನು ಮಾಡಿದ್ದೆ? ನೀನು ...ಕೋ ಹೆಣ್ಣೋ ಎಂಬುದೂ ನಿನಗೆ ಗೊತ್ತಿರಲಿಲ್ಲ. ... ಅಮ್ಮ ರೇಶ್ಮಾಳ ಎದೆಹಾಲಿನ ವಾಸನೆ ಹೊರತಾಗಿ ...ಜಗತ್ತಿನ ಇತರೆ ಯಾವುದರ ಬಗ್ಗೆಯೇ ನಿನಗೆ ಗೊತ್ತಿರ... ಅಷ್ಟೇ ಯಾಕೆ, ನಿನ್ನ ಹೆಸರು ಆಫ್ರಿನ್ ಎಂಬ ...ವೂ ನಿನಗೆ ಇದ್ದಿರಲಿಕ್ಕಿಲ್ಲ. ಆದರೂ ನಿನ್ನ ಅಪ್ಪ ...ಸಿಕೊಂಡವನು ನಿನ್ನ ಮೆದುಳೇ ನಿನ್ನ ತಲೆಬುರುಡೆಯಲ್ಲಿ ...ವಾಗುವಂತೆ ನಿನ್ನನ್ನು ತಳ್ಳಾಡಿದ. ನಿನ್ನ ಕಣ್ಣುಗುಡ್ಡೆಯಲ್ಲಿ ...ಸ್ರಾವವಾಗಿ ನೀನು ಕುರುಡಿಯಾಗುವಂತೆ ಮಾಡಿದ. ...ಕ್ಕೆ ದೇಹವನ್ನು ಹುಚ್ಚು ಹಿಡಿದ ನಾಯಿಗಿಂತಲೂ ...ರವಾಗಿ ಕಚ್ಚಿದ್ದ. ಹಾಗೆ ಆತ ಮಾಡಿದ್ದಕ್ಕೆ ಕಾರಣ ...ು ಗೊತ್ತಾ ಆಫ್ರಿನ್? ಈ ಪುರುಷ ಪ್ರಧಾನ ಸಮಾಜದಲ್ಲಿ ...ಡು ಮಕ್ಕಳಿಗೆ ಸ್ವಾಗತ ಇದೆಯೇ ಹೊರತು ನಿನ್ನಂತಹ ...ಣ್ಣು ಜೀವಗಳಿಗಲ್ಲ.

... ನೀನೆಷ್ಟು ಮುದ್ದಾಗಿದ್ದೆ ಆಫ್ರಿನ್. ನಿನ್ನನ್ನು ನೋಡಿದ ...ಾರಿಗಾದರೂ ನಿನ್ನ ದುಂಡುದುಂಡಾದ ಗಲ್ಲಗಳಿಗೆ ...ುತ್ತಿಡಬೇಕೆನಿಸುತ್ತಿತ್ತು, ನೀನು ಅಸಹಾಯಕಳಾಗಿ ಆಸ್ಪತ್ರೆಯ ...ಾಸಿಗೆಯ ಮೇಲೆ ಮಲಗಿದ್ದಾಗ ಹೇಗಾದರೂ ಮಾಡಿ ...ನ್ನ ಪ್ರಾಣವನ್ನು ರಕ್ಷಿಸಬೇಕು ಎನಿಸುತ್ತಿತ್ತು. ನಿನ್ನನ್ನು ಆ ...ತಿಗೆ ದೂಡಿದ ಉಮರ್ ಫಾರೂಕ್ ಎಂಬ ...ಾಲೆಗಡುಕನನ್ನು ಸ್ಥಳದಲ್ಲೇ ಸಿಗಿದು ಬಿಡಬೇಕೆನಿಸುವಷ್ಟು ...ೋಪ ಉಕ್ಕಿ ಬರುತ್ತಿತ್ತು.

ಆದರೆ ವಾಸ್ತವ ಏನು ಗೊತ್ತಾ ಆಫ್ರಿನ್? ನೀನು ...ಷ್ಟೇ ಚಂದ ಇರಲಿ, ಎಷ್ಟೇ ಬುದ್ಧಿವಂತೆಯಾಗಿರಲಿ, ...ಮುಂದೊಂದು ದಿನ ನೀನು ಎಷ್ಟೇ ದೊಡ್ಡ ಸಾಧನ ...ಮಾಡುವವಳಾಗಿರಲಿ, ಅದೆಲ್ಲದರ ಮುಂದೆ ನೀನು ಹೆಣ್ಣು ...ಎಂಬ ಒಂದೇ ಕಾರಣಕ್ಕೇ ನಿನ್ನಂತಹವರು ಹುಟ್ಟುವುದೇ ...ಬೇಡ ನಮ್ಮ ಸಮಾಜಕ್ಕೆ. ಅದು ಗೊತ್ತಿಲ್ಲದ ನಿನ್ನಂತಹ ...ಲಕ್ಷಾಂತರ ಹುಡುಗಿಯರು ಹಟ ತೊಟ್ಟವರಂತೆ ಪ್ರತಿವರ್ಷ ...ಾರತದಲ್ಲಿ ಹುಟ್ಟುತ್ತಿರುತ್ತೀರಿ. ಬೇಡಬೇಡವೆಂದರೂ ಹೆಣ್ಣಾಗಿ ...ಹುಟ್ಟಿ ಬಂದ 'ತಪ್ಪಿಗೆ' ಸಾಯುತ್ತೀರಿ.

ನಿನ್ನಂತಹವರು ಈ ಭೂಮಿಯ ಮೇಲೆ ಜನ್ಮವೆತ್ತಲೇ ...ಾರದೆಂದು ಇಲ್ಲಿಯ ಜನ ಎಂತೆಂತಹ ವ್ಯವಸ್ಥೆ ಮಾಡಿ ...ಕೊಂಡಿದ್ದಾರೆ ಎಂಬುದು ಖಂಡಿತವಾಗಿಯೂ ನಿನಗೆ ...ಗೊತ್ತಿರಲಿಲ್ಲ, ಹೇಳುತ್ತೇನೆ ಕೇಳು. ನಿನ್ನಂತಹ ಹೆಣ್ಣು ಮಕ್ಕಳು ...ನಿಮ್ಮ ತಾಯಿಯ ಗರ್ಭದಲ್ಲಿರುವಾಗಲೇ ನಿಮ್ಮ ...ಲಿಂಗವನ್ನು ಪತ್ತೆ ಮಾಡಿ ಅಲ್ಲೇ ನಿಮ್ಮನ್ನು ಕೊಂದು ...ಹಾಕುತ್ತಾರೆ. ಇದು ಕಾನೂನುಬಾಹಿರ ಹೌದು. ಆದರೆ ಬೇಡವಾದ ನಿನ್ನಂತಹವರ ಆಗಮನವನ್ನು ತಡೆಯಬೇಕೆಂದು ಪಣ ತೊಟ್ಟಿರುವ ನಮ್ಮ ಸಮಾಜಕ್ಕೆ ಕಾನೂನು ಎಂತಹ ಅಡ್ಡಿ?



ಇವತ್ತು ತಾಯಿಯ ಗರ್ಭದಲ್ಲಿರುವಾಗಲೇ ಹೆಣ್ಣು ಮಕ್ಕಳನ್ನು ಕೊಂದು ಹಾಕಲೆಂದೇ ಬರೋಬ್ಬರಿ 1,000 ಕೋಟಿ ರೂಪಾಯಿಗಳ ದೊಡ್ಡ ಅಕ್ರಮ ವ್ಯವಸ್ಥೆಯೇ ನಮ್ಮ ದೇಶದಾದ್ಯಂತ ತಲೆ ಎತ್ತಿ ನಿಂತಿದೆ. ಆ ವ್ಯವಸ್ಥೆಯ ನೆರವಿನಿಂದಲೇ ಕಳೆದ ಒಂದು ದಶಕದಲ್ಲಿ 80,00,000 ಹೆಣ್ಣುಮಕ್ಕಳನ್ನು ಜನ್ಮವೆತ್ತುವ ಮುನ್ನವೇ ಅವರ ತಾಯಿಂದಿರ ಗರ್ಭಗಳಿಂದ ನಿರ್ದಾಕ್ಷಿಣ್ಯವಾಗಿ ಕಿತ್ತು ಹೊಸಕಿಹಾಕಲಾಗಿದೆ.

ಇಂತಹ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದರೂ ನಿನ್ನಂತಹವರು ಅದು ಹೇಗೋ ಈ ದುಷ್ಟ ವ್ಯವಸ್ಥೆಯ ಸಂದಿಗಳಲ್ಲಿ ತೂರಿ ಈ ಭೂಮಿಯ ಮೇಲೆ ಜನ್ಮವೆತ್ತೇಬಿಡುತ್ತೀರಿ. ಆದರೆ ಅದಕ್ಕೂ ಪರಿಹಾರಗಳನ್ನು ನಮ್ಮ ಜನ ಹುಡುಕಿಕೊಂಡಿದ್ದಾರೆ. ನಿನ್ನನ್ನಾದರೂ ನಿನ್ನ ಅಮ್ಮ ಆಸ್ಪತ್ರೆಗೆ ಸೇರಿಸುವ ಮೂಲಕ ನಿನಗಾದ ಅನ್ಯಾಯದ ಬಗ್ಗೆ ಜನರಿಗೆ ತಿಳಿಸಿದರು. ಆದರೆ ನಿನ್ನಷ್ಟೂ 'ಅದೃಷ್ಟ'ವಂತರಲ್ಲದ ಸಾವಿರಾರು ಹಾಲುಗಲ್ಲದ ಹೆಣ್ಣು ಕಂದಮ್ಮಗಳು 'ಆಕಸ್ಮಿಕ'ವಾಗಿ ನೀರು ತುಂಬಿರುವ ಬಕೆಟ್ಟಿಗೆ ಬಿದ್ದೋ ವಿಷವನ್ನು ತಿಂದೋ ಸಾವಿಗೀಡಾಗುತ್ತಾರೆ. ಇಲ್ಲವೆಂದರೆ ಅವರನ್ನು ಜೀವಂತವಾಗಿ ಮಣ್ಣಿನ ಮಡಿಕೆಯಲ್ಲಿಟ್ಟು, ಭೂಮಿಯಲ್ಲಿ ಹೂತಿಟ್ಟು ಸಾಯಿಸಲಾಗುತ್ತದೆ. ಅಂತಹ ಎಲ್ಲ ಸಾವುಗಳನ್ನು 'ಆಕಸ್ಮಿಕ ಅಪಘಾತ' ಎಂದೇ ನಮ್ಮ ವ್ಯವಸ್ಥೆ ದಾಖಲಿಸುತ್ತದೆ.



ಕಂದ ಆಫ್ರಿನ್, ನೀನು ನಮಗೆಲ್ಲ ಧಿಕ್ಕಾರ ಹೇಳಿಹೋಗುವ ಕೇವಲ ಒಂದು ತಿಂಗಳ ಮುನ್ನ ನಿನ್ನಂತಹ ಮತ್ತೋರ್ವ ನತದೃಷ್ಟ ಹೆಣ್ಣು ಕೂಸು ಕೂಡ ದೆಹಲಿಯ ಆಸ್ಪತ್ರೆಯಲ್ಲಿ ಎರಡು ತಿಂಗಳ ಕಾಲ ಸಾವುಬದುಕಿನ ನಡುವೆ ಹೋರಾಟ ಮಾಡಿ ಕೊನೆಗೂ ಸೋಲೊಪ್ಪಿ ನಿನ್ನಂತೆಯೇ ಹೊರಟುಹೋದಳು. ಅವಳ ಹೆಸರು ಫಾಲಕ್.

ಆಕೆಗೆ ಮೂರು ವರ್ಷವಾಗಿತ್ತು. ಅವಳನ್ನು ಪ್ರಖ್ಯಾತ ಏಮ್ಸ್ ಆಸ್ಪತ್ರೆಗೆ ದಾಖಲಿಸಿದಾಗ ಆಕೆಯ ಎರಡು ಕೈಗಳೂ ಮುರಿದಿದ್ದವು. ತಲೆಬುರುಡೆಯಲ್ಲಿ ಬಿರುಕು ಮೂಡಿತ್ತು. ಅವಳ ಮೈಮೇಲೂ ಹತ್ತಾರು ಗಾಯಗಳಾಗಿದ್ದವು. ಆಕೆಯ ಪುಟ್ಟದೇಹದ ಮೇಲಾದ ದಾಳಿಯಿಂದ ಆಕೆಯೂ ನಿನ್ನಂತೆಯೇ ಪ್ರಜ್ಞಾಹೀನಳಾಗಿದ್ದಳು. ಈ ಫಾಲಕ್ ಯಾರು ಎಂದು ಪತ್ತೆಹಚ್ಚಲು ಹೊರಟವರ ಮುಂದೆ ನಮ್ಮ ದೇಶದ ಸಾವಿರಾರು ಹೆಣ್ಣುಮಕ್ಕಳ ದಾರುಣ ಕತೆಯೇ ತೆರೆದುಕೊಂಡಿತ್ತು.

ಫಾಲಕ್‌ಳನ್ನು ಆಸ್ಪತ್ರೆಗೆ ದಾಖಲಿಸಿದ್ದು ಹದಿನೈದು ವರ್ಷ ವಯಸ್ಸಿನ ಹುಡುಗಿಯೊಬ್ಬಳು. ಆಕೆ ತನ್ನ ಕುಡುಕ ಅಪ್ಪ ಜಿತೇಂದರ್ ಗುಪ್ತ ಕೊಡುತ್ತಿದ್ದ ಹೊಡೆತಗಳಿಂದ ತಪ್ಪಿಸಿಕೊಳ್ಳಲು ಮನೆಯಿಂದ ಓಡಿಬಂದಿದ್ದ ಮತ್ತೊಬ್ಬ ಅಮಾಯಕ ಹೆಣ್ಣು ಮಗಳೇ. ಹಾಗೆ ಓಡಿಬಂದವಳು ಸಿಕ್ಕಿಹಾಕಿಕೊಂಡಿದ್ದು ಸಂದೀಪ್ ಪಾಂಡೆ ಎಂಬ ತಲೆಹಿಡುಕನ ಕೈಯಲ್ಲಿ. ಆ ಅಪ್ರಾಪ್ತ ಹುಡುಗಿಯನ್ನು ತನ್ನ ಕಾಮತೃಷೆಗೆ ಬಳಸಿಕೊಂಡ ಪಾಂಡೆ ಆನಂತರ ಆಕೆಯನ್ನು ಮುದುಕನೊಬ್ಬನಿಗೆ ಮಾರಿದ್ದ. ಆ ಮುದುಕನಿಗೆ ಆಕೆ ಸಾಕೆನಿಸಿದಾಗ ಅವಳನ್ನು ರಾಜ್‌ಕುಮಾರ್ ಎಂಬಾತನಿಗೆ ಮಾರಿದ್ದ. ಆ ರಾಜ್‌ಕುಮಾರ್‌ನ ಲೈಂಗಿಕ ದಾಳಿಗೂ ಆಕೆ ತುತ್ತಾಗಿದ್ದಳು. ಆಕೆಯ ಬದುಕೇ ಹೀಗೆ ಜರ್ಜರಿತವಾಗಿದ್ದಾಗಲೇ ಆಕೆಯ ಕೈಗೆ ಮೂರು ವರ್ಷದ ಫಾಲಕ್‌ಳನ್ನು ರಾಜ್‌ಕುಮಾರ್ ನೀಡಿದ್ದ. ಅದೇ ಫಾಲಕ್‌ಳ ಸಾವಿಗೆ ನಾಂದಿ ಹಾಡಿತ್ತು. ಇಲ್ಲಿ ಆ ಬಾಲಕಿಯ ತಪ್ಪೇನು? ಆಕೆಯನ್ನು ತಮ್ಮ ತೀಟೆಗಳಿಗೆ ಉಪಯೋಗಿಸಿಕೊಂಡ ಪುರುಷರ ತಪ್ಪೇನು?



ಕಂಡಹಾಗೆ

• ಗೌರಿ ಲಂಕೇಶ್

ಫಾಲಕ್‌ಳ ತಾಯಿ ಮುನ್ನಿಯ ಬದುಕೂ ಒಂದು ದುರಂತಗಾಥೆಯೇ. ಬಿಹಾರ ರಾಜ್ಯದ ಮುನ್ನಿ ಮೂರು ಮಕ್ಕಳನ್ನು ಹೆತ್ತನಂತರ ಅವಳ ಗಂಡ ಅವಳನ್ನು ತೊರೆದು ಎಲ್ಲಿಗೋ ಓಡಿಹೋದ. ಅನಕ್ಷರಸ್ಥಳಾದ ಮುನ್ನಿ ತನ್ನ ಮೂರು ಮಕ್ಕಳನ್ನು ಸಾಕುವುದು ಹೇಗೆ ಎಂದು ಕಂಗಾಲಾಗಿದ್ದಾಗ ದೆಹಲಿಯ ಶಾ ಹುಸೇನ್ ಎಂಬಾತ ಅವರೆಲ್ಲರನ್ನು ನೋಡಿಕೊಳ್ಳುವ ಭರವಸೆ ನೀಡಿದ. ಬದುಕಿಗೊಂದು ಆಶ್ರಯ ಸಿಕ್ಕಿತು ಎಂದು ನಂಬಿದ ಮುನ್ನಿ ಕೆಲಕಾಲ ಹುಸೇನನೊಂದಿಗೆ ಜೀವನ ನಡೆಸಿದಳು. ಆದರೆ ಕೆಲವು ತಿಂಗಳ ನಂತರ ಹುಸೇನ್ ಮುನ್ನಿಯನ್ನು ರಾಜಸ್ಥಾನದ ಪುರುಷನೊಬ್ಬನಿಗೆ ಮಾರಿದ; ಮುನ್ನಿಯನ್ನು ಮಾರಾಟ ಮಾಡಿದ್ದರಿಂದ ಬಂದ ಹಣದಲ್ಲಿ ಅವಳ ಮೂರು ಮಕ್ಕಳನ್ನು ಸಾಕುವುದಾಗಿ ಹೇಳಿದ. ವಿಧಿ ಇಲ್ಲದೆ ಅದಕ್ಕೊಪ್ಪಿದ ಮುನ್ನಿ ರಾಜಸ್ಥಾನಕ್ಕೆ ಹೋದಳು. (ಈಗ ರಾಜಸ್ಥಾನ, ಹರ್ಯಾಣ ತರಹದ ರಾಜ್ಯಗಳಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ ಇರುವುದರಿಂದ ಅಲ್ಲಿ ಹೀಗೆ 'ಪತ್ನಿ'ಯನ್ನು ಮಾರಾಟ ಮಾಡುವ ಪದ್ಧತಿ ಜಾರಿಗೆ ಬರುತ್ತಿದೆ. ಮಹಿಳೆಯರ ಸಂಖ್ಯೆ ಕಡಿಮೆ ಆಗಿರುವುದರ ಹಿಂದೆ ಅಮಾಯಕ ಹೆಣ್ಣು ಮಕ್ಕಳು ಚಿಕ್ಕವರಿರುವಾಗಲೇ ಅವರನ್ನು ಕೊಂದಿದ್ದೇ ಕಾರಣವಾಗಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ). ಮುನ್ನಿ ಅತ್ತ ಹೋಗುತ್ತಿದ್ದಂತೆ ಇತ್ತ ಹುಸೇನ್ ಅವಳ ಮೂವರು ಮಕ್ಕಳನ್ನೂ ಮಾರಿ, ಹಣವನ್ನೆಲ್ಲ ತನ್ನ ಜೇಬಿಗೆ ತುಂಬಿಕೊಂಡು ನಾಪತ್ತೆಯಾದ. ಇದರಲ್ಲಿ ಮುನ್ನಿಯ ತಪ್ಪೇನು? ಆಕೆಯ ಅಸಹಾಯಕತೆಯನ್ನೇ ಬಂಡವಾಳ ಮಾಡಿಕೊಂಡು ಆಕೆಯನ್ನಲ್ಲದೆ ಆಕೆಯ ಮಕ್ಕಳನ್ನೂ ಮಾರಿದ ಹುಸೇನನ ತಪ್ಪೇನು?

ಕಂದ ಆಫ್ರಿನ್, ದೇವರ ದಯೆಯಿಂದ ಆಕಸ್ಮಾತ್ ನೀನು ಮತ್ತು ಫಾಲಕ್ ಬದುಕುಳಿದಿದ್ದರೆ ನಿಮಗೆ ಎಂತಹ ಭವಿಷ್ಯ ಕಾದಿತ್ತು ಗೊತ್ತಾ ಮರಿ? ಹೇಗಿದ್ದರೂ ನಿಮ್ಮಿಬ್ಬರ ಅಪ್ಪಂದಿರಿಗೆ ಮತ್ತು ಅವರು ಭಾಗವಾಗಿರುವ ನಮ್ಮ ಸಮಾಜಕ್ಕೆ ನೀವು ಬೇಡವಾದವರಾದ್ದರಿಂದ ನಿಮಗೆ ಐದು ವರ್ಷ ವಯಸ್ಸಾಗುವ ಮುನ್ನವೇ ನೀವು ನಿಮ್ಮ ಸಮಾಧಿ ಸೇರಿರುತ್ತಿದ್ದಿರಿ. ಹಾಗೊಮ್ಮೆ ದೇವರ ದಯೆ ನಿಮ್ಮ ಮೇಲೆ ಮುಂದುವರೆದಿರುತ್ತಿದ್ದರೆ ನೀವು ಸಮಾಧಿಯಿಂದ ಪಾರಾದರೂ ನಮ್ಮ ದೇಶದ ಶೇ. 48 ಮಕ್ಕಳಂತೆ ನೀವೂ ಅಪೌಷ್ಟಿಕತೆಯಿಂದ ನರಳುತ್ತಿದ್ದಿರಿ.

ಅದನ್ನೂ ನೀವು ಹೇಗೋ ಹಾದುಬಂದಿರಿ ಎಂದಿಟ್ಟು ಕೊಂಡರೂ ನಿಮ್ಮ ಬದುಕು ಸುಲಭವಾಗಿರುತ್ತಿರಲಿಲ್ಲ. ಪ್ರತಿವರ್ಷ ನಮ್ಮ ದೇಶದಲ್ಲಿ ಕಾಮಾಟಿಪುರಗಳಿಗೆ ಮಾರಾಟವಾಗುತ್ತಿರುವ ಹೆಣ್ಣುಮಕ್ಕಳ ಸಂಖ್ಯೆ ಅಂಬಾನಿಗಳ ಸ್ಟಾಕ್ ವ್ಯಾಲ್ಯೂಗಿಂತಲೂ ವೇಗವಾಗಿ ಏರುತ್ತಿವೆ. ಇತ್ತೀಚೆಗೆ ಪ್ರಕಟಗೊಂಡ ಒಂದು ವರದಿಯ ಪ್ರಕಾರ ಪ್ರತಿವರ್ಷ ಹೀಗೆ ಮಾರಾಟವಾಗುತ್ತಿರುವ ಅಮಾಯಕ ಹೆಣ್ಣುಮಕ್ಕಳ ಸಂಖ್ಯೆ ಶೇ. 20ರಷ್ಟು ಹೆಚ್ಚುತ್ತಿದೆ. ಬೆಳೆದು ನಿಂತ ನಿನ್ನಂತಹವರು ಆ ಮಾರುಕಟ್ಟೆಯಲ್ಲಿ ವಸ್ತುಗಳಾಗುತ್ತಿದ್ದಿರೇನೋ....

ಅದೆಲ್ಲ ಇರಲಿ ಆಫ್ರಿನ್. ನೀನು ಸಾವಿನ ದವಡೆಯಲ್ಲಿ ಸಿಕ್ಕಿಹಾಕಿಕೊಂಡ ದಿನ ದೂರದ ಜೋಧಪುರ್ ಎಂಬ ನಗರದಲ್ಲಿ ಏನಾಯಿತು ಗೊತ್ತಾ? ಅಲ್ಲಿನ ಒಂದು ಆಸ್ಪತ್ರೆಯಲ್ಲಿ ಇಬ್ಬರು ಮಹಿಳೆಯರಿಗೆ ಹೆರಿಗೆಯಾಗಿತ್ತು, ಒಬ್ಬಳಿಗೆ ಗಂಡು ಮಗು ಹುಟ್ಟಿದ್ದರೆ ಇನ್ನೊಬ್ಬಳಿಗೆ ಹೆಣ್ಣು ಮಗುಹುಟ್ಟಿತ್ತು. ಆದರೆ ಆಸ್ಪತ್ರೆಯವರು ಗೊಂದಲ ಮಾಡಿಕೊಂಡಿದ್ದರಿಂದ ಆ ಇಬ್ಬರು ತಾಯಿಂದಿರೂ ತಾವೇ ಗಂಡು ಮಗುವಿಗೆ ಜನ್ಮ ಕೊಟ್ಟದ್ದೆಂದು ಜಗಳಕ್ಕೆ ಬಿದ್ದರು. ಇಬ್ಬರಿಗೂ ಆ ಗಂಡು ಹುಡುಗನಿಗೆ ಹಾಲುಣಿಸುವ ಆಶೆ, ಯಾರೂ ಆ ಹೆಣ್ಣುಮಗುವಿನತ್ತ ತಿರುಗಿಯೂ ನೋಡುತ್ತಿರಲಿಲ್ಲ, ಆಗ ತಾನೇ ಹುಟ್ಟಿದ್ದ ಹೆಣ್ಣುಮಗು ಹಸಿವೆಯಿಂದ, ತಾಯಿಯ ಪ್ರೀತಿವಾತ್ಸಲ್ಯ ಸಿಗದಿದ್ದರಿಂದ ಬಡಕಲಾಗಲಾರಂಭಿಸಿತು. "ಯಾರಾದರೊಬ್ಬರು ಆ ಹೆಣ್ಣುಮಗುವಿಗೆ ಹಾಲುಣಿಸಿ" ಎಂದು ವೈದ್ಯರು ಎಷ್ಟು ಬೇಡಿಕೊಂಡರೂ ಆ ತಾಯಿಯರು ಸುತರಾಂ ಒಪ್ಪಲಿಲ್ಲ, ಈ ಸಮಸ್ಯೆಯನ್ನು ಬಗೆಹರಿಸಲು ಆ ಹೆಣ್ಣು ಮಗು ಮತ್ತು ತಾಯಂದಿರ ಮೇಲೆ ಡಿಎನ್‌ಎ ಟೆಸ್ಟ್ ಮಾಡಲಾಯಿತು. ಹಾಗೆ ಮಾಡುವ ಮೂಲಕ ಅವರಿಬ್ಬರಲ್ಲಿ ಯಾರು ಆ ಹೆಣ್ಣುಮಗುವಿಗೆ ಜನ್ಮಕೊಟ್ಟದ್ದು ಎಂದು ಪತ್ತೆ ಮಾಡಲಾಯಿತು. ಆಗ ಆ ತಾಯಿ ನಿರುತ್ಸಾಹದಿಂದಲೇ ಹೆಣ್ಣುಮಗುವನ್ನು ತನ್ನದೆಂದು ಒಪ್ಪಿಕೊಂಡಳು.

ಕಂದ ಆಫ್ರಿನ್, ನೀನಿನ್ನೂ ಚಿಕ್ಕ ಕೂಸು. ಇದೆಲ್ಲ ನಿನಗೆ ಅರ್ಥವಾಗುವುದಿಲ್ಲ, ಆದರೆ ನಿನ್ನಪ್ಪನಂತಹ 'ದೊಡ್ಡ'ವರಿರುವ ನಮ್ಮ ಸಮಾಜಕ್ಕೆ ಇದೆಲ್ಲ ಅರ್ಥವಾಗಬೇಕಿತ್ತಲ್ಲ? ಅದು ಸಾಧ್ಯವಾಗದಿರುವುದರಿಂದಲೇ ನೀನಿವತ್ತು ಮಣ್ಣಲ್ಲಿ ಮಣ್ಣಾಗಿದ್ದೀಯ...


ಅಮ್ಮನ ಗರ್ಭದಿಂದ ಹೊರಬರುವ ಮುನ್ನವೇ ಹೆಣ್ಣುಮಕ್ಕಳನ್ನು ಇಲ್ಲವಾಗಿಸುವ, ಹಾಲುಗಲ್ಲದ ಕಂದಮ್ಮಗಳನ್ನು ಬೇಕಂತಲೇ ಕೊಂದುಹಾಕುವ, ಅಪ್ರಾಪ್ತ ಹೆಣ್ಣುಮಕ್ಕಳನ್ನು ಮುಕ್ಕುವ, ಮಹಿಳೆಯರನ್ನು ತಮ್ಮ ಕಾಮತೃಷೆಗೆ ಬಳಸಿಕೊಳ್ಳುವ, ಅತ್ಯಾಚಾರ, ಲೈಂಗಿಕ ಕಿರುಕುಳ, ದಾಂಪತ್ಯ ಹಿಂಸೆ... ಇಂತಹುವೆಲ್ಲಕ್ಕೆ ಮೌನ ಸಮ್ಮತಿ ಕೊಡುವ ಸಮಾಜ ನಮ್ಮದು. ನಮ್ಮಲ್ಲಿ ಲಿಂಗ ತಾರತಮ್ಯ, ಪುರುಷ ಪ್ರಧಾನ ವ್ಯವಸ್ಥೆ, ಮಹಿಳೆಯರ ಮೇಲಿನ ದೌರ್ಜನ್ಯ... ಇವೆಲ್ಲವೂ ತಾಂಡವಾಡುತ್ತಿರುವುದರಿಂದಲೇ ಆಫ್ರಿನ್, ನಿನ್ನ ಅಪ್ಪನಲ್ಲಿ ನಿನ್ನ ಕುತ್ತಿಗೆಯನ್ನೇ ಹಿಸುಕಿಹಾಕುವಷ್ಟು ಅಮಾನವೀಯತೆ ಬೆಳೆದದ್ದು. ಅದು ಅವನೊಬ್ಬನ ಅಮಾನವೀಯತೆಯಲ್ಲ, ಹೆಣ್ಣುಮಕ್ಕಳ ಮತ್ತು ಮಹಿಳೆಯರ ಮೇಲಾಗುತ್ತಿರುವ ಅನ್ಯಾಯಗಳನ್ನು ಕಂಡೂ ಸುಮ್ಮನಿರುವ ಹೆಚ್ಚಿನ ಜನರ ಅಮಾನವೀಯತೆಯೂ ಹೌದು.

ಪ್ರೀತಿಯ ಆಫ್ರಿನ್, ನೀನು ಇಲ್ಲಿ ಬದುಕಿರಲಾರೆ ಎಂದು ಹೊರಟುಹೋಗುವ ಮೂಲಕ ನಮ್ಮ ಸಮಾಜದ ಈ ಕುರೂಪಗಳಿಗೆ ಕನ್ನಡಿ ಹಿಡಿದು ಹೋಗಿದ್ದೀಯಾ. ಅದರಲ್ಲಿ ನಮ್ಮ ಮುಖವನ್ನು ನೋಡಿಕೊಂಡು ನಮ್ಮ ಸಮಾಜವನ್ನು ತಿದ್ದಿಕೊಳ್ಳುವ ಜವಾಬ್ದಾರಿಯನ್ನು ನಮ್ಮ ಮೇಲೆ ಹೊರಿಸಿ ಹೋಗಿದ್ದೀಯ...

ಸ್ವರ್ಗ ಎಂಬುದರ ಬಗ್ಗೆ ನನಗೆ ನಂಬಿಕೆ ಇಲ್ಲ ಪುಟಾಣಿ ಆಫ್ರಿನ್. ಆದರೆ ಇಲ್ಲಿಯ ನರಕವಂತೂ ನನಗೆ ಬೇಡ ಎಂದು ನೀನು ಹೊರಟೇಹೋದೆ. ನಿನ್ನ ನಿರ್ಣಯಕ್ಕೆ ಕಣ್ಣೀರ ಹೊರತಾಗಿ ನನ್ನಲ್ಲಿ ಉತ್ತರವಿಲ್ಲ... ❖



ಚಿಂತಾಮಣಿ ಕಳ್ಳ ಪೊಲೀಸ್ ಸರ್ದಾರ್‌ನ ದಂಧೆಗಳು



ಆತ ಚಿಕ್ಕಬಳ್ಳಾಪುರದ ಪೊಲೀಸರಿಗೆ ತುರ್ತಾಗಿ ಬೇಕಾಗಿದ್ದಾನೆ. ಅವನ ಹೆಸರಿನಲ್ಲಿರುವ ಅರೆಸ್ಟ್ ವಾರೆಂಟ್ ಹಿಡಿದ ಎಂಟತ್ತು ಜನರ ಪೊಲೀಸ್ ಟೀಮೊಂದು ಚಿಕ್ಕಬಳ್ಳಾಪುರ, ಕೋಲಾರ ಮತ್ತು ಬೆಂಗಳೂರಿನ ಗಲ್ಲಿ-ಗಲ್ಲಿಗಳ ತಲಾಷಿಗಿಳಿದಿದೆ. ಇಷ್ಟಕ್ಕೂ ಪೊಲೀಸರಿಗೆ ಈ ಪರಿ ವಾಂಟೆಡ್ ಎನಿಸಿರುವ ಆಸಾಮಿ ನಟೋರಿಯಸ್ ಕ್ರಿಮಿನಲ್ ಏನಲ್ಲ, ಬದಲಾಗಿ ಖತರ್ನಾಕ್ ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್! ಹೆಸರು ಎಂ.ಎಸ್. ಸರ್ದಾರ್. ಚಿಂತಾಮಣಿ ವ್ಯಾಪ್ತಿಯ ಟೌನ್ ಇನ್ಸ್‌ಪೆಕ್ಟರ್ ಆಗಿದ್ದಂಥವನು. ಸಿಕ್ಕಾಪಟ್ಟೆ ಮುಕ್ಕಲು ಹೋಗಿ ರೆಡ್ ಹ್ಯಾಂಡಾಗಿ ತಗುಲಿಕೊಂಡು ಸಸ್ಪೆಂಡ್ ಆಗಿದ್ದ. ಚಾರ್ಜ್ ವಹಿಸಿಕೊಡುವಂತೆ ಕೇಳಲು ಹೋದ ತನ್ನ ಉನ್ನತಾಧಿಕಾರಿಗೇ ಹಿಗ್ಗಾ-ಮುಗ್ಗಾ ಥಳಿಸಿ ಸರ್ವಿಸ್ ರಿವಾಲ್ವರ್ ಸಮೇತ ನಾಪತ್ತೆಯಾಗಿದ್ದಾನೆ.

ಮೂಲತಃ ಬಾಗೇಪಲ್ಲಿ ಸಮೀಪದ ಜೂಲಪಾಳ್ಯದವನಾದ ಸರ್ದಾರ್ ತನ್ನ ಸರ್ವಿಸ್ ಅವಧಿಯ ಉದ್ದಕ್ಕೂ ಬ್ಲ್ಯಾಕ್-ಮಾರ್ಕ್‌ಗಳನ್ನೇ ಪೋಣಿಸಿಕೊಂಡು ಬಂದಂಥವನು. ಈತ ಡ್ಯೂಟಿ ಮಾಡಿದ್ದಕ್ಕಿಂತ ಹಗಲುದರೋಡೆ ಮಾಡಿದ್ದೇ ಹೆಚ್ಚು, ಇಲಾಖೆಗೆ ಸೇರಿಕೊಂಡ ಐದಾರು ವರ್ಷಕ್ಕೇ ಕೋಟಿ ಲೆಕ್ಕದಲ್ಲಿ ಆಸ್ತಿ ಹಿಗ್ಗಿಸಿಕೊಂಡಿರುವುದೇ ಸಾಕು ಆತನ ಕರ್ತವ್ಯ ಪ್ರಜ್ಞೆಯನ್ನು ಸಾರಿ ಹೇಳಲು. ಕೋಲಾರ, ಬಾಗೇಪಲ್ಲಿ, ಬೆಂಗಳೂರುಗಳಲ್ಲಿ ತನ್ನ ಹೆಸರಿಗಲ್ಲದೆ ತನ್ನ ಅಕ್ಕಂದಿರ ಹೆಸರಿನಲ್ಲೂ ಈತ ಖರೀದಿಸಿರುವ ಸೈಟುಗಳ ಸಂಖ್ಯೆಯೇ ಸಾಕಷ್ಟಿದೆ. ಖಾಕಿಯ ನೆರಳಲ್ಲಿ ಭರ್ಜರಿ ವಸೂಲಿಗಿಳಿಯುತ್ತಿದ್ದ ಸರ್ದಾರ್ ಅದಕ್ಕೆಂದು ಆಯ್ಕೆ ಮಾಡಿಕೊಳ್ಳುತ್ತಿದ್ದುದು ಕಾಲಾ ದಂಧಾವಾಲಾಗಳನ್ನು. ಕಾನೂನುಬಾಹಿರ ಕೆಲಸ ಮಾಡಿಕೊಂಡಿದ್ದವರನ್ನು ಕರೆದು ಬೆಂಡೆತ್ತಿ ಸರಿ ಮಾಡಬೇಕಿದ್ದ ಈ ಪೊಲೀಸಪ್ಪ ತನಗಿಷ್ಟು ಕೊಡದಿದ್ದಲ್ಲಿ ಕೇಸ್ ಜಡಿಯುವುದಾಗಿ ಅವರನ್ನೇ ಬೆದರಿಸಿ ಡೀಲ್ ಕುದುರಿಸಿಕೊಳ್ಳುತ್ತಿದ್ದ. ಪೊಲೀಸ್ ಪವರ್‌ಗೆ ಬೆದರಿದ ಅವರಾದರೂ ಮೋಸದ ಹಣದಲ್ಲಿ ಇವನಿಗೊಂದಷ್ಟು ಪಾಲು ಸುರಿದೋ, ಅಡ್ಜೆಸ್ಟ್‌ಮೆಂಟ್ ಹೆಸರಲ್ಲಿ ಶೇರ್ ಮಾಡಿಕೊಂಡೋ ಸುಮ್ಮನಾಗುತ್ತಾರೆಂಬ ಸರ್ದಾರ್‌ನ ಲೆಕ್ಕಾಚಾರ ವರ್ಕ್‌ಔಟ್ ಆಗಿತ್ತು. ಬರಬರುತ್ತ ಇವನ ಧನದಾಹ ಯಾವ ಮಟ್ಟ ತಲುಪಿತೆಂದರೆ ಅಮಾಯಕರನ್ನೂ ಸುಲಿದು ತಿನ್ನಲು ನಿಂತಿದ್ದ.

ದೊಡ್ಡ ಮೊತ್ತಕ್ಕೆ ಬಾಯಿಬಿಟ್ಟ

ಚಿಂತಾಮಣಿಯಲ್ಲಿ ಇತ್ತೀಚೆಗೆ ರೈಸ್‌ಪುಲ್ಲಿಂಗ್ (ಏನಿದು ರೈಸ್‌ಪುಲ್ಲಿಂಗ್? ಬಾಕ್ಸ್ ನೋಡಿ) ದಂಧೆ ಚಿಗುರಿಕೊಳ್ಳುತ್ತಿದ್ದು ಹೊರರಾಜ್ಯಗಳಿಂದಲೂ ಹಣವಿದ್ದವರು ಬಂದು ಮೋಸ ಹೋಗುತ್ತಿರೋದು ಸಾಮಾನ್ಯವಾಗಿ ಬಿಟ್ಟಿದೆ. ತೀರಾ ಇತ್ತೀಚೆಗೆ ಭಾರಿ ಮೊತ್ತದ ಆಸಾಮಿಗಳು ಇದೇ ಅಕ್ರಮ ದಂಧೆಗೆ ಬರುತ್ತಿದ್ದಾರೆಂಬ ಮಾಹಿತಿ ಪಡೆದ ಸರ್ದಾರ್ ಥೇಟ್ ಸೂಪರ್ ಕಾಪ್ ಸ್ಟೈಲಿನಲ್ಲಿ ಅಲ್ಲಿಗೆ ಲಗ್ಗೆ ಇಟ್ಟಿದ್ದ. ಅಂದುಕೊಂಡಂತೆ ದಂಧೆಗಿಳಿದವರು ರೆಡ್‌ಹ್ಯಾಂಡಾಗಿ ಸಿಕ್ಕು ಬಿದ್ದಿದ್ದರು ಮಾತ್ರವಲ್ಲ ಬರೋಬ್ಬರಿ 14.75 ಲಕ್ಷದ ಅಕ್ರಮ ಮೊತ್ತವೂ ಈತನ ವಶವಾಗಿತ್ತು. ಅವರ ಮೇಲೆ ಎಫ್.ಐ.ಆರ್ ಜಡಿದು ಅಮೌಂಟನ್ನು ಇಲಾಖೆಗೆ ಒಪ್ಪಿಸಬೇಕಾದ್ದು ಆತನ ಮುಂದಿನ ಕರ್ತವ್ಯ. ಆದರೆ ಅಷ್ಟು 'ಪ್ರಾಮಾಣಿಕ'ತೆ ಆತನಿಗೆಲ್ಲಿ ಬರಬೇಕು.

ಜೈಲು ಪಾಲಾಗಬಾರದೆಂದರೆ ಹಣವನ್ನು ಮರೆತು ಇಲ್ಲಿಂದ ಜಾಗ ಖಾಲಿ ಮಾಡಿ ಅಂತ ಸರ್ದಾರ್ ಘರ್ಜಿಸಿದ್ದೇ ತಡ ಅವರೆಲ್ಲ ಬೆಚ್ಚಿಬಿದ್ದವರಂತೆ ನಾಪತ್ತೆಯಾಗಿದ್ದರು. ವಶವಾಗಿದ್ದ ಹಣವನ್ನು ಇಲಾಖೆಗೆ ಒಪ್ಪಿಸದೆ ತನ್ನ ಸ್ವಂತದು ಮಾಡಿಕೊಂಡು ಪರ್ಸನಲ್ ಅಕೌಂಟ್ ಸೇರಿಸಿಕೊಳ್ಳುವ ಹುನ್ನಾರದಲ್ಲಿದ್ದಾಗ ವಿಷಯ ಹಿರಿಯ ಅಧಿಕಾರಿಗಳಿಗೆ ತಲುಪಿತ್ತು. ಸರ್ದಾರನ ಕೈಚಳಕ ತಿಳಿದಿದ್ದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಬಿ.ರಮೇಶ್ ರೇಡ್‌ನ ಕುರಿತು ರಿಪೋರ್ಟ್ ಬರೆದು ವಶವಾದ ಹಣವನ್ನು ಇಲಾಖೆಗೆ ಒಪ್ಪಿಸುವಂತೆ ಆರ್ಡರ್ ಮಾಡಿದ್ದರು. ಸಾಲ ತೀರಿಸುವವನು ಸಬೂಬು ಹೇಳುವಂತೆ ಮೇಲಾಧಿಕಾರಿಗಳ ಮಾತನ್ನೂ ಧಿಕ್ಕರಿಸಿ 'ನಾಳೆಗೆ ಒಪ್ಪಿಸುತ್ತೇನೆ' ಎಂದು ಗುನುಗಲು ಶುರುವಿಟ್ಟುಕೊಂಡಿದ್ದ.

ಅಂತೂ-ಇಂತೂ ಬಯಲಿಗೆ ಬಂತು

ಈತನ ಫೋರ್-ಟ್ವೆಂಟಿ ದಬ್ಬಾಳಿಕೆಯನ್ನು ಕಂಡ ಸ್ಥಳೀಯ ಪತ್ರಕರ್ತರಿಗೆ ಇವನ ಮೇಲೆ ಭರ್ತಿ ಆಕ್ರೋಶವಿತ್ತು. ಅದು ಸರ್ದಾರ್‌ಗೂ ಚೆನ್ನಾಗಿ ತಿಳಿದಿತ್ತು. ರೈಸ್‌ಪುಲ್ಲಿಂಗ್ ದಂಧೆಯ ಹಣವನ್ನು ಬೇನಾಮಿಯಾಗಿ ಇವನೇ ನುಂಗಲು ಸಂಚು ಹಾಕಿರುವುದು ತಿಳಿದ ಪತ್ರಕರ್ತನೊಬ್ಬ ಇವನ ಬಣ್ಣ ಬಯಲು ಮಾಡುವ ಸೂಚನೆ ನೀಡಿದ್ದ. ಆ ಪತ್ರಕರ್ತನನ್ನು ವಿಚಾರಣೆಯ ನೆಪದಲ್ಲಿ ಸ್ಟೇಷನ್‌ಗೆ ಕರೆಸಿಕೊಂಡ ಸರ್ದಾರ್ ಆತನ ಮೇಲೆ ಕೇಸ್ ಜಡಿದು ಲಾಕಪ್‌ಗೆ ತಳ್ಳಿ ತನ್ನ ದಾದಾಗಿರಿ ಪ್ರದರ್ಶಿಸಿದ್ದ.

ವಿಷಯ ಬಯಲಾಗುತ್ತಿದ್ದಂತೆ ಚಿಕ್ಕಬಳ್ಳಾಪುರ ಜಿಲ್ಲಾ ಪತ್ರಕರ್ತರ ಸಂಘದವರು ಸರ್ದಾರ್‌ನ ದೌರ್ಜನ್ಯವನ್ನು ಪ್ರತಿಭಟಿಸಿ ಧರಣಿ ಕುಳಿತಿದ್ದರು. ಅವರೆಲ್ಲ ಈತನ ಸಾಲುಸಾಲು ಅಕ್ರಮಗಳನ್ನು ಬಯಲಿಗೆಳೆದು ತನಿಖೆ ನಡೆಸಬೇಕೆಂದು ಪಟ್ಟು ಹಿಡಿಯುವ ಹೊತ್ತಿಗೆ ಇಲಾಖೆ

ಮದುವೆ ದರ್ಬಾರ್‌ನ ಅಸಲಿ ಸರ್ದಾರ್!

ಸರ್ದಾರ್‌ನ ಇತಿಹಾಸ ಇವನ ದರ್ಪ ಮತ್ತು ಹಗರಣಗಳನ್ನು ತೆರೆದಿಟ್ಟಷ್ಟೆ ಸಲೀಸಾಗಿ ಚಪಲತೆಗಳನ್ನು ತೆರೆದಿಡುತ್ತದೆ. ಮದುವೆ ಆಗುವುದರಲ್ಲಿ ಈತ ಹೆಸರಿಗೆ ತಕ್ಕಂತೆ ಸರ್ದಾರನೇ ಸರಿ. ಲೆಕ್ಕಕ್ಕೆ ಸಿಗುವಂತೆ ನಾಲ್ಕು ಸಂಸಾರಗಳ ಯಜಮಾನ ಈತ. ಅದರಲ್ಲಿ ಮೂರು ಅಧಿಕೃತವಾದರೆ ಒಂದು ಬೇನಾಮಿ ಉಳುವಳಿ. ಹೋದ ಕಡೆಯಲ್ಲೆಲ್ಲ ಒಂದೊಂದು ಮದುವೆಯಾಗುವ ಖಯಾಲಿ ಇದ್ದಂತಿದೆ. ಮೊದಲು ಕಾನ್‌ಸ್ಟೇಬಲ್ ಆಗಿದ್ದಾಗ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದ ಒಬ್ಬಾಕೆಯನ್ನು ಮದುವೆಯಾಗಿದ್ದ. ಸ್ವಲ್ಪ ದಿನದ ನಂತರ ಆ ಮದುವೆಗೆ ವಿದಾಯ ಹೇಳಿ ಬಡವರ ಮನೆಯ ಹೆಣ್ಣುಮಗಳೊಬ್ಬಳನ್ನು ಎರಡನೇ ಮದುವೆಯಾಗಿದ್ದ. ನಂತರ ಹಾವೇರಿಯಲ್ಲಿ ಎಸ್.ಐ ಆಗಿದ್ದಾಗ ಅಲ್ಲಿನ ಒಬ್ಬ ನರ್ಸ್ ಕನ್ಯೆಯನ್ನು ಮದುವೆಯಾಗುವುದಾಗಿ ನಂಬಿಸಿ ಸಾಕಷ್ಟು ದುಡ್ಡು ಸುಲಿದಿದ್ದ. ಅದು ರಾಡಿಯಾಗಿ ಉನ್ನತಾಧಿಕಾರಿಗಳವರೆಗೂ ವಿಚಾರ ಮುಟ್ಟಿ ಸರಿಯಾಗಿ ಕ್ಯಾಕರಿಸಿದ್ದರು. ಅಲ್ಲಿಂದ ಚಿಕ್ಕಬಳ್ಳಾಪುರದ ಎಸ್.ಐ ಆಗಿದ್ದಾಗ ಸರ್ಕಾರಿ ಆಸ್ಪತ್ರೆಯ ನರ್ಸ್ ಒಬ್ಬರನ್ನು ಪ್ರೇಮಿಸಿ ಮೂರನೇ ಇನ್ನಿಂಗ್ಸಿಗೆ ಅನಧಿಕೃತವಾಗಿ ಚಾಲನೆ ನೀಡಿದ್ದ. ಸದ್ಯ ನಾಲ್ಕನೇ ಹೆಂಡತಿಯೊಟ್ಟಿಗೆ ಸಂಸಾರ ನಡೆಸುತ್ತಿದ್ದಾನೆ.

ಸ್ಕೆಚ್ಚು ಯಾರಿಗೆ?

ಮುಲಾಮನ ಸರೆಂಡರ್‌ನ ಅಸಲೀ ಮರ್ಮ!

ಯಾರ ಕೈಗೂ ಸಿಗದ ಹಳೇ ಪಾತಕಿ ಮುಲಾಮನನ್ನು ರಾಜಾಜಿನಗರದ ಇನ್ಸ್‌ಪೆಕ್ಟರ್ ದೀಪಕ್ ಸಾಹೇಬರು ಸಾಕ್ಷಾತ್ ಜೇಮ್ಸ್ ಬಾಂಡ್ ಶೈಲಿಯಲ್ಲಿ ಹಿಡಿದು ಜೈಲಿಗೆ ಹಾಕಿದ್ದಾರೆಂದರೆ ಅದನ್ನು ನಂಬುವವರು ಯಾರು?

ಇಂಥದೊಂದು ಕುಚೋದ್ಯಕ್ಕೆ ಯಾರು ಕಾರಣರೋ ಗೊತ್ತಿಲ್ಲ, ಅಂತೂ ಮುಲಾಮ ಜೈಲು ಪಾಲಾಗಿದ್ದಾನೆ. ಅದು ಮಲ್ಲೇಶ್ವರದ ತ್ರಿಬಲ್ ಮರ್ಡರ್ ಕೇಸಿನಲ್ಲಿ. 2010 ರಲ್ಲಿ ಮಲ್ಲೇಶ್ವರದ ಸಂಪಿಗೆ ರಸ್ತೆಯ ನ್ಯೂ ಶಾಂತಿಸಾಗರ್ ಹೋಟೇಲಿನಲ್ಲಿ ನಡೆದ ತ್ರಿಬಲ್ ಮರ್ಡರ್ ಇತ್ತೀಚಿನ ದಿನಗಳಲ್ಲಿ ಬೆಂಗಳೂರು ಅಂಡರ್‌ವರ್ಲ್ಡ್ ಕಂಡ ಅತ್ಯಂತ ದಾರುಣ ಹತ್ಯಾಕಾಂಡ ಎಂಬುದರಲ್ಲಿ ಎರಡು ಮಾತಿಲ್ಲ. ಅದು ಸೈಲೆಂಟ್ ಸುನೀಲನ ಶಿಷ್ಯರಲ್ಲೇ ಎರಡು ಗ್ಯಾಂಗ್‌ಗಳು ಬಡಿದಾಡಿಕೊಂಡು ಸತ್ತದ್ದು ಭೀಕರವಾಗಿತ್ತು. ಕೊಲೆಯಾಗಿದ್ದು ಲಂಬೂ ನಟರಾಜ, ಸ್ಲಂ ಬಾಲ ಮತ್ತು ಜಗ್ಗ. ಈ ಮೂವರೂ ಶೇಷಾದ್ರಿಪುರದ ಪೈಪ್‌ಲೈನಿನ ಹತ ರೌಡಿ ಕುಳ್ಳಾ ನಟರಾಜನ ಅನುಯಾಯಿಗಳು. ಇವರನ್ನು ಅಟ್ಟಾಡಿಸಿ ಕೊಂದದ್ದು ಅದೇ ಮಲ್ಲೇಶ್ವರಂನ ಸುನೀಲನ ಬಂಟನಾದ ಫೈನಾನ್ಸ್ ಪ್ರಭಾಕರನ ಗ್ಯಾಂಗು.

ಇದ್‌ರಲ್ಲಿ ಮುಲಾಮನ ಪಾತ್ರವಾಗಲಿ, ಹೆಬ್ಬೆಟ್ಟು ಮಂಜನ ಕೈವಾಡವಾಗಲಿ ಏನೂ ಇರಲಿಲ್ಲ. ಹಾಗಿದ್ದೂ ಪೊಲೀಸರು ಮುಲಾಮ ಮತ್ತು ಹೆಬ್ಬೆಟ್ಟು ಮಂಜರನ್ನು ಈ ತ್ರಿಬಲ್ ಮರ್ಡರ್ ಕೇಸಿನ ಆರೋಪಿಗಳ ಪಟ್ಟಿಗೆ ಸೇರಿಸಿದ್ದೇಕೆ ಮತ್ತು ಈಗ ಅದೇ ಕೇಸಿನಲ್ಲಿ ಮುಲಾಮನನ್ನು ಹಿಡಿದಿದ್ದೇವೆಂದು ಡಿಪ್ಪೆ ಸಾರಿಸುತ್ತಿರುವುದು ಏಕೆ?

ಇದೆಲ್ಲವನ್ನೂ ಪೊಲೀಸ್- ಪಾತಕಿಗಳ ಕಣ್ಣಾಮುಚ್ಚಾಲೆ ಎಂದೇ ಇಟ್ಟುಕೊಂಡರೂ ಮುಲಾಮ ಇದೇ ಸಮಯ ಕಾದು ಏಕೆ ಪೊಲೀಸರಿಗೆ ಶರಣಾಗಿದ್ದಾನೆ?

ಕಳೆದ ಎರಡು ವರ್ಷಗಳಿಂದ ಮುಲಾಮನನ್ನು ಕಂಡವರಿಲ್ಲ, ಆತ ಎಲ್ಲಿದ್ದಾನೆ, ಏನು ಮಾಡುತ್ತಿದ್ದಾನೆ, ಏಕೆ ಯಾರ ಕಣ್ಣಿಗೂ ಬೀಳುತ್ತಿಲ್ಲ, ಪೊಲೀಸರು ಅದೇನೇ ಜಾಲಾಡಿದರೂ ಒಬ್ಬ ಮುಲಾಮನನ್ನು ಮಾತ್ರ ಯಾಕೆ




ಹಿಡಿಯಲಾಗುತ್ತಿಲ್ಲ ಎಂಬುದೇ ಯಾರಿಗೂ ಅರ್ಥವಾಗಲಿಲ್ಲ. ಈಗ ಏಕಾಏಕಿ ಪೊಲೀಸರ ಮೂಲಕ ಹುಷಾರಾಗಿ ಜೈಲು ಹೊಕ್ಕಿ ಕೂತನೆಂದರೆ ಅದು ಭೂಗತ ತಂತ್ರಜ್ಞರ ಪ್ರಕಾರ ಒಂದೋ ಇಷ್ಟರಲ್ಲೇ ಯಾವುದೋ ದೊಡ್ಡ ತಲೆಯೊಂದು ಉರುಳಬೇಕು ಅಥವಾ ರಿಯಲ್ ಎಸ್ಟೇಟ್ ಪ್ರಪಂಚದಲ್ಲೊಂದು ದೊಡ್ಡ ಡೀಲು ಕುದುರಬೇಕು!

ಈ ಎರಡೂ ಸಾಧ್ಯತೆಗಳನ್ನು ಲೆಕ್ಕ ಹಾಕುವುದಾದರೆ ತಕ್ಷಣಕ್ಕೆ ಕಾಣಿಸುವುದು ಮಾಗಡಿ ರಸ್ತೆಯ ಹೇರೋಹಳ್ಳಿಯ ಹತ್ತಿರದ ಲ್ಯಾಂಡ್ ವಾರ್. ಇತ್ತೀಚೆಗಷ್ಟೇ ಹೇರೋಹಳ್ಳಿಯಲ್ಲಿ ಪಿಸ್ತೂಲು ರವಿಯ ಮೇಲೆ ಅಟ್ಯಾಕಾಯಿತು. ಅದರಲ್ಲಿ ಮುಲಾಮನ ಹೆಸರೂ ಕೇಳಿಬಂತು. ಬಿಜೆಪಿಯ ಜಿಲ್ಲಾ ಪಂಚಾಯ್ತಿ ಸದಸ್ಯ ಎಲ್.ಜಿ. ವೆಂಕಟೇಶನ ಹತ್ತಿರದ ಡೀಲಿಗೆ ಪಿಸ್ತೂಲು ರವಿ ಕೈಹಾಕಿದ್ದ. ಜಿಲ್ಲಾ ಪಂಚಾಯ್ತಿ ಮೆಂಬರ್ ವೆಂಕಟೇಶ ಹೇಳಿಕೇಳಿ ಮುಲಾಮನ ಸಹಚರನೆಂಬುದು ಆತನ ವಿರೋಧಿಗಳ ಆರೋಪ. ಯಾವತ್ತು ರವಿ, ವೆಂಕಟೇಶನ ಲ್ಯಾಂಡ್ ಡೀಲಿಗೆ ಕೈಯಿಟ್ಟನೋ ಆಗಲೇ ಮುಲಾಮನ ಬಂಟರಾದ ರಾಮ-ಲಕ್ಷ್ಮಣರ ಕೆಂಗಣ್ಣಿಗೆ ಗುರಿಯಾದ. ಅದು ಅಂತಿಮವಾಗಿ ಪಿಸ್ತೂಲು ರವಿ ಮೇಲಿನ ದಾಳಿಗೆ ಕಾರಣವಾಯಿತು. ಜಿದ್ದಿಗೆ ಬಿದ್ದ ರವಿಯ ಸಂಬಂಧಿಗಳು ಮುಲಾಮನನ್ನೂ ಸೇರಿಸಿ ದೂರು ಕೊಟ್ಟರು.

ಹಾಗಂತ ತಾವರೆಕೆರೆ ಪೊಲೀಸರಿಗೆ ಮುಲಾಮು ಸಿಗಬೇಕಲ್ಲ? ಅಥವಾ ಬಿಜೆಪಿ ನಾಯಕರ ಲ್ಯಾಂಡ್ ಡೀಲಾಗಿದ್ದರಿಂದ ಪೊಲೀಸರು ಮುಟ್ಟಕ್ಕಿಲ್ಲ. ಇದೆಲ್ಲದರ ಮಧ್ಯೆ ಯಾರೂ ನಿರೀಕ್ಷಿಸದ ರೀತಿಯಲ್ಲಿ ರಾಜಾಜಿನಗರ ಇನ್ಸ್‌ಪೆಕ್ಟರ್ ದೀಪಕ್ ಕೈಗೆ ಮುಲಾಮ ಸಿಕ್ಕಿ ಬೀಳುತ್ತಾನೆ. ಪೊಲೀಸ್ ಠಾಣೆಗೆ ಹೊಂದಿಕೊಂಡಂತೆ ಇರುವ ಆತನ ಹುಟ್ಟು ಏರಿಯಾ ಜೂಗನಹಳ್ಳಿಯನ್ನು ತೊರೆದು ಯಾವುದೋ ಕಾಲವಾಗಿದೆ. ಕಾರಣವಿಲ್ಲದೆ ಅಲ್ಲಿಗೆ ಬಂದ ಮುಲಾಮನನ್ನು ಪೊಲೀಸರು ಸಂಚು ಮಾಡಿ, ಹೊಂಚು ಹಾಕಿ ಸಾಹಸ ಪಟ್ಟು ಹಿಡಿಯುತ್ತಾರೆ.

ಅಷ್ಟಕ್ಕೂ ಮಲ್ಲೇಶ್ವರದ ತ್ರಿಬಲ್ ಮರ್ಡರ್ ಕೇಸಿಗೂ ಮುಲಾಮನಿಗೂ ಏನೇನೂ ಸಂಬಂಧವಿಲ್ಲ. ವರ್ಷಗಟ್ಟಲೆ ಕೈಗೆ ಸಿಗದೆ ತಲೆಮರೆಸಿಕೊಂಡಿದ್ದು ಪೊಲೀಸರನ್ನು ಸತಾಯಿಸುತ್ತಿದ್ದ ಸಿಟ್ಟಿಗೆ ಬಿದ್ದು ಆಗ ಜಂಟಿ ಕಮೀಷನರ್ ಆಗಿದ್ದ ಅಲೋಕ್ ಕುಮಾರ್ ಹೆಬ್ಬೆಟ್ಟು ಮಂಜನನ್ನೂ ಸೇರಿಸಿ ಮುಲಾಮನನ್ನೂ ತ್ರಿಬಲ್ ಮರ್ಡರ್ ಕೇಸಿಗೆ ಸಿಲುಕಿಸಿದ್ದರು. ಆ ಕೇಸು ಕಳೆದೆರಡು ವರ್ಷಗಳಿಂದ ವಿಚಾರಣೆಗೆ ಬಂದು ಇನ್ನೇನು ಅಂತಿಮ ಹಂತದಲ್ಲಿದೆ. ಎನ್ನುವಾಗಲೇ ನ್ಯಾಯಾಧೀಶರನ್ನು ಕಾಡಿದ್ದು ಮುಲಾಮನನ್ನು ಹಿಡಿಯಲಾಗದ ಪೊಲೀಸರ ಅಸಹಾಯಕತೆ.



ಹೆಬ್ಬೆಟ್ಟು ಮಂಜನೇನೋ ದೇಶ ಬಿಟ್ಟು ದುಬೈ ಸೇರಿಕೊಂಡು ಭೂಗತನಾಗಿದ್ದಾಯ್ತು. ಆದರೆ ಇಲ್ಲೇ ಸುತ್ತಾಡಿಕೊಂಡಿರುವ ಮುಲಾಮನನ್ನು ನಿಮ್ಮ ಕೈಲಿ ಹಿಡಿಯಲು ಆಗೋಲ್ಲ ಅಂದ್ರೆ ನೀವೆಲ್ಲ ಬಳೆ ತೊಟ್ಕೊಂಡಿದ್ದೀರಾ ಎಂದು ಪೊಲೀಸರನ್ನು ಜಡ್ಜ್ ಕೆಣಕಿದ್ದಾರೆ. ಅದು ಜಂಟಿ ಪೊಲೀಸ್ ಕಮಿಷನರ್ ಬಿ.ದಯಾನಂದ್ ಕೈಗೆ ಬೀಳುವುದು ಎಷ್ಟು ಹೊತ್ತು? ಹಾಗೇ ಪೊಲೀಸ್ ಆಫೀಸರುಗಳೆಲ್ಲ ಮುಲಾಮನ ಬಗ್ಗೆ ತಲೆಕೆಡಿಸಿಕೊಂಡಿದ್ದು ಮತ್ತು ತ್ರಿಬಲ್ ಮರ್ಡರ್ ಕೇಸಿನಲ್ಲಿ ಆತ ಮೋಸ್ಟ್ ವಾಂಟೆಡ್ ಆಗಿರುವುದರಿಂದ ತನ್ನ ಹಿತೈಷಿ ಪೊಲೀಸರ ಮೂಲಕ ಮುಲಾಮನನ್ನು ಮುಟ್ಟಿರಬೇಕು. ಹೀಗೇ ಮುಂದುವರಿದರೆ ತನ್ನನ್ನು ಇನ್ನು ಯಾವ್ಯಾವ ಕೇಸಿಗೆ ಅನ್ಯಾಯವಾಗಿ ಫಿಟ್ ಮಾಡುತ್ತಾರೋ, ಇನ್ನೇನು ಕಾಟ ಕೊಡುತ್ತಾರೋ ಎಂದು ಹೆದರಿದ ಮುಲಾಮ ಅಂತಿಮವಾಗಿ ಸರೆಂಡರ್ ಆಗುವ ಡೀಲಿಗೆ ಸಮ್ಮತಿಸಿದ್ದಾನೆ.

ತನ್ನ ಇಬ್ಬರು ಶಿಷ್ಯರ ಜೊತೆ ನೇರವಾಗಿ ರಾಜಾಜಿನಗರ ಪೊಲೀಸರ ಬಳಿಗೆ ಬಂದಿದ್ದಾನೆ. ಜೊತೆಗಿದ್ದ ಹುಡುಗರನ್ನು ಉಗಿದು ಓಡಿಸಿದ ಪೊಲೀಸರು ಯಾರ್‍ಯಾರೋ ಅಪರಿಚಿತ ಹುಡುಗರನ್ನು ಜೊತೆಹಾಕಿದ್ದೇ ಮುಲಾಮನನ್ನು ಜೈಲಿಗೆ ಸಾಗಿಸಿದ್ದಾರೆ.

ಇದು ಮುಲಾಮನ ಸೆರೆಂಡರ್ ಹಿಂದಿನ ಅಸಲೀ ಮರ್ಮ. ಇರುವ ಒಂದೇ ಒಂದು ಕೇಸನ್ನು ಮುಗಿಸಿಕೊಂಡರೆ ಪೊಲೀಸರ ಕಾಟವಿಲ್ಲದೆ ಹಾಯಾಗಿರಬಹುದು ಎಂಬುದು ಆತನ ಲೆಕ್ಕಾಚಾರವಾಗಿರಬಹುದು. ಆದರೆ ಭೂಗತ ಲೋಕದ ಪುಸ್ತಕದಲ್ಲಿ ಮುಲಾಮನ ಬಾಕಿ ಇನ್ನೂ ಚುಕ್ತಾ ಆಗಿಲ್ಲ. ಮುಖ್ಯವಾಗಿ ಆತನ ಕಡುವೈರಿ ಕೊರಂಗುವನ್ನು ಮುಗಿಸದೇ ಮುಲಾಮ ನಿದ್ರಿಸುವಂತಿಲ್ಲ. ಮಚ್ಚನ ಹತ್ಯೆಯ ರಿವೇಂಜ್ ತೀರದೆ ಮಚ್ಚನ ಅಳಿದುಳಿದ ಶಿಷ್ಯರು ವಿರಮಿಸುವುದಿಲ್ಲ. ಇದಲ್ಲದೇ ರಿಯಲ್ ಎಸ್ಟೇಟ್ ಸಂಬಂಧಿ ಯಾವ ದೊಡ್ಡ ಡೀಲಿಗೆ ಮುಲಾಮನ ಸಿಂಡಿಕೇಟ್ ಕೈ ಹಾಕಿದೆಯೊ. ಈ ಪೈಕಿ ಯಾವ ಉದ್ದೇಶ ಹೊತ್ತು ಮುಲಾಮ ಜೈಲು ಹೊಕ್ಕಿ ಕೂತಿದ್ದಾನೋ.

ಯಾವ ಬುರುಡೆಗೆ ಬಿಸಿ ನೀರು ಕಾದಿದೆಯೋ ಬಲ್ಲವರ್‍ಯಾರು?

ಬಿದ್ದಿ ಸರ್ದಾರ್‌ನ ಬಗ್ಗೆ ಕೆಟ್ಟ ಅಸಹನೆ ಶುರುವಾಗಿತ್ತು, ನೆ ನಿರತರ ಬೇಡಿಕೆಯನ್ನೆ ಮುಂದು ಮಾಡಿಕೊಂಡ ಬಳ್ಳಾಪುರದ ಎಸ್.ಪಿ. ಟಿ.ಡಿ ಪವಾರ್ ವಿಚಾರಣೆ ಗಿಯುವವರೆಗೂ ಸರ್ದಾರ್‌ನನ್ನು ಸಸ್ಪೆಂಡ್ ಮಾಡಿರುವ ಕೇಸೆಶ್ಕ್ ಸಹಿ ಹಾಕಿದ್ದರು. ಆಗ ಮುಖ್ಯವಾಗಿ ಬೆಳಕಿಗೇ ಬಿದ್ದೇ ಈ ರೈಸ್ ಪುಲ್ಲಿಂಗ್ ದಂಧೆಯ ಲೂಟ ರಣ.

ಉನ್ನತಾಧಿಕಾರಿ ಮೇಲೂ ಹಲ್ಲೆ

ಸಸ್ಪೆಂಡ್ ಆದರೂ ಸರ್ದಾರ್‌ನ ದುರಾಸೆ ಮತ್ತು ರಹಂಕಾರಗಳು ಮಾತ್ರ ಕಡಿಮೆಯಾಗಿರಲಿಲ್ಲ. ್‌ಪುಲ್ಲಿಂಗ್ ರೇಡ್ ಹಣ ಮತ್ತು ಸರ್ವಿಸ್ ರಿವಾಲ್ವರ್ ನ್ನು ಒಪ್ಪಿಸುವಂತೆ ಆದೇಶಗಳು ಮೇಲಿಂದ ಮೇಲೆ ಯುತ್ತಿದ್ದರೂ ಅದ್ಯಾವುದಕ್ಕೂ ಆತ ಕೇರ್ ಮಾಡಿರಲಿಲ್ಲ. ನಡುವೆ ಹಣದ ವಿಚಾರವಾಗಿ ಉಲ್ಟಾ ಹೊಡೆದ ರ್ದಾರ್ ರೇಡ್‌ನ ದಿನ ವಶಪಡಿಸಿಕೊಂಡ ಅಷ್ಟೂ ಮೊತ್ತವನ್ನು ಎ.ಎಸ್.ಪಿ ರಮೇಶ ಕೈಗೊಪ್ಪಿಸಿರುವುದಾಗಿ ಕೇಷನ್ ಡೈರಿಯಲ್ಲಿ ಸುಳ್ಳು ಬರೆದಿದ್ದ.

ಸರ್ದಾರ್ ಸಸ್ಪೆಂಡ್ ಆಗುತ್ತಿದ್ದಂತೆಯೇ ಚಿಂತಾಮಣಿಯ ಗ್ರಾಮೀಣ ವ್ಯಾಪ್ತಿಯ ಸರ್ಕಲ್ ಇನ್ಸ್‌ಪೆಕ್ಟರ್ ಆಗಿದ್ದ ವೆಂಕಟಾಚಲಪತಿಯನ್ನು ಅವನ ಜಾಗಕ್ಕೆ ತಾತ್ಕಾಲಿಕವಾಗಿ ಷನ್ ಇನ್ಸ್‌ಪೆಕ್ಟರ್ ಆಗಿ ನೇಮಿಸಿ ಜಿಲ್ಲಾ ಎಸ್.ಪಿ ರಮೇಶ ಹೊರಡಿಸಿದ್ದರು. ವೆಂಕಟಾಚಲಪತಿಗೆ ಚಾರ್ಜ್ ಒಪ್ಪಿಸಿಕೊಡುವಲ್ಲಿಯೂ ತಗಾದೆ ತೆಗೆದ ಸರ್ದಾರ್ ಸರ್ಕಾರದಿಂದ ಲಿಖಿತ ಆದೇಶ ಬರಲಿ ಆಮೇಲಷ್ಟೆ ಮುಂದಿನ ಮಾತು' ಅನ್ನತೊಡಗಿದ್ದ. ಹಿರಿಯ ಅಧಿಕಾರಿಗಳ ಸೂಚನೆಯಂತೆ ಅವರ ಆದೇಶದೊಟ್ಟಿಗೆ ವೆಂಕಟಾಚಲಪತಿ ಖುದ್ದಾಗಿ ಸರ್ದಾರ್ ಮನೆಗೆ ಹೋದಾಗ ಬಾಯಿಗೆ ಬಂದಂತೆ ನಿಂದಿಸಿದ್ದೂ ಅಲ್ಲದೆ ಕರ್ತವ್ಯನಿರತ ಪೊಲೀಸ್ ಅಧಿಕಾರಿ ಎಂಬುದನ್ನೂ ಮರೆತು ಅವರ ಮೇಲೆ ಹಲ್ಲೆ ನಡೆಸಿದ್ದ.

ಹಣದ ವಿಷಯವಾಗಿ ತಮ್ಮ ಹೆಸರನ್ನು ಅನಗತ್ಯವಾಗಿ ಎಳೆತಂದದ್ದರ ವಿವರಣೆಗಾಗಿ ಸರ್ದಾರನ ಮನೆಗೆ ಹೋದ ಆಡಿಷನಲ್ ಎಸ್.ಪಿ. ಬಿ. ರಮೇಶ್‌ಗೂ ಅವನಿಂದ ಅದೇ ಮರ್ಯಾದೆ ಕಾದಿತ್ತು. ಉನ್ನತಾಧಿಕಾರಿ ಎಂಬ ಸೌಜನ್ಯವೂ ಇಲ್ಲದೆ ತನ್ನ ಥರ್ಡ್‌ಕ್ಲಾಸ್ ಭಾಷೆಯಲ್ಲಿ ಅಬ್ಬರಿಸಿ ಬೊಬ್ಬಿರಿದ ಸರ್ದಾರ್ ಎಸ್.ಪಿ ಸಾಹೇಬರಿಗೆ ಹಿಗ್ಗಾ-ಮುಗ್ಗಾ ತದುಕಿದ್ದ. ಪೊಲೀಸ್ ಇಲಾಖೆಯನ್ನೇ ಬೆವರಿಳಿಸಿದ್ದ ಸರ್ದಾರ್‌ಗೆ ತಾನು ಮಾಡಿದ್ದು ಎಂತಹ ಅಪರಾಧ, ಇದಕ್ಕಾಗಿ ಲಾಕಪ್ಪಿನಲ್ಲಿ ತನಗೆಂತಹ ಆತಿಥ್ಯ ಕಾದಿದೆ ಎಂಬುದು ಚೆನ್ನಾಗಿ ತಿಳಿದಿತ್ತಾದ್ದರಿಂದ ಸರ್ಕಾರ ನೀಡಿದ್ದ ಸರ್ವಿಸ್ ರಿವಾಲ್ವರ್ ಸಮೇತ ನಾಪತ್ತೆಯಾಗಿದ್ದ.

ತನ್ನ ಮೇಲೆ ಕೇಸು ದಾಖಲಾಗಿ ಅರೆಸ್ಟ್ ವಾರೆಂಟ್ ರೆಡಿಯಾಗಿದೆ ಎನ್ನುವುದು ತಿಳಿಯುತ್ತಿದ್ದಂತೆ ಮರೆಯಲ್ಲಿದ್ದುಕೊಂಡೆ ಜಾಮೀನಿಗೆ ಅರ್ಜಿ ಹಾಕಿಕೊಂಡಿದ್ದ. ಜಿಲ್ಲಾ ನ್ಯಾಯಾಲಯ ಇವನ ಅರ್ಜಿಯನ್ನು ವಜಾ ಮಾಡಿದ್ದೆ ತಡ, ಹೈಕೋರ್ಟ್‌ಗೂ ಅರ್ಜಿ ಗುಜರಾಯಿಸಿದ್ದ. ಮೊನ್ನೆ ಆ ಅರ್ಜಿಯೂ ತಿರಸ್ಕಾರಗೊಂಡಿದೆ. ಇನ್ನೇನಿದ್ದರೂ ಆತ ಲಾಕಪ್‌ನಲ್ಲಿ ಲಾಠಿ ಏಟಿಗೆ ರಾಗ ಹಾಡುವುದೊಂದೇ ಬಾಕಿ. ಪೊಲೀಸರಿಗೆ ಭರ್ಜರಿ ತಲೆನೋವೆನಿಸಿದ್ದು ಆತ ನೊಟ್ಟಿಗೇ ಕಣ್ಮರೆಯಾಗಿದ್ದ ಸರ್ವಿಸ್ ರಿವಾಲ್ವರ್‌ನಿಂದ ಒಂದೇ ಒಂದು ಬುಲೆಟ್ ಮಿಸ್‌ಫೈರ್ ಆಗಿದ್ದರೂ ಇಡೀ ಇಲಾಖೆಯೇ ಹೊಣೆಯಾಗಬೇಕಿತ್ತು, ಅದಕ್ಕೆಂದೇ ಆತನನ್ನು ಶೋಧಿಸಿ ಹೊರಗೆಳೆಯಲು ವಿಶೇಷ ಮುತುವರ್ಜಿ ವಹಿಸಲಾಗುತ್ತಿದೆ.

ರಿವಾಲ್ವರ್ ತನ್ನ ಬಳಿ ಇದ್ದಷ್ಟೂ ದಿನ ತನಗಾಗಿ ಬೀಸಲಾಗಿರುವ ಜಾಲ ಸಡಿಲವಾಗದೆಂದರಿತ ಸರ್ದಾರ್ ಎರಡು ದಿವಸದ ಹಿಂದೆ ಹೆಂಡತಿಯ ಮೂಲಕ ಅದನ್ನು ಇಲಾಖೆಗೆ ಸರೆಂಡರ್ ಮಾಡಿಸಿದ್ದಾನೆ. ಸದ್ಯಕ್ಕೆ ಪೊಲೀಸರು ರಿಲೀಫ್ ಆಗಿದ್ದಾರಾದರು ಇಡೀ ಇಲಾಖೆಯ ವರ್ಚಸ್ಸನ್ನೇ ಗುಡಿಸಿ ಹಾಕಿರುವ ಪರಮ ದರ್ಪಿಷ್ಟ ಭ್ರಷ್ಟ ಸರ್ದಾರ್‌ನನ್ನು ಜೈಲಿಗಟ್ಟಿದರೆ ಮಾತ್ರ ಚಿಂತಾಮಣಿಯ ಜನ ಒಂದಷ್ಟು ನಿಟ್ಟುಸಿರು ಬಿಟ್ಟಾರು.

❖

ಏನಿದು ರೈಸ್ ಪುಲ್ಲಿಂಗ್?

ಇದು ದುರಾಸೆಯ ಜನರನ್ನು ಯಾಮಾರಿಸುವ ವಂಚನೆಯ ಮತ್ತೊಂದು ಮುಖ. ತನ್ನಿಂದ ನಿರ್ದಿಷ್ಟ ದೂರದಲ್ಲಿ ಇರಿಸಿದ ಅಕ್ಕಿಯನ್ನು ತನ್ನತ್ತ ಸೆಳೆದುಕೊಳ್ಳುವಂತಹ ಅತೀಂದ್ರಿಯ ಶಕ್ತಿಯ ಪುರಾತನ ಕಾಲದ ತಾಮ್ರದ ನಾಣ್ಯವೋ, ಪಾತ್ರೆಯೋ ತಮ್ಮ ಬಳಿ ಇದೆ. ಕೋಟ್ಯಂತರ ಬೆಲೆಬಾಳುವ ಅದನ್ನು ಮನೆಯಲ್ಲಿಟ್ಟುಕೊಂಡರೆ ಅದೃಷ್ಟ ಒಲಿಯುತ್ತದೆ ಎಂದು ಪುಕಾರೆಬ್ಬಿಸಲಾಗುತ್ತದೆ. ಅದೃಷ್ಟದ ಲಾಲಸೆಗೆ ಬಿದ್ದವರು ಅಥವಾ ಪುರಾತನ ಕಾಲದ ವಸ್ತುಗಳ ವ್ಯವಹಾರ ನಡೆಸುವಂತವರು ಆಕರ್ಷಿತರಾದರೆ ಅವರನ್ನು ಹಣ ಸಮೇತ ತಮ್ಮ ಜಾಗಕ್ಕೆ ಕರೆಸಿಕೊಳ್ಳುವ ಗುಂಪು ಬೆದರಿಸಿ ಹಣ ಸುಲಿದುಕೊಂಡು ಇಲ್ಲವೆ ಅವರನ್ನು ಅಪಹರಿಸಿ ಮನೆಯವರಿಂದ ಒತ್ತೆಹಣ ತರಿಸಿಕೊಂಡು ಅಥವಾ ಬೋಗಸ್



ವಸ್ತುಗಳನ್ನೇ ವಿಪರೀತ ಶಕ್ತಿಶಾಲಿ ಐಟಮ್‌ಗಳೆಂದು ಮಾರಾಟ ಮಾಡಿ ವಂಚಿಸುವುದು ಇವರ ಕೆಲಸ. ಅಸಲಿಗೆ ಇಂತಹ ವ್ಯವಹಾರವೇ ಕಾನೂನು ಬಾಹಿರ ಆಗಿರುವುದರಿಂದ ದುಡ್ಡು ಕಳೆದುಕೊಂಡವರು ಪೊಲೀಸಿನವರ ಸಹಾಯವನ್ನೂ ಕೇಳುವಂತಿಲ್ಲ, ಹಾಗಾಗಿ ಇದು ಸುಲಭದ ದಂಧೆಯಾಗುತ್ತಿದೆ.


ಅಕ್ಕಿಯನ್ನು ತನ್ನತ್ತ ಸೆಳೆದುಕೊಳ್ಳುವ ಲೋಹಗಳ ಗುಣ ವಿಜ್ಞಾನಕ್ಕೇ ಸ್ಪಷ್ಟವಾಗಿ ಅರ್ಥವಾಗಿಲ್ಲ. ಆದರೆ ಒಂದು ಅಂದಾಜಿನ ಪ್ರಕಾರ ಕೆಲವೊಂದು ಲೋಹಗಳಲ್ಲಿ ಮುಖ್ಯವಾಗಿ ತಾಮ್ರದಲ್ಲಿ ಕಾಪರ್ ಇರೀಡಿಯಮ್ ಅಂಶವಿದ್ದರೆ ಅವು ಸ್ವಲ್ಪ ಮಟ್ಟಿನ ಕಾಂತತ್ವವನ್ನು ಹೊಂದಿರುತ್ತವೆ. ಇದಕ್ಕೆ ಅವುಗಳಲ್ಲಿನ ವಿದ್ಯುತ್ಕಾಂತೀಯ ಅಲೆಗಳ ಹೊರಸೂಸುವಿಕೆಯ ಗುಣ ಕಾರಣವಿರಬಹುದು ಎನ್ನಲಾಗುತ್ತದೆ. ಈ ಗುಣ ಲೋಹದಲ್ಲಿ ಹೇಗೆ ಅಡಕವಾಗುತ್ತದೆ ಎಂಬುದಿನ್ನೂ ನಿಗೂಢ. ಆದರೆ ವಂಚಕರು ಇಂತಹ ವೈಜ್ಞಾನಿಕ ನಿಗೂಢತೆಯನ್ನೆ ತಮ್ಮ ಬಂಡವಾಳವನ್ನಾಗಿಸಿಕೊಂಡು ಕಮಾಯಿಗೆ ಇಳಿದಿದ್ದಾರೆ. ಅವರು ಇವುಗಳ ಉತ್ಪತ್ತಿಯ ಸಾಧ್ಯತೆಯನ್ನು ವಿಚಿತ್ರ ರೀತಿಯಲ್ಲಿ ಹಬ್ಬಿಸಿದ್ದಾರೆ. ಆಕಾಶದಲ್ಲಿ ಮೂಡುವ ಅಪರೂಪದ ಮಿಂಚು ಭೂಮಿಯ ಮರಕ್ಕೆ ತಾಕಿ, ಆ ಮರದ ಬುಡದಲ್ಲಿ ಇಂತಹ ತಾಮ್ರದ ಅತೀಂದ್ರಿ ಶಕ್ತಿಯ ಪಾತ್ರೆಗಳು ಉದ್ಭವಿಸಿರುತ್ತವೆ ಎನ್ನುವುದು ಅವುಗಳಲ್ಲಿ ಒಂದು. ಇಂತಹದೇ ರೈಸ್ ಪುಲ್ಲಿಂಗ್ ಶಕ್ತಿಯಿರುವ 1616 ಇಸವಿಯ ಮುದ್ರೆಯಿರುವ ನಾಣ್ಯಗಳ ಬಗ್ಗೆಯೂ ರೋಚಕ ಕತೆ ಕಟ್ಟಿ ಸುಲಿಯುತ್ತಿದ್ದಾರೆ. ಕ್ರಿಸ್ತಪೂರ್ವ 1616ನೇ ಇಸವಿಯಲ್ಲಿ ಖಗ್ರಾಸ ಸೂರ್ಯಗ್ರಹಣ ಸಂಭವಿಸಿದ ಘಳಿಗೆಯಲ್ಲಿ ಇವನ್ನು ಠಂಕಿಸಲಾಗಿದ್ದು ಅತೀಂದ್ರಿಯ ಶಕ್ತಿ ಈ ನಾಣ್ಯಗಳಿಗಿವೆ ಎಂದೆಲ್ಲ ನಂಬಿಸಿ ವಂಚಿಸಲಾಗುತ್ತಿದೆ. ಮತ್ತೊಂದು ಕತೆಯಂತೆ ಬ್ರಿಟಿಷರ ಕಾಲದಲ್ಲಿ ಅಳೆದ ಭೂಮಿಯನ್ನು ವಿಂಗಡಿಸಲು ತಾಮ್ರದ ರಾಡ್ ನಿಲ್ಲಿಸುವುದರ ಮೂಲಕ ಮಾರ್ಕ್ ಮಾಡಲಾಗುತ್ತಿತ್ತು. ಕಾಲಾಂತರದಲ್ಲಿ ಅಪರೂಪದ ಮಿಂಚು ಈ ರಾಡ್‌ಗಳಲ್ಲಿ ಪ್ರವಹಿಸಿರುವುದರಿಂದ ಇವೂ ಈಗ ರೈಸ್ ಪುಲ್ಲಿಂಗ್ ಶಕ್ತಿಯ ಅತೀಂದ್ರಿಯ ವಸ್ತುಗಳಾಗಿ ಪರಿವರ್ತಿತವಾಗಿವೆ ಎಂದು ನಂಬಿಸಲಾಗುತ್ತಿದೆ.

ಇಷ್ಟಲ್ಲದೆ ಇವುಗಳು ನ್ಯೂಕ್ಲಿಯರ್ ಬಾಂಬ್‌ಗಳ ಹಾಗೂ ಅಂತರಿಕ್ಷ ಉಪಗ್ರಹಗಳ ತಯಾರಿಕೆಯಲ್ಲಿ ಬಳಸಲ್ಪಡುವುದರಿಂದ ಕೋಟಿಯ ಲೆಕ್ಕದಲ್ಲಿ ಲಾಭ ಪಡೆಯಬಹುದು. ಆದರೆ ನಾವಿಲ್ಲಿ ಅವನ್ನು ಕೇವಲ ಹತ್ತರಿಂದ ಇಪ್ಪತ್ತು ಲಕ್ಷದ ಸಣ್ಣ ಅಮೌಂಟಿಗೆ ಮಾರುತ್ತಿದ್ದೇವೆ ಎಂದೆಲ್ಲ ಗಾಳಿ ಸುದ್ದಿಗಳನ್ನು ಹರಡಿಸಿ ದುರಾಸೆಯ ಜನರನ್ನು ಸೆಳೆದು ವಂಚಿಸಲಾಗುತ್ತಿದೆ. ಮೊದಮೊದಲು ಈ ತರಹದ ದಂಧೆ ತಮಿಳುನಾಡು ಮತ್ತು ಕೊಲ್ಕತ್ತಾಗಳಲ್ಲಿ ನಡೆಯುತ್ತಿತ್ತು. ಇದೀಗ ಚಿಂತಾಮಣಿ, ಬಾಗೇಪಲ್ಲಿ, ಚಿಕ್ಕಬಳ್ಳಾಪುರದಲ್ಲೂ ಕಾಣಿಸಿಕೊಳ್ಳುತ್ತಿದೆ. ಪೊಲೀಸರು ಎಚ್ಚೆತ್ತುಕೊಳ್ಳದಿದ್ದಲ್ಲಿ ದಂಧೆ ದರೋಡೆಯಾಗಿ ಬದಲಾಗುವ ಅಪಾಯವಿದೆ.

❖

ಚೊಂಬಿಗಾ ನಾ ನಿನ್ನ ನಂಬಿದೆ...!

ಅಂಬಿಗಾ ನಾ ನಿನ್ನ ನಂಬಿದೆ... ಎನ್ನುತ್ತಾ ಡಬ್ಲಿಂಗ್ ವಂಚಕರನ್ನು ನಂಬಿ ಹಣದ ರಾಶಿಯಿರುವ ಇನ್ನೊಂದು ದಡ ಸೇರಲು ಯತ್ನಿಸಿ ಪಾಪರ್ ಆದವರ ಅನುಭವ ಇಲ್ಲಿದೆ. ಹಾಗಾಗಿ ಇದು ಇಲ್ಲಿ 'ಚೊಂಬಿಗಾ ನಾ ನಿನ್ನ ನಂಬಿದೆ' ಎಂದಾಗಿದೆ.



ಹೆಚ್ಚಿನ ಲಾಭದ ಆಸೆಯಿಂದ ಸುಲಭ ಮಾರ್ಗಗಳನ್ನು ಹುಡುಕುವುದು ನಮ್ಮ ಸಮಾಜದ ಒಂದು ದೊಡ್ಡ ದೌರ್ಬಲ್ಯ. ಈ ದೌರ್ಬಲ್ಯವನ್ನೇ ಬಂಡವಾಳ ಮಾಡಿಕೊಂಡು ಕೆಲವು ಬ್ಲೇಡ್ ಕಂಪನಿಗಳು ಅಮಾಯಕ ಜನರಿಗೆ ಹೆಚ್ಚಿನ ಲಾಭದ ಆಮಿಷವೊಡ್ಡಿ ಇದ್ದಬದ್ದ ಹಣವನ್ನೂ ಕಸಿದು ಪರಾರಿಯಾಗುತ್ತಿವೆ. ಕಳೆದ ಸಂಚಿಕೆಯಲ್ಲಿ ನಾವು ಬಯಲಿ ಗೆಳೆದ ವೆಗಾಜೀಲ್ ಎಂಬ ಹೈಟೆಕ್ ಬ್ಲೇಡ್ ಕಂಪನಿಯ ಮುಖ್ಯಸ್ಥ ನಂಬಿದವರ ಕೈಗೆ ಚೊಂಬು ಕೊಟ್ಟು ಪರಾರಿ ಯಾಗುವ ಯತ್ನದಲ್ಲಿದ್ದಾಗ ಅರೆಸ್ಟಾಗಿದ್ದಾನೆ. ಈ ವೆಗಾಜೀಲ್ ವಂಚಕೋರರು ಜನರನ್ನು ಹೇಗೆ ಯಾಮಾರಿಸುತ್ತಾರೆ ಎಂಬ ವಿಷಯವನ್ನು ಹಣ ಕಳೆದುಕೊಂಡು ಮೋಸಹೋಗಿರುವ ವ್ಯಕ್ತಿಗಳ ಮಾತುಗಳಲ್ಲೇ ಕೇಳಿ.

ಚಂದ್ರಪ್ಪ ವಯಸ್ಸು 40 ವರ್ಷ, ಉದ್ಯೋಗ- ಕಿರಾಣಿ ಅಂಗಡಿ, ಊರು- ಸಾಲಹುಣಿಸೆ ಗ್ರಾಮ, ಕನಕಪುರ ರಸ್ತೆಯಲ್ಲಿ ರವಿಶಂಕರ್ ಗುರೂಜಿ ಆಶ್ರಮದ ಪಕ್ಕದಲ್ಲಿದೆ.

ಕಳೆದ ವರ್ಷ ಜುಲೈನಲ್ಲಿ ಚಂದ್ರಪ್ಪನಿಗೆ ಪರಿಚಿತನಾದ ಗೋವಿಂದಪ್ಪ ಎಂಬ ವ್ಯಕ್ತಿ ಬಂದು 'ನೀನು ಹೀಗೆ ಅಂಗಡಿಯಲ್ಲಿ ಕೂತಿದ್ದರೆ ಜೀವನದಲ್ಲಿ ಮುಂದೆ ಬರೋದು ಯಾವಾಗ? ನನ್ನ ಜೊತೆ ಬಾ, ಒಂದು ದೊಡ್ಡ ಕಂಪನಿ ಪರಿಚಯ ಮಾಡಿಸ್ತೀನಿ, ಅದರಲ್ಲಿ ದುಡ್ಡು ಹಾಕಿದ್ರೆ ಮೂರು ವರ್ಷದಲ್ಲಿ ಡಬಲ್ ಆಗುತ್ತೆ, ಅದರ ಜೊತೆಗೆ ಮಂತ್ಲಿ ಕಮಿಷನ್ ಕೂಡಾ ಬರುತ್ತೆ' ಅಂತಾ ಹೇಳಿ ಬೆಂಗಳೂರಿನ ಜಯನಗರದಲ್ಲಿರುವ ವೆಗಾಜೀಲ್ ಕಂಪನಿಯ ಕಚೇರಿಗೆ ಕರೆದೊಯ್ದರು. ಅದು ಅದ್ದೂರಿ ಎಸಿ ಚೇಂಬರ್. ನೋಡಿದರೇನೇ ದೊಡ್ಡ ಮನುಷ್ಯರ ತರ ಕಾಣೋ ಹಲವಾರು ಜನರು ಆಫೀಸ್ ತುಂಬಾ ಇದ್ದರು. ಅದರಲ್ಲಿ ಭಾರತಿ, ದ್ವಾರಕಾನಾಥ್, ಶಿವಕುಮಾರ್, ಅರುಣ್ ಅನ್ನೋರು ಕಂಪನಿಯ ಸ್ಕೀಮುಗಳನ್ನು ಬೋರ್ಡ್ ಮೇಲೆ ಚಾರ್ಟ್ ಬರೆದು ವಿವರಿಸಿದರು. 'ನಿಮ್ಮ ಹಣ ನೀವು ಯಾವಾಗ ಬೇಕಾದ್ರೂ ವಾಪಸ್ ತೊಗೋಬೋದು. ಯಾವುದೇ ರಿಸ್ಟ್ರಿಕ್ಷನ್ ಇಲ್ಲ' ಅಂತ ಹೇಳಿದರು.

'ನಮಗೆ ಮೂರು ವರ್ಷದಲ್ಲಿ ಡಬಲ್ ಹಣ ಕೊಡೋದು ಹೇಗೆ ಸಾಧ್ಯ' ಅಂತ ಪ್ರಶ್ನಿಸಿದ್ದಕ್ಕೆ, 'ಕಂಪನಿ ಬಿಸಿನೆಸ್ ಗೋಲ್ಡ್ ಬ್ಯುಸಿನೆಸ್ ಮಾಡ್ತಾರೆ, ಎಕ್ಸ್‌ಪೋರ್ಟ್ ಬ್ಯುಸಿನೆಸ್ಸೂ ಇದೆ, ಅದರ ಜೊತೆಗೆ ಷೇರು ಮಾರ್ಕೆಟ್ಟು ವ್ಯವಹಾರಾನೂ ಮಾಡ್ತಾರೆ, ನಿಮ್ಮ ದುಡ್ಡನ್ನು ಅವರು ಒಂದು ವರ್ಷದಲ್ಲೇ ಡಬಲ್ ಮಾಡಿಕೊಂತಾರೆ, ಹೀಗಿದ್ದಾಗ ನಿಮಗೆ ಮೂರು ವರ್ಷಕ್ಕೆ ಡಬಲ್ ಕೊಡೋದಿಕ್ಕೇನು ಕಷ್ಟ? ಮೇಲಾಗಿ ಅವರಿಗೆ ನೂರಾರು ಕೋಟಿ ಆಸ್ತಿಯಿದೆ' ಅಂತೆಲ್ಲಾ ಹೇಳಿ ನಂಬಿಸಿದರು. ಅಷ್ಟು ಸಾಲದೂ ಅಂತ 'ನೀವು ಹೂಡುವ ಹಣಕ್ಕೆ ಒಂದು ಅಗ್ರಿಮೆಂಟ್ ಮಾಡಿಸಿಕೊಡ್ತೀವಿ, ನ್ಯಾಷನಲೈಸ್ಡ್ ಬ್ಯಾಂಕ್‌ನಿಂದ ಗ್ಯಾರಂಟಿ ಲೆಟರ್ ಕೊಡಿಸ್ತೇವೆ, ಕಂಪನಿ ನಿಮಗೆ ದುಡ್ಡು ಕೊಡಲಿಲ್ಲ ಅಂದರೆ ಬ್ಯಾಂಕ್‌ನವರೇ ಕೊಡ್ತಾರೆ' ಅಂತ ಹೇಳಿ ಬ್ಯಾಂಕ್ ಗ್ಯಾರಂಟಿ ಲೆಟರ್‌ನ ಒಂದು ಜೆರಾಕ್ಸ್ ಕಾಪಿಯನ್ನೂ ಕೈಗೆ ಕೊಟ್ಟರು.

ನಂಬಿ ಕೆಟ್ಟೋರ ಮಾತು!

ಇನ್ನೂ ಅನುಮಾನದಲ್ಲೇ ಇದ್ದ ಚಂದ್ರಪ್ಪನನ್ನು ಸೀದಾ ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ಗೇ ಕರೆದೊಯ್ದರು. ಅಲ್ಲಿನ ಬ್ಯಾಂಕ್ ಮ್ಯಾನೇಜರ್‌ಗೆ ಈ ಗ್ಯಾರಂಟಿ ಲೆಟರ್ ತೋರಿಸಿ ಆ ಬಗ್ಗೆ ವಿಚಾರಿಸಲಾಗಿ ಅವರು 'ಇದು ನಮ್ಮ ಬ್ಯಾಂಕ್‌ನವರೇ ಕೊಟ್ಟಿರೋದು, ಒರಿಜಿನಲ್ ಗ್ಯಾರಂಟಿ ಲೆಟರ್. ಕಂಪನಿಯವರು ಅಮೌಂಟ್ ಕೊಡಲಿಲ್ಲ ಅಂದರೆ ಬ್ಯಾಂಕ್‌ನಿಂದ ಕೊಡ್ತೀವಿ' ಅಂತ ಭರವಸೆ ಕೊಟ್ಟಾಗ ಇನ್ನು ಅನುಮಾನ ಪಡಲು ಕಾರಣವೇ ಇರಲಿಲ್ಲ.

ಸೀದಾ ಊರಿಗೆ ಹೋದ ಚಂದ್ರಪ್ಪ ಸಾಧ್ಯವಾದಷ್ಟು ಹಣ ಹೊಂದಿಸಿಕೊಂಡು ಬಂದು ಒಟ್ಟು 1,82,000 ರೂಪಾಯಿಗಳನ್ನು ಕಟ್ಟಿ 7 ಪ್ರೀಮಿಯಂ ಐಡಿ ಗಳನ್ನು ಪಡೆದುಕೊಂಡ. ಕಂಪನಿಯವರು ಮಾತಿನ ಪ್ರಕಾರ ಆತನಿಗೆ ಗೋಲ್ಡ್ ಕಾಯಿನ್‌ಗಳನ್ನೂ ಕೊಟ್ಟರು, ಅಗ್ರಿಮೆಂಟ್ ಲೆಟರ್ ಮತ್ತು ಬ್ಯಾಂಕ್ ಗ್ಯಾರಂಟಿ ಪತ್ರಗಳನ್ನೂ ನೀಡಿದರು. ಇಷ್ಟೆಲ್ಲ ಆದಮೇಲೆ ಚಂದ್ರಪ್ಪನ ಸಂತೋಷಕ್ಕೆ ಪಾರವೇ ಇಲ್ಲ. ತಮ್ಮ ಪಾಲಿನ ಭಾಗ್ಯಲಕ್ಷ್ಮಿ ವೆಗಜೀಲ್ ಕಂಪನಿ ರೂಪದಲ್ಲಿ ಬಂದಿದ್ದಾಳೆ ಎಂದುಕೊಂಡ. ಇಂಥಾ ಕಂಪನಿಯನ್ನು ಪರಿಚಯ ಮಾಡಿಕೊಟ್ಟ ಪುಣ್ಯಾತ್ಮನಿಗೆ ಕೃತಜ್ಞತೆ ಸಲ್ಲಿಸಿ ಊರು ಸೇರಿಕೊಂಡ. ಹೀಗೇ ಒಂದುವಾರ ಕಳೆಯಿತು.

ಹೀಗಿದ್ದಾಗ ಒಂದು ದಿನ ಕಂಪನಿಯ ವಂಚಕರು ಚಂದ್ರಪ್ಪನ ರಾತಿಗಿಳಿದರು. ಮೊದಲಿನಿಂದಲೂ ಹಲವಾರು ಫ್ರಾಡ್‌ಗಳಲ್ಲಿ ಚೆನ್ನಾಗಿ ಪಳಗಿರುವ ಭಾರತಿ ಮತ್ತು ಅರುಣ್ ಇಬ್ಬರೂ ತಮ್ಮ ಮಾರುತಿ ಸ್ವಿಫ್ಟ್ ಕಾರಿನಲ್ಲಿ ಚಂದ್ರಪ್ಪನ ಊರಿಗೆ ಬಂದಿಳಿದರು. "ಏನ್ರೀ ಚಂದ್ರು, ನೀವೊಬ್ಬರೇ ಅನುಕೂಲ ಮಾಡಿಕೊಂಡು ಸುಮ್ಮನೆ ಕೂತುಬಿಟ್ಟರೆ ಹೇಗೆ? ನಿಮ್ಮ ಫ್ರೆಂಡ್ಸು, ರಿಲೇಟಿವ್ಸ್‌ನೆಲ್ಲಾ ಕಂಪನಿಗೆ ಪರಿಚಯ ಮಾಡಿಸಿ. ನಿಮಗೆ ಹೇಗೂ ಕಮಿಷನ್ ಬರುತ್ತೆ ಅವರಿಗೂ ಅನುಕೂಲವಾಗುತ್ತೆ" ಅಂತ ಪುಸಲಾಯಿಸಿದರು. ಅವರಿಬ್ಬರು ತಾವು ಕಂಪನಿಯಿಂದ ಪ್ರತಿ ತಿಂಗಳು ಲಕ್ಷಾಂತರ ಕಮಿಷನ್ ಪಡೆದುಕೊಳ್ಳುತ್ತಿರುವುದಾಗಿ ಹೇಳಿ ಆಸೆ ಹುಟ್ಟಿಸಿದರು. ಅದಕ್ಕೆ ಸಾಕ್ಷಿಯಾಗಿ ಬ್ಯಾಂಕ್ ಪಾಸ್‌ಬುಕ್‌ನಲ್ಲಿ ಅವರ ಖಾತೆಗೆ ಜಮಾ ಆಗಿದ್ದ ಲಕ್ಷಗಟ್ಟಲೆ ಮೊತ್ತದ ಎಂಟ್ರಿ ತೋರಿಸಿದರು. ಮೊದಲೇ ಕಂಪನಿಯನ್ನು ಸಂಪೂರ್ಣವಾಗಿ ನಂಬಿ ತಾನೇ ಹಣ ಹೂಡಿದ್ದ ಚಂದ್ರಪ್ಪ ಮರುಮಾತಾಡದೆ ಅವರನ್ನು ತನ್ನ ಅಕ್ಕನ ಮನೆಗೆ ಕರೆದುಕೊಂಡು ಹೋದ. ರೇಷ್ಮೆ ಕೃಷಿಕರಾದ ಈತನ ಭಾವ ಕೃಷ್ಣಪ್ಪ ತನ್ನ ಬಾಮೈದನ ಮೇಲಿನ ವಿಶ್ವಾಸದಿಂದ ಮೂರು ಲಕ್ಷ ರೂಪಾಯಿ ಕಟ್ಟಿದರು. ಅಲ್ಲಿಂದ ಮತ್ತೊಬ್ಬ ಸಂಬಂಧಿಕರ ಊರಿಗೆ ಹೋಗಿ ಅವರಿಗೂ ಕಂಪನಿಯ ಆಕರ್ಷಕ ಸ್ಕೀಮುಗಳನ್ನು ವಿವರಿಸಿದಾಗ ಅವರೂ ನಂಬಿ ಸರಿಸುಮಾರು 2 ಲಕ್ಷ ರೂಪಾಯಿ ಕಂಪನಿ ಪಾಲಾಯಿತು.

ಈ ಕಂಪನಿಯವರು ಅಷ್ಟಕ್ಕೇ ಸುಮ್ಮನಾಗಲಿಲ್ಲ. ಮುಂದಿನ ವಾರ ಮತ್ತೆ ಚಂದ್ರಪ್ಪನ ಬೆನ್ನು ಹತ್ತಿದರು. "ಏನ್ರೀ ಚಂದ್ರು, ಇಷ್ಟೇನಾ ನಿಮ್ಮ ಸಾಮರ್ಥ್ಯ? ನಿಮ್ ಫ್ರೆಂಡ್ಸು ಎಲ್ಲೆಲ್ಲಿ ಇದ್ದಾರೆ ಹೇಳಿ, ಹೋಗೋಣ. ನಾವೇ ಕನ್ವಿನ್ಸ್ ಮಾಡಿ ಮಾತಾಡ್ತೀವಿ" ಅಂದರು. ಯಾವ ಅನುಮಾನವೂ ಇಲ್ಲದೆ ಚಂದ್ರಪ್ಪ ತಮ್ಮ ಗೆಳೆಯರಾದ ಬಂಡಯ್ಯನಪಾಳ್ಯದ ಹನುಮಯ್ಯ ಬಳಿಗೆ ಕರೆದೊಯ್ದ. ಚಂದ್ರಪ್ಪನ ಆತ್ಮೀಯನಾದ ಹನುಮಯ್ಯನಿಂದ ಮೂರು ಲಕ್ಷ ಠೇವಣಿ ಪಡೆದುಕೊಂಡ ಕಂಪನಿಯ ವಕ್ತಾರರು ಹನುಮಯ್ಯ ವ್ಯವಹಾರಸ್ಥ ಎಂಬುದನ್ನು ತಿಳಿದುಕೊಂಡು ಆತನನ್ನೂ ಕಂಪನಿಯ ಏಜೆಂಟನನ್ನಾಗಿ ಮಾಡಿಕೊಂಡರು.

ಹೀಗೆ ಚಂದ್ರಪ್ಪ ಚೂಡಹಳ್ಳಿ, ಸಾಲುಹುಣಿಸೆ ಸುತ್ತಮುತ್ತಲ ಊರುಗಳಲ್ಲಿರುವ ಹಲವಾರು ಗೆಳೆಯರನ್ನು ಸಂಪರ್ಕಿಸಿ ಒಟ್ಟು 28 ಲಕ್ಷ ರೂಪಾಯಿಗಳನ್ನು ಕಂಪನಿಗೆ ಜಮಾ ಮಾಡಿಸಿದ. ಇಷ್ಟೆಲ್ಲಾ ನಡೆದದ್ದು ಕಳೆದ ವರ್ಷ ಆಗಸ್ಟ್‌ನಲ್ಲಿ. ಆದರೆ ಈ ವೆಗಾಜೀಲ್ ಎಂಬ ಚೊಂಬು ಕಂಪನಿ ಇವರ್‍ಯಾರಿಗೂ ಅಗ್ರಿಮೆಂಟ್ ಆಗಲಿ, ಬ್ಯಾಂಕ್ ಗ್ಯಾರಂಟಿ ಪತ್ರವನ್ನಾಗಲಿ ಯಾವುದನ್ನೂ ಕೊಡಲಿಲ್ಲ. ದಿನಕ್ಕೊಂದು ಸಬೂಬು ಹೇಳುತ್ತಾ ಬಂದರು. ಅದೂ ಸಾಲದೆಂಬಂತೆ ಪ್ರತಿ ತಿಂಗಳು ಕೊಡಬೇಕಿದ್ದ ಬಡ್ಡಿ ಹಣವನ್ನೂ ನೀಡದೆ ಸತಾಯಿಸಲು ಶುರುವಿಟ್ಟುಕೊಂಡರು. ಇದರಿಂದ ಬೇಸರಗೊಂಡ ಚಂದ್ರಪ್ಪ ಕಂಪನಿಗೆ ಹೊಸಬರನ್ನು ಪರಿಚಯಿಸುವುದನ್ನು ನಿಲ್ಲಿಸಿ ಕಟ್ಟಿರುವ ಹಣಕ್ಕೆ ಗ್ಯಾರಂಟಿ ಪಡೆದುಕೊಳ್ಳಲು ಪ್ರಯತ್ನಿಸುತ್ತಿರುವಾಗಲೇ ಇದೇ ರೀತಿ ಕಂಪನಿಯವರು ನೂರಾರು ಜನರಿಗೆ ಯಾಮಾರಿಸಿದ್ದು ಅವರೆಲ್ಲಾ ಕಚೇರಿಗೆ ಸುತ್ತುತ್ತಿರುವುದು ತಿಳಿದುಬಂತು. ಇತ್ತ ಚಂದ್ರಪ್ಪ ಸಂತ್ರಸ್ತರ ಜೊತೆ ಸೇರಿ ಸತತವಾಗಿ ಎರಡು ಮೂರು ತಿಂಗಳು ಕಂಪನಿಯ ಮುಂದೆ ಗಲಾಟೆ ಮಾಡುತ್ತಿದ್ದರೆ, ಅತ್ತ ಆತನ ಊರಿನಲ್ಲಿ ಈತನನ್ನು ನಂಬಿ ಹಣ ಹಾಕಿದವರು "ನಮಗೆ ಯಾವ ಕಂಪನಿಯೂ ಗೊತ್ತಿಲ್ಲ, ನಮ್ಮ ದುಡ್ಡು ನೀನೇ ವಾಪಸ್ ಕೊಡಬೇಕು" ಅಂತ ಚಂದ್ರಪ್ಪನ ಬೆನ್ನು ಹತ್ತಿದ್ದಾರೆ.

ಚಂದ್ರಪ್ಪನ ಪಾಲಿಗೆ ಭಾಗ್ಯಲಕ್ಷ್ಮಿಯಂತೆ ಕಾಣಿಸಿಕೊಂಡ ಕಂಪನಿ ಈಗ ಆತನ ಪಾಲಿನ ಶನಿಯಾಗಿ ಹೆಗಲೇರಿಬಿಟ್ಟಿದೆ. ಈಗ ಬೇರೆ ವಿಧಿಯಿಲ್ಲದೆ ಚಂದ್ರಪ್ಪ ತಾನು ಕಮೀಷನ್ ರೂಪದಲ್ಲಿ ಪಡೆದುಕೊಂಡಿದ್ದ ಹಣ ಕಂಪನಿಗೆ ವಾಪಸ್ ಕಟ್ಟಲು ತಯಾರಾಗಿರುವುದಾಗಿಯೂ, ತನ್ನ ಕಡೆಯವರ ಒಟ್ಟು ಹಣವನ್ನು ತಮಗೆ ವಾಪಸ್ ಕೊಡಿಸಬೇಕೆಂದೂ ಪೊಲೀಸರಿಗೆ ದೂರು ಕೊಟ್ಟಿದ್ದಾನೆ. ಪ್ರಕರಣ ಯಾವ ರೂಪ ಪಡೆಯುತ್ತದೋ ಕಾದು ನೋಡಬೇಕಿದೆ.

• ದೊಡ್ಡಿ ಮೂರ್ತಿ

ಉತ್ತರ ಕನ್ನಡ: ಯಡ್ಡಿ ಮುಂಡಕ್ಕೆ ಕುಮಾರಣ್ಣನ ರುಂಡ ಜೋಡಿಸಿದ ಶಾಸಕ!


• ನಹುಪ



ಗಾಳಿಯಲ್ಲಿ ಹಡಗು ಬಿಟ್ಟು ಪ್ರಚಾರ ಪಡೆಯುವ ಕುಶಲ ಕರಗತ ಮಾಡಿಕೊಂಡಿರುವ ಹಳಿಯಾಳ-ಜೋಯಿಡಾ ಶಾಸಕ ಸುನಿಲ್ ಹೆಗಡೆಯ ಸೋಗಲಾಡಿತನ ಮತ್ತೆ ಸುದ್ದಿಯಾಗುತ್ತಿದೆ! ಉತ್ತರ ಕನ್ನಡದಲ್ಲಿ 'ಗಿಮಿಕ್ ಪೋರ' ಎಂದೇ ಕುಪ್ರಸಿದ್ಧನಾಗಿರುವ ಈ ಎಮ್ಮೆಲ್ಲೆ ಕೆಲತಿಂಗಳ ಹಿಂದೆ ಒಂದರ ಹಿಂದೊಂದರಂತೆ ಎರಡೆರಡು ಪಾದಯಾತ್ರೆ ಮಾಡಿ ಗೌಜೆಬ್ಬಿಸಿದ್ದ. ಜನೋದ್ಧಾರದ ಸೋಗಿನ ಈ ಪ್ರಚಾರ ಯಾತ್ರೆಯ ಮಹಾ ದಗಲುಬಾಜಿ ಪುರಾಣದ ಉಪಕತೆಯೊಂದು ಈಗ ಬಿತ್ತರವಾಗಿದೆ. ಸುನಿಲ್ ಹೆಗಡೆ ಸ್ವಕ್ಷೇತ್ರದ ಮುಗ್ಧರನ್ನು ಮರಳು ಮಾಡಲು ಹಂಚಿರುವ ಕ್ಯಾಲೆಂಡರ್‌ನಲ್ಲಿ ಮಾಜಿ ಸಿಎಂ ಯಡ್ಡಿ ಮಹಾತ್ಮನ ಮುಂಡಕ್ಕೆ ತನ್ನ ಧಣಿ ಕುಮಾರಸ್ವಾಮಿಯ ರುಂಡ ಮಾರ್ಫಿಂಗ್ ಮಾಡಿ ಸಿಕ್ಕಿಬಿದ್ದಿರುವುದು ಮೋಜಾಗಿದೆ. ಬಯಲಾಗಿರುವ ಶಾಸಕ ಸಾಹೇಬರ ಬಣ್ಣ-ಬೂಟಾಟಿಕೆ ಬಿಟ್ಟಕಣ್ಣು ಬಿಡದೆ ಆಶ್ಚರ್ಯಾಘಾತದಿಂದ ಜನ ನೋಡುತ್ತಿದ್ದಾರೆ....

ಶಾಸಕ ಸುನಿಲ್ ಹೆಗಡೆಯ ರಾಜಕಾರಣದ ಗ್ರಾಫೇ ರೋಚಕ! ಧಡಪ್‌ಶಾಹಿ ಆರ್.ವಿ. ದೇಶಪಾಂಡೆ ಸತತ





ಇಪ್ಪತ್ತೈದು ವರ್ಷ ಒಂದೇಸಮನೆ ತಿಂದು ಬರಡಾಗಿಸಿದ ಹಳಿಯಾಳ ಕ್ಷೇತ್ರ ಈಗ ಈ ಸುನಿಲ್ ಹೆಗಡೆಯ ಕಬ್ಜಾದಲ್ಲಿದೆ.

ಕಳೆದ ಅಸೆಂಬ್ಲಿ ಎಲೆಕ್ಷನ್ ಹೊತ್ತಲ್ಲಿ ದೇಶಪಾಂಡೆ-ಹೆಗಡೆ-ಸುನಿಲ್ ನಡುವಿನ ಪವರ್ ಮತ್ತು ಪಾಲಿಗಾಗಿನ ಶೀತಲ ಸಮರ ಇದ್ದಕ್ಕಿದ್ದಂತೆ ಆಸ್ಫೋಟಿಸಿ ಬಿಟ್ಟಿತು! ಈ ಈರ್ಷ್ಯೆ ಅದೆಲ್ಲಿಗೆ ಹೋಯ್ತೆಂದರೆ, ಸುನಿಲ್ ಹೆಗಡೆಯೇ ಜೆಡಿಎಸ್ ಕ್ಯಾಂಡಿಡೇಟಾಗಿ ಸಾಕ್ಷಾತ್ ದೇಶಪಾಂಡೆ ಸಾಹೇಬರೆದುರು ಸೆಡ್ಡು ಹೊಡೆದು ನಿಂತುಬಿಟ್ಟಿದ್ದ! ದೇಶಪಾಂಡೆಯ 'ಕರ್ಮಗೇಡಿತನ' ಕಂಡು-ಕಂಡೂ ಬೇಸತ್ತಿದ್ದ ಜನರ ಮಧ್ಯೆ ಗಿಮಿಕ್-ಚಮಕ್ ಮಾಡಿ ಸುನಿಲ್ ಶಾಸಕನಾಗಿ ಗೆದ್ದೂಬಿಟ್ಟ!!

ಪ್ರಚಾರ ಯಾತ್ರೆಯ ಖಯಾಲಿಯ ಈ ಎಮ್ಮೆಲ್ಲೆ ಮೊದಲು ಪಾದಯಾತ್ರೆ ಮಾಡಿದ್ದು ಜೋಯಿಡಾ ಎಂಬ ಕಗ್ಗತ್ತಲು-ಕಗ್ಗಾಡಿನ ತಾಲ್ಲೂಕಿನಲ್ಲಿ. ದಿನದ ಇಪ್ಪತ್ನಾಲ್ಕೂ ತಾಸು ಮುಗ್ಧ ಮಂದಿಯ ಕಿವಿ ಮೇಲೆ ಹೂ ಇಡುವುದು ಹೇಗೆಂದು ಯೋಚಿಸುವ ಸುನಿಲ್ ಹೆಗಡೆಗೆ ಜೋಯಿಡಾದ ವನವಾಸಿಗಳ ಗೋಳು ಆಕರ್ಷಕವಾಗಿ ಕಂಡಿತು! ಆಗ ಶುರುವಾಯ್ತು ಪಾದಯಾತ್ರೆ ನಂಬರ್ 1. ಅರ್ಥಾತ್ ಜೋಯಿಡಾ ಸಮಸ್ಯೆ ಪರಿಹಾರಕ್ಕೆ ಪಾದಯಾತ್ರೆ.

ಸುನಿಲ್ ಹೆಗಡೆ ಪ್ರತಿನಿಧಿಸುವ ಜೋಯಿಡಾ ಸಮಸ್ಯೆಗಳ ನರಕಕೂಪ ಎಂಬುದರ ಬಗ್ಗೆ ಎರಡು ಮಾತಿಲ್ಲ. ಜೋಯಿಡಾ ಎಂದರೆ ಶಿಲಾಯುಗದ ಪಳಿಯುಳಿಕೆ. ಇಲ್ಲಿಯ ಜನರಿಗೆ ಕಟ್ಟಕಡೆಯ ಕನಿಷ್ಠ ಸೌಲಭ್ಯವೂ ಇಲ್ಲ. ಆದರೆ ಸುನಿಲ್ ಹೆಗಡೆಯಾಗಲಿ, ಆತನ ಎದುರಾಳಿ ದೇಶಪಾಂಡೆಯಾಗಲಿ ಎಂದೂ ಈ ಜನರ ನೋವು-ಕಷ್ಟ ನೀಗುವ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇ ಇಲ್ಲ. ಬದಲಿಗೆ ಈ ಯಾತನೆ-ಅಸಹಾಯಕತೆಗಳನ್ನೇ ಬಂಡವಾಳ ಮಾಡಿಕೊಂಡು ಬೇಳೆ ಬೇಯಿಸಿಕೊಳ್ಳುತ್ತ ಬಂದಿದ್ದಾರೆ. ಈ ಜೋಯಿಡಾದ ಕೇಂದ್ರ ಸ್ಥಾನದಲ್ಲಿ ಮುನ್ಸಿಪಾಲಿಟಿ ತರಹದ ಸ್ಥಳೀಯಾಡಳಿತವಿಲ್ಲ. ಇಡೀ ರಾಜ್ಯದಲ್ಲಿ ತಾಲ್ಲೂಕು ಕೇಂದ್ರ ಒಂದರಲ್ಲಿ ಗ್ರಾಮ ಪಂಚಾಯ್ತಿ ಪಾರುಪತ್ಯವಿದ್ದರೆ, ಅದು ಜೋಯಿಡಾದಲ್ಲಿ ಮಾತ್ರ!

ಈ ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಇವತ್ತಿಗೂ ಸರಿಯಾದ ರಸ್ತೆಯಿಲ್ಲ. ಹಳ್ಳ-ಕೊಳ್ಳಗಳಿಗೆ ಕಾಲುಪಂಕ-ಸೇತುವೆಗಳಿಲ್ಲ. ಶಾಲೆ, ಆಸ್ಪತ್ರೆ ಯಾವುದೂ ಇಲ್ಲ. ಇದ್ದರೂ ಹೆಸರಿಗಷ್ಟೇ. ಮೆಡಿಕಲ್ ಶಾಪ್ ದೂರದ ಮಾತು. ವಿದ್ಯಾಸಂಸ್ಥೆಗಳಿಲ್ಲ. ಗರ್ಭಿಣಿಯರನ್ನು ಅಥವಾ ರೋಗಿಗಳನ್ನು ನಗರದ ಆಸ್ಪತ್ರೆಗೊಯ್ಯಬೇಕೆಂದರೆ, ಉದ್ದದ ಕಟ್ಟಿಗೆಯ ಎಳೆಗೆ ಕಂಬಳಿಯನ್ನು ಜೋಲಿ ಬಿಟ್ಟು ಅದರಲ್ಲಿ ಪೇಷಂಟ್ ಮಲಗಿಸಿ ಹೊತ್ತೊಯ್ಯಬೇಕು. ಇದೇ ಜೋಯಿಡಾದವರ ಆಂಬುಲೆನ್ಸ್! ಇದಕ್ಕಿಂತಲೂ ಘನಘೋರವಾದ ದುರಂತ ಜೋಯಿಡಾದಲ್ಲಿ ಮತ್ತೊಂದಿದೆ. ಇಲ್ಲಿ ಹುಟ್ಟಿ ಹರಿಯುವ ಬರೀ 175 ಕಿ.ಮೀ. ಉದ್ದದ ಪುಟ್ಟ ಕಾಳಿ ನದಿಗುಂಟ ಬರೋಬ್ಬರಿ ನಾಲ್ಕು ಡ್ಯಾಮ್ ಕಟ್ಟಿ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ದೇಶದ ಮತ್ತೆಲ್ಲೂ ಇಷ್ಟು ಪುಟ್ಟ ನದಿಗೆ ನಾಲ್ಕು ಆಣೆಕಟ್ಟು ಕಟ್ಟಿ ವಿದ್ಯುತ್ ಉತ್ಪಾದಿಸುತ್ತಿಲ್ಲ.



ನಾಡಿಗೆ ಬೆಳಕು ಕೊಡುತ್ತಿರುವ ಜೋಯಿಡಾದ ಜನರು ಮಾತ್ರ ಗಾಢಾಂಧಕಾರದಲ್ಲಿದ್ದಾರೆ. ಈ ಯೋಜನೆಗಾಗಿ ಸ್ಥಳೀಯರು ಸಾವಿರಾರು ಎಕರೆ ಭೂಮಿ ಕಳೆದುಕೊಂಡಿದ್ದಾರೆ. ಮನೆ-ಮಠ; ಹೊಲ-ತೋಟ ಕಳೆದುಕೊಂಡವರಿಗೆ ಸರಿಯಾದ ಪರಿಹಾರ-ಪುನರ್‌ವಸತಿ ಸರ್ಕಾರಿ ಮಂದಿ ಕಲ್ಪಿಸಿಲ್ಲ. ಎಕರೆಗೆ ಬರೀ ಮೂರು ಸಾವಿರ ರೂಪಾಯಿ ಸರ್ಕಾರಿ ವಿದ್ಯುತ್ ಉತ್ಪಾದನಾ ಏಜೆನ್ಸಿ ಕೆ.ಪಿ.ಸಿ (ಕರ್ನಾಟಕ ಪವರ್ ಕಾರ್ಪೊರೇಷನ್) ಕೊಟ್ಟು ಪರಾರಿಯಾಗಿದೆ. ಅಷ್ಟೇ ಅಲ್ಲ ಈ ಕೆಪಿಸಿ ಖದೀಮರಾಗಲಿ, ಆಳುವ ಖೂಳರಾಗಲಿ ಕಾಳಿ ನದಿಯ ಉಗಮ ಸ್ಥಾನ 'ಡಿಗ್ಗಿ' ಗ್ರಾಮಕ್ಕೆ ವಿದ್ಯುತ್ ಸಂಪರ್ಕ ಕೊಟ್ಟಿಲ್ಲ. ಶಾಸಕನಾಗಿ ನಾಲ್ಕು ವರ್ಷವಾದರೂ ಸುನಿಲ್ ಹೆಗಡೆ ಎಂಬ ಸೋಗಲಾಡಿಗೂ 'ಡಿಗ್ಗಿ'ಯ ಕಾರ್ಗತ್ತಲು ಕಾಣಿಸಿಲ್ಲ!

ಇದೇ ಡಿಗ್ಗಿಯಲ್ಲಿ ಪಾದಯಾತ್ರೆಗಿಂತ ಕೊಂಚ ಮೊದಲು ಸುನಿಲ್ ತನ್ನ ಬಾಸ್ ಕುಮಾರಸ್ವಾಮಿ ಸ್ಟೈಲ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಊರಜನ ವಿದ್ಯುತ್ ಕೊಡಿ ಎಂದು ಅಂಗಲಾಚಿದರು. ಸರಿ, ನಾಳೆಯೇ ವಿದ್ಯುತ್ ವ್ಯವಸ್ಥೆ ಮಾಡಿಸ್ತೇನೆ ಎಂದರು ಸುನಿಲ್. ಅಲ್ಲೇ ದನಗರ ಗೌಳಿಯೊಬ್ಬರ ಮನೆಯಲ್ಲಿ ಉಂಡು ಮಲಗಿದರು. ಬೆಳಿಗ್ಗೆ ಎದ್ದು ಹೋದರು. ಭರವಸೆಯೂ ಕಾಳಿ ಪಾಲಾಯ್ತು.

ಸುನಿಲ್ ಹೆಗಡೆ ಬಿಳಿ ಲುಂಗಿ-ಬಿಳಿ ಅಂಗಿ ಹಾಕಿಕೊಂಡು ತಮ್ಮ ಪಕ್ಷದ 'ಮಣ್ಣಿನ ಮಗ' ದೇವೇಗೌಡರ ಗೆಟಪ್‌ನಲ್ಲಿ ಕಾಣಿಸಿಕೊಂಡರು. ದಣಿವಾದಾಗ ಆರಳಿ ಕಟ್ಟೆ, ದೊಡ್ಡ ಮರದ ಬುಡದಲ್ಲಿ ಕುಂತರು. ಕಾಲಿಗೆ ಗುಳ್ಳೆ ಎದ್ದವೆಂದು ಬ್ಯಾಂಡೇಜು ಕಟ್ಟಿಕೊಂಡರು. ಡಾಕ್ಟರ್‌ಗಳು ಬಿಪಿ-ಟೆಂಪ್ರೇಚರ್ ನಿಯಮಿತವಾಗಿ ಪರೀಕ್ಷಿಸುತ್ತ ಹಿಂದಿಂದೇ ಓಡಿದರು. ಶಾಸಕರ ಹೆಂಡತಿ ಸುವರ್ಣ ಪಾದಯಾತ್ರೆಯುದ್ದಕ್ಕೂ ಕಂಬನಿಗರೆಯುತ್ತ ಗಂಡನ ಸೇವೆ ಮಾಡಿದರು; ಕೊನೆಯ ದಿನದ ಬೃಹತ್ ಶೋಗೆ ಕುಮಾರಸ್ವಾಮಿಯೇ ಜೆಡಿಎಸ್ ದಂಡಿನೊಂದಿಗೆ ಬಂದರು. ಆ ಸಭೆಯಲ್ಲೂ ಸುನಿಲ್ ಹೆಂಡತಿ ಗಂಡನ ಗುಳ್ಳೆಯೆದ್ದ ಕಾಲುಗಳನ್ನು ತೊಡೆ ಮೇಲಿಟ್ಟುಕೊಂಡು ಅತ್ತರು. ಸೇರಿದ ಜನ ಗಿಮಿಕ್‌ಗೆ ಚಿತ್ತಾದರೆಂದು ಕುಮಾರಸ್ವಾಮಿಯಾದಿಯಾಗಿ ಸುನಿಲ್ ಹೆಗಡೆ, ಆತನ ಅಪ್ಪ ಮಾಜಿ ಎಮ್ಮೆಲ್ಸಿ ವಿ.ಡಿ. ಹೆಗಡೆಗಳೆಲ್ಲ ಒಳಗೊಳಗೇ ಪುಳಕಿತರಾದರು.

ಸುನಿಲ್ ಹೆಗಡೆಯ ಪಾದಯಾತ್ರೆ 'ಪರಾಕ್ರಮ'ದಿಂದ ಇಡೀ ಜೋಯಿಡಾ ತಾಲ್ಲೂಕಲ್ಲಿ ಗೊಂದಲ-ಗೌಜಿ ಎದ್ದಿತು. ಸ್ಥಳೀಯ ಪತ್ರಿಕೆಗಳಲ್ಲಿ ನಾಲ್ಕು-ನಾಲ್ಕು ಪುಟಗಳ ಪ್ರಾಯೋಜಿತ ಪುರವಣಿ ಮಾಡಿಸಿಕೊಂಡು ವಿವಿಧ ವಿನೋದಾವಳಿಯ ಫೋಟೋ ಹಾಕಿಸಿಕೊಂಡು ಖುಷಿಗೊಂಡರು. ಪುಟಗಟ್ಟಲೆ ಹೊಗಳಿಕೆಯ ವರದಿ ಬರೆಸಿಕೊಂಡರು. ಆದರೆ ಆಗಿದ್ದೇನು?

ಪಾದಯಾತ್ರೆ ಮುಗಿದು ನಾಲ್ಕೈದು ತಿಂಗಳುಗಳೇ ಕಳೆದುಹೋಗಿದೆ. ಕಾಳಿಯಲ್ಲಿ ಸಾಕಷ್ಟು ನೀರು ಹರಿದುಹೋಗಿದೆ. ಕಾಳಿ ವಿದ್ಯುತ್ ಯಾರ್‍ಯಾರೋ ಬಂಗಲೆ-ಫ್ಯಾಕ್ಟರಿ ಬೆಳಗಿದೆ. ಆದರೆ ಜೋಯಿಡಾ ಒಂದಿಂಚೂ ಬದಲಾಗಿಲ್ಲ. ಯಾವ ಸಮಸ್ಯೆ-ಸಂಕಷ್ಟವೂ ಕಮ್ಮಿಯಾಗಿಲ್ಲ. ಜಿಲ್ಲಾ ಪಂಚಾಯ್ತಿ-ತಾಲ್ಲೂಕು ಪಂಚಾಯ್ತಿ ಇಲೆಕ್ಷನ್‌ಗಳಲ್ಲಿ ಸೋತು ಕಂಗಾಲಾಗಿದ್ದ ಸುನಿಲ್ ಹೆಗಡೆ-ವಿ.ಡಿ. ಹೆಗಡೆ ಪಕ್ಕಾ ಸ್ಟಂಟ್ ಮಾಸ್ಟರ್‌ಗಳೆಂಬುದು ಜೋಯಿಡಾದ ಜನರಿಗೆ ಗೊತ್ತಾಗಿದೆ.

ಜೋಯಿಡಾದಲ್ಲಿ ಸುನಿಲ್ ಹೆಗಡೆ-ಅವನಪ್ಪ ವಿ.ಡಿ. ಹೆಗಡೆ ಎಂಬ ಕಂತ್ರಿ ಪುಢಾರಿ ನಡೆಸಿದ ಶೋ ಆರಂಭದಲ್ಲಿ ಸೂಪರ್‌ಹಿಟ್‌ನಂತೆ ಅವರಿಗೆ ಗೋಚರಿಸಿತ್ತು. ದಿನಗಳೆದಂತೆ ಪರಿಣಾಮ ಫ್ಲಾಪ್ ಎಂಬುದು ಖಾತ್ರಿಯಾಗಿ ಹೋಯ್ತು. ಆಗ ಮತ್ತೆ ಜನಸಾಮಾನ್ಯರ ದಿಕ್ಕೆಡಿಸಿ ಚಲಾವಣೆಯಲ್ಲಿರಲು ಅಪ್ಪ-ಮಗ ಮತ್ತೊಂದು ಪಾದಯಾತ್ರೆ ಮಾಡಿದರು. ಈ ಬಾರಿಯ ಪ್ರಚಾರ ಯಾತ್ರೆ ನಡೆದಿದ್ದು ಹಳಿಯಾಳ ತಾಲ್ಲೂಕಲ್ಲಿ. ಈ ಹಳಿಯಾಳ ರೈತರೇ ಹೆಚ್ಚಿರುವ ಊರು. ಕಬ್ಬು ಬೆಳೆಗಾರರು, ಹತ್ತಿ-ಬತ್ತ ಬೆಳೆವವರು ಇಲ್ಲಿದ್ದಾರೆ. ಇವರಿಗೆಲ್ಲ ಕೃಷಿಯೇ ಜೀವ-ಜೀವಾಳ. ಕೃಷಿಗೆ ಬೇಕಾದ ನೀರಾವರಿ ಯೋಜನೆ ಇಲ್ಲ. ಪಾಳೇಗಾರನಂತಿರುವ ದೇಶಪಾಂಡೆಗೆ ರೈತರು ಉದ್ಧಾರವಾಗುವುದು ಬೇಡವಾಗಿತ್ತು. ಆಗ ದೇಶಪಾಂಡೆಗೆ ರೈತರ ಬೇಡಿಕೆ ಈಡೇರಿಸದಂತೆ ಒತ್ತಾಸೆಯಾಗಿ ನಿಂತಿದ್ದು ಇದೇ ಅಪ್ಪ-ಮಗ. ಈ ಫ್ಯೂಡಲ್ ದೊರೆಗಳಿಗೆ ರೈತರು ಆರ್ಥಿಕವಾಗಿ ಅಭಿವೃದ್ಧಿಯಾದರೆ ತಮ್ಮ ಅಂಕಿತದಲ್ಲಿರುವುದಿಲ್ಲ ಎಂಬ ಭಯವಿತ್ತು. ಹಾಗಾಗಿ ದೇಶಪಾಂಡೆ ಕಾಲದಲ್ಲಿ ವಿ.ಡಿ. ಹೆಗಡೆ-ಸುನಿಲ್ ಹೆಗಡೆ ನೀರಾವರಿ ಯೋಜನೆಗಾಗಿ ಪ್ರಯತ್ನಿಸಿದ್ದೇ ಇಲ್ಲ.



ಆದರೆ ಶಾಸಕನಾಗುತ್ತಲೇ ಸುನಿಲ್‌ಗೆ ದೇಶಪಾಂಡೆಯನ್ನು ಹಣಿಯಲು ಈ ನೀರಾವರಿ ಯೋಜನೆ ಅಸ್ತ್ರವಾಗಿ ಹೋಯ್ತು. ತಾನು ನೀರಾವರಿ ಹರಿಕಾರನೆಂಬಂತೆ ಭೋಂಗು ಬಿಡತೊಡಗಿದ. ದೇಶಪಾಂಡೆಗೆ ಈ ಯೋಜನೆಯಲ್ಲಿ ಆಸಕ್ತಿ



ಇಲ್ಲ. ಆತ ರೈತ ಶತ್ರು-ತಾನು ರೈತ ಮಿತ್ರ ಎಂದು ಬಡಬಡಿಸತೊಡಗಿದ. 2009 ರಲ್ಲಿ ಕಾಳಿ ನದಿಯ ಉಗಮ ಸ್ಥಾನ ಡಿಗ್ಗಿಯಿಂದ ಕೊಳವೆ ಮಾರ್ಗದ ಮೂಲಕ ಕಾಳಿ ನೀರನ್ನು ಹಳಿಯಾಳದ ಕೃಷಿ ಭೂಮಿಗೆ- ಕೆರೆಗಳಿಗೆ ಪೂರೈಸುವ ನೀಲನಕ್ಷೆ ರೆಡಿ ಮಾಡಿ ರೈತರಿಗೆಲ್ಲ ತೋರಿಸಿದ. ರೈತರು ಸಹಜವಾಗೇ ಖುಷಿಗೊಂಡರು.

ಹಾಗಂತ ಯೋಜನೆಗೆ ಚಾಲನೆ ಮಾತ್ರ ಸಿಗಲೇ ಇಲ್ಲ. ಅಂದು ಸಿಎಂ ಆಗಿದ್ದ ಯಡ್ಡಿಗೆ ಈ ನೀಲ ನಕ್ಷೆ ಕೊಟ್ಟಿದ್ದು ಬಿಟ್ಟರೆ ಸುನಿಲ್‌ನಿಂದ ಏನೂ ಮಾಡಲಾಗಲಿಲ್ಲ. ಆದರೆ ರೈತರು ಮಾತ್ರ ಚಾತಕಪಕ್ಷಿಯಂತೆ ತಮ್ಮ ಭೂಮಿ ಹಸಿರು ಮಾಡಬಲ್ಲ ಯೋಜನೆಗಾಗಿ ಕಾಯುತ್ತಾ ಕುಂತಿದ್ದರು. ಇದು ಸುನಿಲ್ ಮತ್ತು ವಿ.ಡಿ. ಹೆಗಡೆಗೆ ಗೊತ್ತಿತ್ತು. ಜೋಯಿಡಾ ಪಾದಯಾತ್ರೆ ಪ್ರಹಸನದಿಂದ ಶೂನ್ಯ ಸಂಪಾದನೆ ಮಾಡಿದ್ದ ವಿಡಿ-ಸುನಿಲ್ ಹಳಿಯಾಳ ಶೋ ಹಮ್ಮಿಕೊಂಡರು. ಕಾಳಿ ನೀರಾವರಿ ಯೋಜನೆಗಾಗಿ ಪಾದಯಾತ್ರೆ ಎಂದು ಬಿಂಬಿಸಿಕೊಂಡು ಸುನಿಲ್ ನೀರಾವರಿ ಅವಶ್ಯವಿರುವ ಗದ್ದೆಗಳ ಗುಂಟ ಲುಂಗಿ ತೊಟ್ಟು ನಡೆದಾಡಿದರು. ಆದರೆ ಇದೊಂದು ಕಾರ್ಯಸಾಧು (ಫೀಸಿಬಲಿಟಿ) ಯೋಜನೆ ಎಂದು ಸರ್ಕಾರದಿಂದ ಘೋಷಿಸಲಿಕ್ಕೇ ಶಾಸಕ ಹೆಗಡೆಯಿಂದ ಈವರೆಗೆ ಆಗಿಲ್ಲ. ಆದರೆ ಹಳಿಯಾಳದ ಬಡಪಾಯಿ ರೈತರನ್ನು ಮಾತ್ರ ಯಶಸ್ವಿಯಾಗಿ ದಾರಿ ತಪ್ಪಿಸಿ ಪಾಲಿಟಿಕಲ್ ಮೈಲೇಜ್ ಸುನಿಲ್ ಪಡೆಯುತ್ತಿದ್ದಾರಷ್ಟೇ!

▶13

ಶಾಸಕ ಸುನಿಲ್ ವಿಷ ಕುಡಿಯಲಿಲ್ಲ!!

ಹಳಿಯಾಳ-ಜೋಯಿಡಾ ಶಾಸಕ ಸುನಿಲ್ ಹೆಗಡೆ ಸುಳ್ಳು ಹೇಳೋದರಲ್ಲಿ ನಿಸ್ಸೀಮ;

ಜಿಲ್ಲಾ ಉಸ್ತುವಾರಿ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿ ಎಂಬ ವೈದಿಕವಾದಿ ಚೆಡ್ಡಿ ಚತುರ ತನ್ನ ಶಿರಸಿಯನ್ನು ಕೇಂದ್ರವಾಗಿಟ್ಟುಕೊಂಡು ಬ್ರಾಹ್ಮಣ ಸಾಮ್ರಾಜ್ಯ ಕಟ್ಟಲು ತನ್ನ ಮಂತ್ರಿಗಿರಿ ಅಧಿಕಾರ ಪ್ರಯೋಗಿಸುತ್ತಿದ್ದಾರೆ. ಆತ ಜಿಲ್ಲಾ ಕೇಂದ್ರ ಕಾರವಾರದ ಮಹತ್ವ ಕಡಿಮೆ ಮಾಡಿ ಬ್ರಾಹ್ಮಣ ಸೀಮೆಯ ಶಿರಸಿ ಶ್ರೇಷ್ಠ ಮಾಡಲು ಹಿಕಮತ್ತು ಮಾಡುತ್ತಿದ್ದಾರೆ. ಹಾಗಾಗಿ ಜಿಲ್ಲಾ ಕೇಂದ್ರದಲ್ಲಿದ್ದ ಹಲವು ಮುಖ್ಯ ಸರ್ಕಾರಿ ಕಚೇರಿಗಳನ್ನು ಆತ ಮಂತ್ರಿಗಿರಿ ಬಲದಿಂದ ರಾತ್ರೋರಾತ್ರಿ ಶಿರಸಿಗೆ ಬದಲಿಸಿ ಪ್ರತಿಷ್ಠಾಪಿಸಿದ್ದಾರೆ.

ಹಳಿಯಾಳದಲ್ಲಿ ತುಂಬಾ ವರ್ಷದಿಂದ ಇದ್ದ ಸಣ್ಣ ನೀರಾವರಿ ಇಲಾಖೆಯ ಕಾರ್ಯನಿರ್ವಾಹಕ ಇಂಜಿನಿಯರ್ ಕಚೇರಿಯನ್ನು ಕಾಗೇರಿ ಶಿರಸಿಗೆ ಸ್ಥಳಾಂತರಿಸಿದಾಗ ಜಿಲ್ಲೆಯಲ್ಲಿ ದೊಡ್ಡ ಪ್ರತಿಭಟನೆ ಎದ್ದಿತ್ತು. ಹಳಿಯಾಳ-ಯಲ್ಲಾಪುರ-ಮುಂಡಗೋಡ ಭಾಗದಲ್ಲಿ ರೈತಾಪಿ ಸಮುದಾಯ ಇತರೆಡೆಗಿಂತ ಹೆಚ್ಚಿದ್ದಾರೆ. ಇವರಿಗೆಲ್ಲ ಎಂಬಿ ಕಚೇರಿ ಹಳಿಯಾಳದಲ್ಲಿದ್ದರೇನೇ ಅನುಕೂಲ. ಆದರೆ ಇದ್ಯಾವುದೂ ಕೇರ್ ಮಾಡದ ಕಾಗೇರಿ ಸರ್ವಾಧಿಕಾರಿಯಂತೆ ಶಿರಸಿಗೆ ಶಿಫ್ಟ್ ಮಾಡಿದ್ದರು.

ಆಗ ಹಳಿಯಾಳ ಶಾಸಕ ಸುನಿಲ್ ಹೆಗಡೆ ಎಂಐ ಕಚೇರಿ ಸ್ಥಳಾಂತರ ಮಾಡದಂತೆ ಆವಾಜ್ ಹಾಕಿದ್ದರು. ಆತನ ಅಪ್ಪ ವಿ.ಡಿ. ಹೆಗಡೆಯೂ ಬೊಬ್ಬೆ ಹೊಡೆದಿದ್ದರು. ಸುನಿಲ್ ಹೆಗಡೆಯಂತೂ ಶಿರಸಿಗೆ ಎಂಐ ಕಚೇರಿ ಒಯ್ದಿದ್ದೇ ಆದರೆ ತಾನು ವಿಷ ಕುಡಿಯುತ್ತೇನೆ ಎಂದು ಪ್ರಚಾರ ಪಡೆದಿದ್ದರು. ಆದರೆ ಕಾಗೇರಿ ಹಠದಿಂದ ಎಂಐ ಆಫೀಸನ್ನು ಶಿರಸಿಗೆ ಸ್ಥಳಾಂತರಿಸಿಯೇ ಬಿಟ್ಟರು! ಸುನಿಲ್ ಮಾತ್ರ ವಿಷ ಕುಡಿವ ಗೋಜಿಗೆ ಹೋಗಲಿಲ್ಲ.

ಅಲ್ಲಿಗೆ ಸುನಿಲ್ ಸುದ್ದಿಶೂರನೇ ಹೊರತು ಜನಪರ ಬದ್ಧತೆಯ ರಾಜಕಾರಣಿ ಅಲ್ಲವೆಂಬುದು ಸಾಬೀತಾಗಿ ಹೋಗಿದೆ. ಕಾರವಾರದಿಂದ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಕಚೇರಿಯನ್ನು ಕಾಗೇರಿ ಶಿರಸಿಗೆ ಒಯ್ದಾಗ ಕಾರವಾರ ಜನಶಕ್ತಿ ವೇದಿಕೆಯ ಮಾಧವ ನಾಯ್ಕ ಬಳಗ ಹೋರಾಟ ಮಾಡಿ ಮತ್ತೆ ಆ ಕಚೇರಿ ಮೂಲಸ್ಥಾನಕ್ಕೆ ಬರುವಂತೆ ಮಾಡಿದ್ದಾರೆ. ಆ ಕೆಲಸ ಹೇತ್ಲಾಂಡಿ ಶಾಸಕ ಸುನಿಲ್‌ನಿಂದ ಆಗಲಿಲ್ಲ. ಮಂತ್ರಿ ಕಾಗೇರಿ ಜೊತೆಗಿನ ಒಳ ಒಪ್ಪಂದವೇ ಇದರ ಹಿಂದಿನ ಗುಟ್ಟು. ಸುನಿಲ್ ಬೊಗಳೆ ಭೂಪನೆಂಬುದೀಗ ಕ್ಷೇತ್ರವಾಸಿಗಳಿಗೆ ಖಾತ್ರಿಯಾಗಿ ಹೋಗಿದೆ!

ಬರದ ನಾಡಲ್ಲಿ ಹುಚ್ಚರ ದಿನಚರಿ



ರ್ನಾಟಕದ ನಂಬರ್ ಹುಚ್ಚನ ತರ ತ್ತಿರುವ ಯಡಿಯೂರಪ್ಪ ಬರ ಪ್ರದೇಶಗಳಲ್ಲಿ ರ್ ಶುರು ಮಾಡಿದ್ದಾರೆ. ರ ಹಿಂದಿರುವುದು ಜನರ ಾನೆ ಕಾಳಜಿಯಲ್ಲ, ಾಗಿ ಸದಾನಂದ ರದ್ದು ಆದೆಂತಾ ಅದಕ್ಷ ರ ಎಂದು ಕೊಳ್ಳುವುದೇ ಆಗಿದೆ. ್ತಿಯ ಈ ನಡೆಯನ್ನು ವಿರುದ್ಧದ ಒಂದು ಕೀಯ ತಂತ್ರ ಎಂದು ಸಿರುವ ಖ್ಯಮಂತ್ರಿಗಳು ಈಗ ಜ್ಯಾದ್ಯಂತ ರ್‍ಯಾಪಿಡ್ ಟೂರ್ ು ಮಾಡಿದ್ದಾರೆ. ಇವರ ್ಟ ಒಂಥರಾ fast ck race ತರ ಯುತ್ತಿದೆ. ಬೆಳ್ಳಂಬೆಳಗ್ಗೆ ಯಿಂದ ಕಾರ್ ಹತ್ತಿ ಹೊರಟರೆ ಎಲ್ಲೂ ಹತ್ತು ಷ ನಿಂತು ಜನರ ಕಷ್ಟ ಕೇಳದೆ, ಯಾರ ಕೈಗೂ ದಂತೆ ತಪ್ಪಿಸಿಕೊಳ್ಳುತ್ತಾ ನೂರಿನ್ನೂರು ೋಮೀಟರ್ ಸುತ್ತಿ ಸಂಜೆ ಮನೆಗೆ ವಾಪಸ್ಸಾಗಿ ುಗಳಿಗೆ ಸೈನ್ ಹಾಕುವ ಕೆಲಸವನ್ನು ಗೌಡರು ಡುತ್ತಿದ್ದಾರೆ.

ಇಷ್ಟು ಸಾಲದೆಂಬಂತೆ ಈಗ ಕಾಂಗ್ರೆಸ್ ನಾಯಕರು, ಎಸ್ ತುಂಡರಸರೂ ಬರಪೀಡಿತ ಜನರ ಮೇಲೆ ಗಿಬೀಳುತ್ತಿದ್ದಾರೆ.

ಈ ಹುಚ್ಚರ ದಿನಚರಿಗಳೆಲ್ಲಾ ನೋಡಲಿಕ್ಕೆ ಒಂದೇ ತಿ ಕಾಣುತ್ತಿಲ್ಲವೆ?

ಇವರ ರಾಜಕೀಯ ಗದ್ದಲದಲ್ಲಿ ಯಾವುದಾದರೂ ದು ಗ್ರಾಮಕ್ಕೆ ಸರಿಯಾಗಿ ಕುಡಿಯುವ ನೀರು ಗಿಸಿಕೊಟ್ಟಿರುವ ಅಥವಾ ಪಶುಗಳಿಗೆ ಒಂದು ಲಾರಿ ೋಡ್ ಮೇವು ತರಿಸಿ ಹಂಚಿದ ಉದಾಹರಣೆಗಳೇ ಸಿಗುತ್ತಿಲ್ಲ.

ಇದೆಲ್ಲಾ ಆಯಾ ಪಕ್ಷಗಳ ಲೀಡರ್‌ಗಳ ತಾದರೆ ಈ ಪಕ್ಷಗಳ ಶಾಸಕರುಗಳ ಪೈಕಿ ಜಾರಿಟಿ ಮಂದಿ ಬೆಂಗಳೂರು ಬಿಟ್ಟು ಕದಲುತ್ತಿಲ್ಲ. ಾವ ಪಾರ್ಟಿಯ ನಾಯಕರೂ ತಮ್ಮ ಶಾಸಕರಿಗೆ ಮ್ಮ ನಿಮ್ಮ ಕ್ಷೇತ್ರಗಳಿಗೆ ಹೋಗಿ ಬರಪರಿಹಾರದ ಕೆಲಸಗಳನ್ನು ನಿರ್ವಹಿಸಿ" ಎಂತಲೂ ಹೇಳುತ್ತಿಲ್ಲ. ಈ ರಾಜಕಾರಣಿಗಳ ಕ್ರೌರ್ಯಕ್ಕೆ ಏನನ್ನಬೇಕು ಹೇಳಿ?

ಹಾಗೆ ನೋಡಿದರೆ ಕರ್ನಾಟಕದಲ್ಲಿ ಬರ ಎನ್ನುವುದು ಮೊನ್ನೆ ಏಪ್ರಿಲ್ 5 ನೇ ತಾರೀಖು ಶುರುವಾಗಲಿಲ್ಲ. ನಮ್ಮ ಸರ್ಕಾರದಲ್ಲಿ **State natural disaster monitoring centre** ಎಂಬ ವಿಭಾಗವೇ ಇದೆ. ಹಿರಿಯ ಐಎಎಸ್ ಅಧಿಕಾರಿ ಎಂ.ಎನ್. ವಿದ್ಯಾಶಂಕರ್ ಮುಖ್ಯಸ್ಥರಾಗಿರುವ ಈ ಸಂಸ್ಥೆಯು ಕಳೆದ ಜನವರಿಯಿಂದಲೇ ರಾಜ್ಯಾದ್ಯಂತ ಪ್ರತಿ ಜಿಲ್ಲೆಯಲ್ಲೂ ಇರುವ ನೀರಿನ ಕೊರತೆಯ ಬಗ್ಗೆ **update** ಆದಂತಹ ಮಾಹಿತಿಗಳನ್ನು ನೀಡುತ್ತಾ ಬಂದಿದೆ. ಈ ಸಂಸ್ಥೆಯಲ್ಲಿ ಸದಸ್ಯರುಗಳಾಗಿ ಕಂದಾಯ, ಕೃಷಿ, ಹಣಕಾಸು ಇಲಾಖೆಗಳ ಕಾರ್ಯದರ್ಶಿಗಳೆಲ್ಲಾ ಇದ್ದಾರೆ.

ಆದರೂ ಯಾವ ಅಧಿಕಾರಿಗಳಿಗೂ ಮುಂಬರಲಿರುವ ಬರದ ನಿರ್ವಹಣೆಯ ಬಗ್ಗೆ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಬೇಕೆನಿಸಿಲ್ಲ. ರಾಜಕಾರಣಿಗಳು ಇದನ್ನು ಗಮನಿಸಲಿಲ್ಲ.

ಈ ನೈಸರ್ಗಿಕ ವಿಕೋಪ ನಿರ್ವಹಣಾ ಸಂಸ್ಥೆಯ ಒಂದು ಅಂಕಿಅಂಶವನ್ನೇ ನೋಡಿ.

ಮಳೆ	ಜಿಲ್ಲೆ	ತಾಲ್ಲೂಕು	ಹೋಬಳಿ
ಸಾಧಾರಣ	3	22	63
ಕೊರತೆ	11	54	167
ಬರ	16	91	437

ಇದು 2012 ರ ಜನವರಿಯಿಂದ ಏಪ್ರಿಲ್ ಮೊದಲವಾರದವರೆಗಿನ ಸ್ಥಿತಿ. ಅಂದರೆ ರಾಜ್ಯದ 30 ಜಿಲ್ಲೆಗಳಲ್ಲಿ 27 ರಲ್ಲಿ, 175 ತಾಲ್ಲೂಕುಗಳ ಪೈಕಿ 145 ರಲ್ಲಿ ತೀವ್ರ ಬರಗಾಲ ಕಾಣಿಸಿಕೊಂಡಿದೆ. ಯುಗಾದಿಯ ವೇಳೆಗೆ ಬಂದೇಬರಬೇಕಿದ್ದ ಮಳೆಯೂ ಮುಖ ತೋರಿಲ್ಲ. ಇದೇ ಸಂಸ್ಥೆಯ ವರದಿಗಳ ಪ್ರಕಾರ ಹೇಳಬೇಕೆಂದರೆ 2011 ರಲ್ಲೂ ಕರ್ನಾಟಕದ ಒಟ್ಟಾರೆ ಎಲ್ಲಾ ಜಲಾಶಯ, ಕೆರೆ, ಕಟ್ಟೆಗಳ ಪೈಕಿ ಶೇ. 50 ರಷ್ಟೂ ತುಂಬಿರಲಿಲ್ಲ. ಆದರೆ ಯಡಿಯೂರಪ್ಪನ ಅಧಿಕಾರದಾಹದ ಗದ್ದಲಗಳು ಸರ್ಕಾರವು ಯಾವುದರ ಮೇಲೂ ಗಮನ ಕೇಂದ್ರೀಕರಿಸಲಾಗದಂತೆ ಅರಾಜಕತೆ ಉಂಟುಮಾಡಿತ್ತು.


ಈಗ ಯಡ್ಡಿ ಎಂಬ ಸಮಸ್ಯೆ ಸ್ವಲ್ಪಮಟ್ಟಿಗೆ ಬಗೆಹರಿದಂತೆ ಕಾಣುತ್ತಿದೆ. ಆದರೆ ಸರ್ಕಾರದ ನಾಯಕರಿಗೆ ಇಚ್ಛಾಶಕ್ತಿ ಇರದ ಕಾರಣ ಅಧಿಕಾರಿಗಳಲ್ಲೂ ಉಡಾಫೆ ಕಾಣಿಸಿಕೊಂಡಿದೆ. ಇವರೆಂತಾ ಅಸೂಕ್ಷ್ಮ ಜನರೆಂದರೆ ಬಜೆಟ್ ಅಧಿವೇಶನದಲ್ಲಿ ರಾಜಕೀಯ ಕಚ್ಚಾಟಗಳ ವಿಚಾರದಲ್ಲಿ ವಿಭಿನ್ನ ಗುಂಪುಗಳಾಗಿ ಜಗಳ ಕಾದು, ಸವಲತ್ತುಗಳ ವಿಚಾರ ಬಂದಾಗ ಜಗಳ ನಿಲ್ಲಿಸಿ ಒಗ್ಗಟ್ಟಾಗಿ ಸಂಬಳಗಳನ್ನೆಲ್ಲಾ ಎರಡರಷ್ಟು ಏರಿಸಿಕೊಂಡರು.

ಆದರೆ ಬರ ನಿರ್ವಹಣೆಯ ಬಗ್ಗೆ ಕಾರ್ಯಸಾಧುವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಿಲ್ಲ. ಅಲ್ಲ, ಬರಕ್ಕೆ ಪಕ್ಷಭೇದವಿರುತ್ತದೆಯೇ? ಅದು ಈ ಬಾರಿ ಬೆಂಗಳೂರನ್ನೂ ಬಿಟ್ಟಿಲ್ಲ. ನಗರದಲ್ಲೂ ಲಕ್ಷಾಂತರ ಜನ ಕುಡಿಯುವ ನೀರು ಸಿಗದೆ ಪರಿತಪಿಸುತ್ತಿದ್ದಾರೆ. ಆದರೆ ಇದೇ ವೇಳೆಯಲ್ಲಿ ಬಿಬಿಎಂಪಿ ಸದಸ್ಯರು ಐಪಿಎಲ್ ಕ್ರಿಕೆಟ್ ಮ್ಯಾಚ್ ನೋಡಲು ತಮಗೆ ಪಾಸ್ ಸಿಗದ ಬಗ್ಗೆ ದೊಡ್ಡ ಗಲಾಟೆಯನ್ನೇ ಮೀಟಿಂಗ್‌ನಲ್ಲಿ ಮಾಡುತ್ತಿದ್ದಾರೆ. ಈ ಕೂರಿಗಳ ಗುಂಪಿನಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಹೀಗೆ ಎಲ್ಲಾ ಪಕ್ಷದವರೂ ಇದ್ದಾರೆ.

ಮುಖ್ಯಮಂತ್ರಿ ಸದಾನಂದ ಗೌಡರು ಈಗಲಾದರೂ ಬರ ನಿರ್ವಹಣೆಗೆ ಸೂಕ್ತ ಕ್ರಿಯಾಯೋಜನೆ ಹಾಕಿಕೊಳ್ಳಬೇಕಿದೆ. ತಾವೊಬ್ಬರೆ ಕಾರ್ಟೂನ್ ಫಿಲಂನ ಪಾತ್ರದಂತೆ ವಿಪರೀತ ಸ್ಪೀಡಾಗಿ ಎಲ್ಲೆಡೆ ಓಡಾಡಿ ದಣಿಯುವ ಬದಲಾಗಿ ಎಲ್ಲಾ ಶಾಸಕರಿಗೂ ತಮ್ಮತಮ್ಮ ಕ್ಷೇತ್ರಗಳಿಗೆ ಹೋಗಲು ಹೇಳಲಿ. ಬರ ಪರಿಹಾರದ ಪ್ಯಾಕೇಜ್ ಅಂದರೆ ಭೂಕಂದಾಯ ರದ್ದು ಮಾಡುವುದಲ್ಲ. ಅದು ಎಕರೆಗೆ ಐವತ್ತು ರೂಪಾಯಿಯೂ ಮೀರುವುದಿಲ್ಲ. ಈ ರಿಯಾಯಿತಿ ಕೊಡುವುದರಿಂದ ಮಾತ್ರವೇ ರೈತಾಪಿಯನ್ನು ಬರದಿಂದ ರಕ್ಷಿಸಿದಂತಾಗುವುದಿಲ್ಲ. ಈ ನಾಟಕವನ್ನು ತಕ್ಷಣ ನಿಲ್ಲಿಸಿ ಹೊರರಾಜ್ಯಗಳಿಂದ ತುರ್ತಾಗಿ ಮೇವು ತರಿಸಿ ಅಗತ್ಯವಿರುವೆಡೆ ಹಂಚಿಸಬೇಕಿದೆ. ಕುಡಿಯುವ ನೀರಿಗೂ ಖಾಸಗಿ ಬೋರ್‌ವೆಲ್‌ಗಳಿಂದ ಹಿಡಿದು ಎಲ್ಲಾ ಪೂರೈಕೆಯ ವಿಧಾನಗಳನ್ನು ಹುಡುಕಬೇಕಿದೆ. ಬಹಳ ಮುಖ್ಯವಾಗಿ ಭೂಕಂದಾಯ ರದ್ದು ಮಾಡಿದಂತೆಯೇ ರೇಷನ್ ಕಾರ್ಡ್ ರದ್ಧತಿಯೆಂಬ ಬಡವರ ಮೇಲಿನ ದಾಳಿಯನ್ನು ತಕ್ಷಣ ನಿಲ್ಲಿಸಬೇಕಿದೆ.

'ನಾನು ಭ್ರಷ್ಟನೂ ಅಲ್ಲ, ದುರಹಂಕಾರಿಯೂ ಅಲ್ಲ' ಎಂದು ಗೌಡರು ಇತ್ತೀಚೆಗೆ ಹೇಳಿಕೊಂಡಿದ್ದಾರೆ. ಅದೇನೇ ಇರಲಿ, ಅವರ ಸರ್ಕಾರ ಹಾಗೂ ಆಡಳಿತ ಯಂತ್ರಾಂಗವು ದುಷ್ಟತನ ಹಾಗೂ ಬೇಜವಾಬ್ದಾರಿತನಗಳಿಂದ ಕೂಡಿದೆ. ಸದಾನಂದ ಗೌಡರು ಕನಿಷ್ಠ ಪಕ್ಷ ಅದನ್ನಾದರೂ ರಿಪೇರಿ ಮಾಡಲಿ.

ಸಂಪಾದಕೀಯ



• ಪಾರ್ವತೀಶ

ಜಿಲ್ಲಾವಾರು ನೀರಿನ ಕೊರತೆಯ ಅಂಕಿ ಅಂಶ

Sl.No	District	Wt. Avg. (mm)	Wt. Avg. (mm)	%DEP
	South Interior Karnataka	*24.5*	*8.6*	*-65*
1	BANGALORE URBAN	25.0	3.9	-84
2	BANGALORE RURAL	21.4	5.0	-77
3	RAMANAGARA	27.0	4.1	-85
4	KOLAR	27.7	6.2	-78
5	CHIKBALLAPUR	21.3	4.3	-80
6	TUMKUR	20.4	11.4	-44
7	CHITRADURGA	16.7	7.8	-53
8	DAVANAGERE	15.8	12.2	-23
9	CHAMARAJANAGAR	35.7	7.9	-78
10	MYSORE	35.9	11.3	-69
11	MANDYA	29.4	9.7	-67
	North Interior Karnataka	*16.4*	*6.5*	*-60*
1	BELLARY	12.1	3.9	-68
2	KOPPAL	9.3	2.7	-71
3	RAICHUR	13.1	1.3	-90
4	GULBARGA	21.3	6.1	-71
5	YADGIR	19.0	2.7	-86
6	BIDAR	29.3	4.2	-86
7	BELGAUM	16.4	11.8	-28
8	BAGALKOTE	13.9	9.4	-32
9	BIJAPUR	16.2	4.8	-70
10	GADAG	13.2	10.8	-18
11	HAVERI	15.0	6.8	-55
12	DHARWAD	18.9	14.3	-24
	Malnad	*29.1*	*21.3*	*-27*
1	SHIMOGA	21.3	9.7	-54
2	HASSAN	30.9	22.8	-26
3	CHIKMAGALUR	32.3	25.7	-20
4	KODAGU	36.9	35.6	-4
	Coastal	*16.7*	*10.8*	*-35*
1	DAKSHINA KANNADA	28.7	20.8	-28
2	UDUPI	19.5	4.3	-78
3	UTTARA KANNADA	10.0	8.3	-17
	STATE	*20.7*	*9.6*	*-54*

• ಪಾರ್ವತೀಶ

ಹಸನ್ ನಯೀಂ ಸುರಕೋಡರು ಹೇಳಿದ ರಾಮದುರ್ಗದ ಪಾರ್ವತವ್ವ-ರಾಜೇಸಾಬರ ಪ್ರೇಮ ಕತೆ

ಬಿಡಿ ಚಿತ್ರಗಳು



ನಾನು ಕೆಲದಿನಗಳ ಹಿಂದೆ ಕೇಳಿದ ಪ್ರೇಮಕತೆಯೊಂದನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಾ ಇದ್ದೇನೆ. ನಮ್ಮ ಬಳಗದ ಶಿವಸುಂದರ್ ಒಂದು ಭಾಷಣಕ್ಕೆಂದು ರಾಮದುರ್ಗಕ್ಕೆ ಹೋಗಿದ್ದಾಗ ಅವರಿಗೆ ಈ ಕತೆ ಹೇಳಿದ್ದು ಹಿರಿಯ ಬರಹಗಾರ ಹಸನ್ ನಯೀಂ ಸುರಕೋಡರು.


ಕರ್ನಾಟಕದ ಉತ್ತರ ತುದಿಯ ಬೆಳಗಾಂ ಜಿಲ್ಲೆಯ ಪುಟ್ಟ ತಾಲ್ಲೂಕು ಕೇಂದ್ರ ರಾಮದುರ್ಗದಲ್ಲಿ ನಡೆದ ಈ ಪ್ರೇಮ ಘಟನಾವಳಿಯಲ್ಲಿ ಕಾಣ ಸಿಗುವ ಕ್ರೌರ್ಯ, ಹಿಂಸೆ ಮತ್ತದರ ವಿರುದ್ಧದ ಮುಗ್ಧ ಜೀವಗಳ ಛಲದ, ಒಲವಿನ ಬದುಕಿನ ಕತೆಯಿದು.

ಪಾರ್ವತವ್ವ-ರಾಜೇಸಾಬರ ಈ ಬದುಕಿನ ಕತೆಯನ್ನು ಪ್ರಜಾವಾಣಿಯ ಪದ್ಮರಾಜ ದಂಡಾವತಿ ಕೆಲ ದಶಕಗಳ ಹಿಂದೆ ಒಮ್ಮೆ ಬರೆದಿದ್ದರಂತೆ. ಅಂತೆಯೇ ಸುರಕೋಡರೂ 'ಮುಂಗಾರು' ದಿನ ಪತ್ರಿಕೆಯಲ್ಲಿ ತಾವೊಂದು ಲೇಖನ ಬರೆದಿದ್ದಾರೆ.

ಮಲಪ್ರಭಾ ನದಿ ಸೆರಗಿನ ಆಸುಪಾಸಿನ ತೋರಗಲ್ ಸುರೇಬಾನ್, ಮುಧಕವಿಗಳ ನಡುವೆ ರಾಮದುರ್ಗವಿದೆ. ಅಲ್ಲೇನು ಕಣ್ಣಿಗೆ ಕಾಣುವಂತಹ ಒಂದು ದೊಡ್ಡ ಕೋಟೆ ಅಂತಿಲ್ಲವಾದರೂ ಹೊರನೋಟಕ್ಕೆ ಕಾಣಸಿಗದ ಜಾತಿ, ಧರ್ಮಗಳ ಕೋಟೆ ಇತ್ತು. ಮನುಷ್ಯ ಮನುಷ್ಯರನ್ನು ವಿಭಜಿಸಿ ದೂರ ಕಳುಹಿಸುವ ಅಂತಹ ಜಾತಿ ಕೋಟೆಯೇ ಪಾರ್ವತವ್ವ ಪ್ರೀತಿಸಿದ್ದ ರಾಜೇಸಾಬರ ಬದುಕನ್ನು ಛಿದ್ರಗೊಳಿಸಿತ್ತು. ಆದರೆ ರಾಜೇಸಾಬರನ್ನು ತನ್ನ ಅಂಗೈನಲ್ಲಿರಿಸಿಕೊಂಡು ಮಲ್ಲಿಗೆ ಹೂವಿನಂತೆ ಕಾಪಾಡಿಕೊಂಡಳು ಪಾರ್ವತವ್ವ. ಇದೆಲ್ಲಾ ನಡೆದದ್ದು ಈಗ್ಗೆ ಮೂವತ್ತು ವರ್ಷಗಳ ಹಿಂದೆ.

ರಾಮದುರ್ಗದಿಂದ ಏಳೆಂಟು ಕಿಲೋಮೀಟರ್ ಅಂತರದಲ್ಲಿರುವ ಚಿಲಮೂರು ಗ್ರಾಮವೇ ಪಾರ್ವತವ್ವನ ತವರುನೆಲ. ಬೇಡ ಜನಾಂಗದ ಪಾರ್ವತವ್ವನಿಗೆ ಐವರು ಅಣ್ಣ-ತಮ್ಮರು. ಕೊಂಚ ಒರಟುತನ ಮೈಗೂಡಿಸಿಕೊಂಡಿದ್ದ ಆ ಯುವಕರಿಗೆ ಸೋದರಿ ಪಾರ್ವತಿ ಅಂದರೆ ಅಪಾರ ಅಕ್ಕರೆ, ಅದೇ ವೇಳೆಯಲ್ಲಿ ಆಕೆಯ ಮೇಲೆ ಕೊಂಚ ಹಕ್ಕು ಚಲಾಯಿಸುವ ಮನೋಭಾವವಿತ್ತು.

ರಾಜೇಸಾಬ್ ಜೀವನದ ದುರಂತ ಅಧ್ಯಾಯ ಶುರುವಾಗುವುದೇ ಈ ಪ್ರೇಮ ಪ್ರಕರಣದೊಂದಿಗೆ. ಚಿಲಮೂರಿನವರೇ ಆದ ರಾಜೇಸಾಬ್ ಮುಸ್ಲಿಂ ರೈತ ಕುಟುಂಬದ ಹುಡುಗನಾಗಿದ್ದ. ನೋಡಲು ಬಹಳ ಸ್ಮಾರ್ಟ್ ಇದ್ದ. ದಷ್ಟಪುಷ್ಟವಾಗಿ ಕಾಣುತ್ತಿದ್ದ. ಜೊತೆಗೆ ಸ್ಥಳೀಯ ಪೋಸ್ಟ್ ಆಫೀಸಿನ ರನ್ನರ್ ಆಗಿಯೂ ಕೆಲಸ ಮಾಡುತ್ತಿದ್ದ. ಈ ರನ್ನರ್ ಎನ್ನುವುದು ಅಂಚೆ ಇಲಾಖೆಯ ಒಂದು ಪುರಾತನ ಉದ್ಯೋಗ. ದೂರ-ದೂರದ ಗ್ರಾಮೀಣ ಪ್ರದೇಶಗಳಲ್ಲಿ ತ್ವರಿತ ಅಂಚೆ ವಿಲೇವಾರಿಗೆ ಆಗ ರನ್ನರ್‌ಗಳನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಈ ರಾಜೇಸಾಬ್ ಕೈಲಿ ಅಂಚೆ ಚೀಲ ಹಿಡಿದು ಆ ಕಡೆ ಈ ಕಡೆ ಓಡಾಡುತ್ತಲೇ ಪಾರ್ವತವ್ವನ ಪರಿಚಯವಾಗಿ ಸ್ನೇಹಿತ ರಾದರು. ಪಾರ್ವತವ್ವಗೆ ರಾಜೇಸಾಬ್ ಬಹಳ ಹಿಡಿಸಿದ. ಆದರೆ ಆಕೆಯ ಅಣ್ಣ-ತಮ್ಮಗಳಿಗೆ ಇದು ಹಿಡಿಸಲಿಲ್ಲ. ಬೇಡರ ಹುಡುಗಿಯೊಬ್ಬಳು ಮುಸ್ಲಿಂ ಯುವಕನನ್ನು ಇಷ್ಟಪಟ್ಟದ್ದು ಅವರಿಗೆ ಕೋಪ ತರಿಸಿತ್ತು. ಅವರು ರಾಜೇಸಾಬ್‌ನಿಂದ ದೂರವಿರುವಂತೆ ಪಾರ್ವತವ್ವನಿಗೆ ಎಚ್ಚರಿಕೆ ಕೊಟ್ಟರು. ಆದರೆ ಆಕೆ ಸರಳ ಸ್ವಭಾವದ ಗಟ್ಟಿ ಹುಡುಗಿ. ಅಣ್ಣಂದಿರ ಮಾತನ್ನು ನಿರ್ಲಕ್ಷಿಸಿದಳು. ಆಗ ಆಕೆಯ ಸೋದರರ ಸಿಟ್ಟು ರಾಜೇಸಾಬ್‌ನತ್ತ ತಿರುಗಿತು.



ಸುರಕೋಡ


ಒಂದು ದಿನ ರಾಜೇಸಾಬ್ ಅಂಚೆ ವಿಲೇವಾರಿಗೆಂದು ಚಿಲಮೂರಿನಿಂದ ಹೊರಟು ಇನ್ನೊಂದು ಹಳ್ಳಿಯ ಕಡೆಗೆ ನಡೆದುಕೊಂಡು ಹೋಗುತ್ತಿದ್ದಾನೆ. ಗುಡ್ಡಗಳ ನಡುವಿನ ನಿರ್ಜನ ಹಾದಿ ಅದು. ಆಗ ಈ ಕ್ರೂರರೈವರು ರಾಜೇಸಾಬ್‌ನನ್ನು ಅಡ್ಡ ಹಾಕಿ ತಡೆದು ನಿಲ್ಲಿಸಿಕೊಂಡರು. ಅವತ್ತು ಅಲ್ಲಿ ನಡೆದಿರಬಹುದಾದ ಜಗಳದ ಮಾತುಗಳನ್ನು ನಾವೆಲ್ಲಾ ಕಲ್ಪಿಸಿಕೊಳ್ಳಬಹುದು. ಆದರೆ ಅದನ್ನು ಮೀರಿದ ಭಯಾನಕ ಕ್ರೌರ್ಯವು ಅಲ್ಲೇ ಘಟಿಸಿಹೋಯಿತು.

▶15

ಬೆಂಗಳೂರು ಮೇಯರ್

ಅಶೋಕ್ V/s ಈಶ್ವರಪ್ಪ

ಕುರುಬನ ಮುಂದೆ ಕಿರುಬ



ಒಬ್ಬ ಕುರುಬ. ಅವನ ಮುಂದೆ ಕಿರುಬ. ಇವರಿಬ್ಬರನ್ನು ಯಾಮಾರಿಸಿ ಕಬಳಿಸಲು ಹೊಂಚಿ ಕೂತಿದೆ ಮತ್ತೊಂದು ಕತ್ತೆ ಕಿರುಬ!


ಇದು ಬಿಬಿಎಂಪಿಗೆ ಹೊಸ ಮೇಯರ್ ಆಯ್ಕೆ ಕುರಿತಂತೆ ಸದ್ಯ ಪಾಲಿಕೆ ಕಾಂಪೌಂಡಿನಲ್ಲಿ ಕೇಳಿಬರುವ ಕುಚೋದ್ಯ. ಬಿಜೆಪಿ ಅಧಿಕಾರಕ್ಕೆ ಬಂದಮೇಲೆ ಮೊದಲು ಮೇಯರ್ ಹುದ್ದೆ ಗೇರಿದ ಎಸ್.ಕೆ. ನಟರಾಜ್ ಜಾತಿಯಲ್ಲಿ ಒಕ್ಕಲಿಗ ಮತ್ತು ಗೃಹಮಂತ್ರಿ ಆರ್. ಅಶೋಕ್ ಪಾಲಿಗೆ ನಂಬಿಕಸ್ತ ಬಂಟ. ಆನಂತರ ದಾಸರಹಳ್ಳಿ ಶಾಸಕ ಮುನಿರಾಜು ಶಿಷ್ಯೆ ಹೆಬ್ಬೆಟ್ಟು ಶಾರದಮ್ಮನನ್ನು ಮೇಯರ್‌ಗಾದಿಗೆ ತರಲಾಯಿತಾದರೂ ಆಕೆ ಕೂಡ ಒಂದಲ್ಲ ಒಂದುರೀತಿಯಲ್ಲಿ ಅಶೋಕ್ ಪಾಲಿಗೆ ರಬ್ಬರ್ ಸ್ಟ್ಯಾಂಪ್. ಆಗೇ ಬಳಕೆಯಾದಳು. ಈಗ ಎದ್ದಿರುವ ಪ್ರಶ್ನೆಯೆಂದರೆ ಮತ್ತೆ ಅಶೋಕ್ ಬಾಯಿಗೇ ಬೆಂಗಳೂರನ್ನು ಹಾಕಬೇಕೆ ಅಥವಾ ಅಶೋಕ್ ಕಪಿಮುಷ್ಟಿಯಿಂದ ಪಾಲಿಕೆಯನ್ನು ಕಾಪಾಡಬೇಕೆ?

ಅಶೋಕ್ ಆಧಿಪತ್ಯದ ವಿರುದ್ಧ ಒಂದೆಡೆ ಸೋಮಣ್ಣನ ದಾಳಿ ಶುರುವಾಗಿದ್ದರೆ ಮತ್ತೊಂದೆಡೆ ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪ ನೇತೃತ್ವದಲ್ಲಿ ಕುರುಬರ ಗ್ಯಾಂಗ್ ತೊಡೆತಟ್ಟಿರುವುದೇ ಈ ಬಾರಿಯ ಮೇಯರ್ ಆಯ್ಕೆಯ ವೈಶಿಷ್ಟ್ಯ.

ಸದ್ಯ ಮೇಯರ್‌ಗಿರಿಯ ರೇಸಿನಲ್ಲಿ ಕೇಳಿಬರುತ್ತಿರುವ ಮೊದಲ ಹೆಸರೇ ಕತ್ರಿಗುಪ್ಪೆಯ ಕೌನ್ಸಿಲರ್ ವೆಂಕಟೇಶ್ ಮೂರ್ತಿ. ಜಾತಿಯಲ್ಲಿ ಕುರುಬ ಮತ್ತು ಆ ಕಾರಣಕ್ಕೇ ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪಗೆ ವೆಂಕಟೇಶ್‌ಮೂರ್ತಿ ಶಿಷ್ಯ. ಇದರ ವಿರುದ್ಧ ತಾನೇ ಮೇಯರ್ ಗಾದಿಗೆ ಲಾಯಕ್ಕೆಂದು ಲಾಬಿಗಿಳಿದವನು ಬನಶಂಕರಿ ವಾರ್ಡಿನ ಬಿಜೆಪಿ ಕೌನ್ಸಿಲರ್ ಬಸವರಾಜು. ಈತ ಜಾತಿಯಲ್ಲಿ ತಿಗಳ ಮತ್ತು ಮಂತ್ರಿ ಅಶೋಕ್‌ರ ಪಕ್ಕಾ ಚೇಲಾ. ಹಾಗೊಮ್ಮೆ ಬಸವರಾಜುಗೆ ಮೇಯರ್‌ಗಾದಿ ಸಿಗದಿದ್ದರೆ ಕುರುಬರ ಪೈಕಿಯೇ ಮೇಯರ್ ಆಗುವುದಾದರೆ ಅದಕ್ಕೆ ನಾನಿದ್ದೀನಿ ಎಂದು ಅಖಾಡಕ್ಕಿಳಿದವನು ಶಾಕಾಂಬರಿ ನಗರದ ಕೌನ್ಸಿಲರ್ ಸೋಮಶೇಖರ್. ಇವರೆಲ್ಲರನ್ನೂ ಬದಿಗಿಟ್ಟು ಮಹಿಳೆಯಾದ ತನ್ನನ್ನೇ ಮೇಯರ್ ಮಾಡಬೇಕೆಂದು ಹಠಕ್ಕೆ ಬಿದ್ದವಳು ಮೂಡಲಪಾಳ್ಯದ ಕೌನ್ಸಿಲರ್ ಅರ್ಥಾತ್ ವಿಜಯನಗರದ ವೀರಪುತ್ರ ಸೋಮಣ್ಣ ಶಿಷ್ಯೆ ಶಾಂತಕುಮಾರಿ.


ಈ ಪೈಕಿ ಯಾರೇ ಮೇಯರ್ ಆದರೂ ಬೆಂಗಳೂರಿನ ಉದ್ಧಾರ ಅಷ್ಟಕ್ಕಷ್ಟೆ. ಹಾಗಂತ ಬಿಜೆಪಿಯ ಧಣಿಗಳು ಬಿಡಬೇಕಲ್ಲ? ಈ ಬಾರಿ ತನ್ನ ಕುಲಬಾಂಧವನನ್ನೇ ಮೇಯರ್ ಹುದ್ದೆಗೆ ತರಬೇಕೆಂಬ ಹಠವಂತೂ ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪನವರಿಗಿದೆ. ಆದರೆ ಅಶೋಕ್ ತನ್ನ ಪಟ್ಟು ಬಿಡುತ್ತಿಲ್ಲ. ಮೂರನೇ ಮೇಯರ್ ಕೂಡ ತನ್ನ ಚೇಲಾನೇ ಆಗಿರಬೇಕು ಎಂಬ ದುರಾಶೆ. ಆದರೆ ಈ ಸಾರಿ 2ಎ ಪ್ರವರ್ಗದ, ಮೀಸಲಾತಿಯಿದೆ. ಹೇಗೂ ಚುನಾವಣೆ ಸಮೀಪಿಸುತ್ತಿದೆಯಾದ್ದರಿಂದ ಕುರುಬರನ್ನೇ ಮೇಯರ್ ಮಾಡುವುದು ಬಿಜೆಪಿಯ ಲೆಕ್ಕಾಚಾರ.

ಹಾಗಿದ್ದೂ ತಿಗಳರಿಗೆ ರಾಜಕೀಯವಾಗಿ ಬಿಜೆಪಿ ಏನೇನೂ ಮಾಡಿಲ್ಲ. ಆದ್ದರಿಂದ ತನ್ನನ್ನೇ ಮೇಯರ್ ಮಾಡಿ ಎಂದು ಬನಶಂಕರಿ ವಾರ್ಡಿನ ಕೌನ್ಸಿಲರ್ ಬಸವರಾಜು ಹಠ ಹಿಡಿದಿದ್ದಾನೆ. ಅಶೋಕ್ ಕೂಡ ಒಂದು ಹಂತದಲ್ಲಿ ಬಸವರಾಜುವನ್ನೇ ಬೆಂಬಲಿಸುತ್ತಿದ್ದಾರೆ. ಏಕೆಂದರೆ ಬಸವರಾಜು ಪಕ್ಕಾ ಅಶೋಕ್ ಚೇಲಾ!



ಮೇಲುನೋಟಕ್ಕೆ ಪಾಲಿಕೆಯ ಇಡೀ ಅಶೋಕ್ ಗುಂಪು ಬಸವರಾಜು ಮೇಯರ್ ಆದರೇನೇ ಲಾಭ ಎಂಬ ನಿರ್ಧಾರಕ್ಕೆ ಬಂದಿದೆ. ಈ ಅಶೋಕ್ ಚೇಲಾಗಳೇ ಹೇಳುವಂತೆ ವೆಂಕಟೇಶ್‌ಮೂರ್ತಿ ಧಾರಾಳಿಯಲ್ಲ. ದುಡ್ಡೂ ಕಾಸಿನ ವಿಷಯದಲ್ಲಿ ಜುಗ್ಗ. ಜೊತೆಗೆ ಸ್ವಪ್ರತಿಷ್ಠೆ ಬೇರೆ. ಯಾರಿಗೂ ಸಲಾಮು ಹೊಡೆಯುವುದಿಲ್ಲ. ಎಲ್ಲರನ್ನೂ ಸಂಭಾಳಿಸಿಕೊಂಡು ಜೊತೆಗೆ ಮುನ್ನಡೆಸುವ ಸಾಮರ್ಥ್ಯ ವೆಂಕಟೇಶ್‌ಮೂರ್ತಿಗೆ ಇಲ್ಲವಾದ್ದರಿಂದ ಬಸವರಾಜುವೇ ಅಂದರಿಕಿ ಮಂಚಿವಾಡು ಎಂಬುದು ಅಶೋಕ್ ಪಟಾಲಮ್ಮಿನ ವಾದ.

ವೆಂಕಟೇಶ್‌ಮೂರ್ತಿ ವಿರುದ್ಧ ಏಕಾಏಕಿ ಅಶೋಕ್ ಶಿಷ್ಯರೆಲ್ಲ ಈ ರೀತಿ ತಿರುಗಿ ಬಿದ್ದಿರುವುದು ಮತ್ತು ಬಸವರಾಜು ಮೇಯರ್ ಆದರೇನೆ ತಮಗೆ ಲಾಭ ಎಂಬ ನಿರ್ಧಾರಕ್ಕೆ ಬಂದಿರುವುದರ ಹಿಂದಿನ ಹಕೀಕತ್ತೇ ಬೇರೆಯಿದೆ. ಅದು ಬೆಂಗಳೂರಿನ ಲೂಟಿ. ವೆಂಕಟೇಶ್‌ಮೂರ್ತಿ ಜುಗ್ಗ, ಅಂಟು, ಸ್ವಪ್ರತಿಷ್ಠೆ, ಹೊಂದಾಣಿಕೆಯಿಲ್ಲ ಎಂದೆಲ್ಲ ಈ ಅಶೋಕ್ ಶಿಷ್ಯರು ಹುಯಿಲೆಬ್ಬಿಸುತ್ತಿರುವುದು ಭೋಗಸ್ ಬಿಲ್ ಉದ್ದೇಶದಿಂದಲೇ ಹೊರತು ಬೇರೇನಿಲ್ಲ. ಎಷ್ಟೆಂದರೂ ವೆಂಕಟೇಶ್ ಮೂರ್ತಿ ರಾಜ್ಯ ಕುರುಬರ ಸಂಘದ ಕಾರ್ಯದರ್ಶಿ. ಸದ್ಯ ಬಿಜೆಪಿ ಕೌನ್ಸಿಲರ್‌ಗಳ ಪೈಕಿ ಒಂದಲ್ಲ ಮೂರು ಬಾರಿ ಗೆದ್ದಿರುವ ಮೂರ್ತಿ ಬಿಜೆಪಿಯ ಕುರುಬ ಜನಾಂಗದ ಆಸಾಮಿ.


ಬಸವರಾಜು

ಶಾಂತಕುಮಾರಿ



ಸೋಮಶೇಖರ್

ಮೊದಲು ಜಯನಗರದಿಂದ, ಆನಂತರ ಶ್ರೀನಿವಾಸನಗರದಿಂದ ಈಗ ಕತ್ರಿಗುಪ್ಪೆಯಿಂದ ಮೂರನೇ ಬಾರಿ ಗೆದ್ದ ವೆಂಕಟೇಶ್‌ಮೂರ್ತಿ ಇವತ್ತಲ್ಲ ನಾಳೆ ರಾಜಕೀಯವಾಗಿ ತನಗೆ ಎದುರಾಳಿಯೇ ಎಂಬ ಅಸೂಯೆ ಅಶೋಕ್‌ಗಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪದ್ಮನಾಭನಗರದಲ್ಲಿ ತಾನೂ ಕೂಡ ಬಿಜೆಪಿಯ ಅಭ್ಯರ್ಥಿಯೇ ಎಂದು ಅಶೋಕ್ ವಿರುದ್ಧ ತೊಡೆತಟ್ಟಿದ್ದು ಇದೇ ವೆಂಕಟೇಶ್‌ಮೂರ್ತಿ. ಈಗೇನಾದರೂ ಮೇಯರ್ ಆಗಿಬಿಟ್ಟರೆ ಮುಂದೊಮ್ಮೆ ತನಗೇ ಎಮ್ಮೆಲ್ಲೇ ಟಿಕೆಟ್ ಕೊಡಿ ಎಂದು ಪದ್ಮನಾಭನಗರದಲ್ಲಿ ಬಂದೇಳಬಹುದೆಂಬ ಭೀತಿ ಅಶೋಕ್‌ಗಿದೆ.


ಸಾಲದ್ದಕ್ಕೆ ವೆಂಕಟೇಶ್‌ಮೂರ್ತಿ ತನಗಿಂತಲೂ ರಾಜ್ಯ ಬಿಜೆಪಿ ಅಧ್ಯಕ್ಷ ಈಶ್ವರಪ್ಪನವರಿಗೇ ಹೆಚ್ಚುನಿಷ್ಠ ಎಂಬ ಹೊಟ್ಟೆಕಿಚ್ಚೂ ಅಶೋಕ್‌ರನ್ನು ಕಾಡುತ್ತಿದೆ. ಆದರೆ ಬಸವರಾಜು ಹಾಗಲ್ಲ. ತನಗೆ ಪಕ್ಕಾ ರಬ್ಬರ್‌ಸ್ಟ್ಯಾಂಪ್ ಆಗಬಲ್ಲ ಮತ್ತು ಯಾವತ್ತಿದ್ದರೂ ತನಗೇ ನಿಷ್ಠನಾಗಬಲ್ಲ ಎಂಬುದು ಅಶೋಕ್ ಲೆಕ್ಕಾಚಾರ. ಒಂದೆಡೆ ತನ್ನೆಲ್ಲಾ ಬೆಂಬಲಿಗ ಕೌನ್ಸಿಲರ್‌ಗಳಿಗೆ ಅನುಕೂಲ ಕಲ್ಪಿಸಿದಂತಾಗುತ್ತದೆ ಜೊತೆಗೆ ತಾನು ಹೇಳಿದಲ್ಲಿಗೆ ಕಣ್ಣುಮುಚ್ಚಿ ಸಹಿ ಹಾಕುವುದಕ್ಕೂ ಬೇಕಾಗುತ್ತಾನೆ.


ಈ ಎಲ್ಲಾ ಲಾಭದ ಲೆಕ್ಕ ಹಾಕಿಯೇ ಅಶೋಕ್ ತನ್ನ ಕುದುರೆಯಾಗಿ ಮೇಯರ್ ರೇಸಿಗೆ ಬಿಟ್ಟಿದ್ದು ಬಸವರಾಜುವನ್ನು. ಆದರೆ ಸೀನಿಯಾರಿಟಿ ಲೆಕ್ಕಕ್ಕೆ ಬಂದರೆ ಬಸವರಾಜು ವೆಂಕಟೇಶ್‌ಮೂರ್ತಿಗಿಂತಲೂ ಕಿರಿಯ. ಗೆದ್ದಿದ್ದು ಎರಡನೇ ಸಾರಿ ಮಾತ್ರ. ಮೊನ್ನೆ ಬನಶಂಕರಿ ವಾರ್ಡಿಗೆ ದಿವಾನಾ ಅಲಿಯ ಹತ್ಯೆಯಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆಯುವಾಗಲೇ ಗೆದ್ದನಂತರ ಯಾವುದೇ ಸ್ಥಾನಮಾನ ಕೇಳಕೂಡದೆಂಬ ಷರತ್ತು ವಿಧಿಸಿಯೇ ಅಶೋಕ್ ಬಸವರಾಜುಗೆ ಟಿಕೆಟ್ ಕೊಟ್ಟಿದ್ದರು. ಅದಕ್ಕೂ ಮುನ್ನ ಬಸವರಾಜು ಗಣೇಶ್ ಮಂದಿರ ವಾರ್ಡಿಗೆ ಕಾಂಗ್ರೆಸ್ ಅಭ್ಯರ್ಥಿ ಗೋವಿಂದರಾಜು ವಿರುದ್ಧ ಸೋತಿದ್ದ. ಬಹುಶಃ ಗೆದ್ದಿದ್ದರೆ ಮೇಯರ್ ಆಗುತ್ತಿದ್ದರೇನೋ. ಆದರೆ ಬಸವರಾಜು ದುರಾಶೆ ಬಿಡಲಿಲ್ಲ. ತನ್ನನ್ನು ಸೋಲಿಸಿದ್ದ ಗೋವಿಂದರಾಜುವನ್ನೇ ಲೋಕಾಯುಕ್ತರ ಬಿಡ್ಡಾಕ್ಕೆ ಕೆಡವಿದ. ಅಷ್ಟಾಗ್ಯೂ ಗೋವಿಂದರಾಜುವಿನ ಕೌನ್ಸಿಲರ್‌ಗಿರಿ ರದ್ದಾಗದೇ ಹೋದಾಗ ಮತ್ತೊಂದು ಅಪಾಯಕಾರಿ ಕೆಲಸಕ್ಕೆ ಕೈಯಿಟ್ಟ. ಅದು ಬನಶಂಕರಿಯ ಜೆಡಿಎಸ್ ಕೌನ್ಸಿಲರ್ ದಿವಾನಾ ಅಲಿಯ ಹತ್ಯೆ! ಇವತ್ತು ಅದೇ ದಿವಾನಾ ಅಲಿಯ ಜಾಗದಲ್ಲಿ ಬಸವರಾಜು ಗೆದ್ದಿದ್ದಾನೆ. ಗುರು ಅಶೋಕ್‌ರೇ ಗೃಹಮಂತ್ರಿಯಾದ್ದರಿಂದ ದಿವಾನಾ ಅಲಿಯ ಹತ್ಯೆಯ ಹಿಂದಿರುವ ಕಾಣದ ಕೈಗಳ ಬಗ್ಗೆ ನಿಷ್ಪಕ್ಷಪಾತ ತನಿಖೆ ಹೇಗೆ ಸಾಧ್ಯ? ಹಕೀಕತ್ತೇನೆಂದರೆ ದಿವಾನಾ ಅಲಿಯ ಕೊಲೆಗೂ ಮೊದಲೇ ಬಸವರಾಜು ತನ್ನ ಚುನಾವಣಾ ತಯಾರಿಗೆ ಕೈಹಾಕಿದ್ದ. ಒಟ್ಟು ಮತದಾರರ ಸಂಖ್ಯೆಯಲ್ಲಿ ಮುಸ್ಲಿಮರೇ ಅಧಿಕವಾಗಿದ್ದ ಬನಶಂಕರಿ ವಾರ್ಡಿನ ಮತದಾರರ ಪಟ್ಟಿಗೆ ಸರಿಸುಮಾರು ಐದು ಸಾವಿರದ ನಕಲಿ ಹಿಂದೂ ಮತಗಳನ್ನು ಬಸವರಾಜು ಸೇರಿಸಿದ್ದ!

ಅಲ್ಲಿಗೆ ದಿವಾನಾ ಅಲಿ ಕೊಲೆಯಾಗುವುದು ಮತ್ತು ಉಪಚುನಾವಣೆ ಬರುತ್ತದೆ ಎಂಬುದು ಬಸವರಾಜುಗೆ ಮೊದಲೇ ಗೊತ್ತಿತ್ತು!

ಇನ್ನೂ ಕೆದಕಹೊರಟರೆ ದಿವಾನಾ ಅಲಿಯ ಹಂತಕರ ಜೊತೆ ಬಸವರಾಜುಗೆ ಹತ್ಯೆಯ ಮೊದಲೇ ಸಂಪರ್ಕವಿತ್ತು, ದಿವಾನಾ ಅಲಿಯ ಸಂಬಂಧಿಕರು ಆರೋಪಿಸಿದಂತೆ ಹಂತಕರಿಗೆ ದುಡ್ಡೂಕಾಸಿನ ಅನುಕೂಲ ಕಲ್ಪಿಸಿದ್ದೇ ಬಸವರಾಜು. ತನ್ನ ಶಿಷ್ಯನ ಕ್ರಿಮಿನಲ್ ಖಾರಸ್ತಾನಕ್ಕೆ ಅಂದರೆ ದಿವಾನ್ ಅಲಿಯ ಹತ್ಯೆಗೆ ಗೃಹಮಂತ್ರಿ ಅಶೋಕ್ ಖುದ್ದು ಸಹಾಯಹಸ್ತ ಚಾಚಿದ್ದಕ್ಕೆ ಸಾಕಷ್ಟು ಪುರಾವೆಗಳಿದ್ದವು. ಇವತ್ತಿಗೂ ಅಷ್ಟೇ, ಕೌನ್ಸಿಲರ್ ದಿವಾನಾ ಅಲಿಯ ಹತ್ಯೆ ಕುರಿತಂತೆ ಸಿಬಿಐ ತನಿಖೆಯೇನಾದರೂ ಆಯಿತೆಂದರೆ ಹಾಲಿ ಮೇಯರ್ ಆಕಾಂಕ್ಷಿ ಬಸವರಾಜು ಮಾತ್ರವಲ್ಲ ಆತನ ಗಾಡ್‌ಫಾದರ್ ಗೃಹಮಂತ್ರಿ ಅಶೋಕ್ ಕೂಡ ಆರೋಪಿ ಸ್ಥಾನದಲ್ಲಿ ನಿಲ್ಲಬೇಕಾಗುತ್ತದೆ!

ಹಾಗೊಮ್ಮೆ ಬಸವರಾಜು ಮೇಯರ್ ಆಗದೇ ಹೋದರೆ ಯಾವುದೇ ಕಾರಣಕ್ಕೂ ವೆಂಕಟೇಶ್‌ಮೂರ್ತಿ ಮೇಯರ್ ಆಗಬಾರದೆಂಬ ಹಠ ಅಶೋಕ್‌ಗಿದೆ. ಅದಕ್ಕೆಂದೇ ಮತ್ತೊಬ್ಬ ಕುರುಬರ ಕೌನ್ಸಿಲರ್ ಪಟ್ಟಾಭಿರಾಮನಗರದ ಸೋಮಶೇಖರ್‌ನನ್ನು ಎತ್ತಿ ಕಟ್ಟಿದ್ದಾರೆ. ಈತ ಕೂಡ ಅಶೋಕ್ ಶಿಷ್ಯನೆ. ಆದರೆ ಸೀನಿಯಾರಿಟಿಯಲ್ಲಿ ವೆಂಕಟೇಶ್‌ಮೂರ್ತಿಗಿಂತಲೂ ಕಮ್ಮಿ. ಗೆದ್ದಿರುವುದು ಎರಡನೇ ಸಾರಿ. ಹಿಂದೆ ಗೆದ್ದಾಗಲೇ ಮಕ್ಕಳ ಆಟದ ಮೈದಾನವನ್ನು ಕಬಳಿಸಿ ನೆಲಗಳ್ಳರಿಗೆ ಮಾರಿಕೊಂಡಿದ್ದ. 10 ಕೋಟಿಗೂ ಅಧಿಕ ಮೊತ್ತದ ಬೋಗಸ್ ಬಿಲ್ ದೋಚಿದ್ದ. ಕಂಡೋರ ಆಸ್ತಿಗೆ ಬೇಲಿ ಹಾಕಿಸುವುದು ಮತ್ತು ಅದಕ್ಕೆಂದೇ ರೌಡಿಗಳನ್ನು ಸಾಕುವುದು ಈತನ ನಿತ್ಯ ಕಸುಬು. ಇಂಥವನನ್ನು ಮೇಯರ್ ಮಾಡಿಬಿಟ್ಟರೆ ಬಿಬಿಎಂಪಿಯನ್ನು ನಿರಾಯಾಸವಾಗಿ ದೋಚಬಹುದೆಂಬ ಹುನ್ನಾರ ಅಶೋಕ್‌ರದ್ದು. ಆದರೆ ಸೋಮನನ್ನು ಉಳಿಕೆ ಬಿಜೆಪಿ ನಾಯಕರು ಒಪ್ಪಬೇಕಲ್ಲ?


ವೆಂಕಟೇಶ್‌ಮೂರ್ತಿ


ಕಲ್ಕೆರೆ ರೇವಣ್ಣ


ಇದೆಲ್ಲದರ ಹೊರತಾಗಿಯೂ ಸೋಮಣ್ಣನ ರಣತಂತ್ರವೇ ಬೇರೆಯಿದೆ. ಅದು ಮೂಡಲಪಾಳ್ಯ ವಾರ್ಡಿನ ಶಾಂತಕುಮಾರಿಯನ್ನು ಛೂಬಿಡುವುದು. ಶಾಂತಕುಮಾರಿ ಗೆದ್ದಿರುವುದು ಕೂಡ ಮೂರನೇ ಬಾರಿಯಾದರೂ ಬಿಜೆಪಿಯಿಂದ ಗೆದ್ದಿದ್ದು ಇದೇ ಮೊದಲು. ಸದ್ಯ ಮೇಯರಾಗಿರುವ ಶಾರದಮ್ಮನ ಹೊರತಾಗಿ ಮತ್ತೆ ಮಹಿಳೆಯನ್ನೇ ಮೇಯರ್ ಮಾಡಲು ಒಪ್ಪುವವರ್‍ಯಾರು? ಇನ್ನು ಸೋಮಣ್ಣನ ಮುಂದೆ ಉಳಿಕೆ ಬಿಜೆಪಿ ಶಾಸಕರು ಮಣೆಹಾಕಬೇಕಲ್ಲ!

ಈ ಎಲ್ಲ ಹಿನ್ನೆಲೆಯಲ್ಲಿ ಲೆಕ್ಕ ಹಾಕಿದರೆ ಅಂತಿಮವಾಗಿ ಪೈಪೋಟಿ ಅಂತಿದ್ದರೆ ಅದು ಕತ್ರಿಗುಪ್ಪೆಯ ವೆಂಕಟೇಶ್‌ಮೂರ್ತಿ ಮತ್ತು ಬನಶಂಕರಿಯ ಬಸವರಾಜು ಮಧ್ಯೆ ಮಾತ್ರ. ಕುರುಬರ ಪೈಕಿ ಸೋಮಶೇಖರ್ ಮತ್ತು ವೆಂಕಟೇಶ್‌ಮೂರ್ತಿಯ ಮಧ್ಯೆ ವ್ಯವಹಾರ ಕುದುರದ ಪಕ್ಷದಲ್ಲಿ 'ನಾನೂ ಇದ್ದೀನಿ' ಎಂದು ಕಲ್ಕೆರೆ ರೇವಣ್ಣ ಎಂಬ ಕುರುಬ ಕೌನ್ಸಿಲರ್ ಕೂಡ ಅಖಾಡಕ್ಕಿಳಿದಿದ್ದಾನೆ. ದುಡ್ಡುಕಾಸಿನ ವಿಷಯದಲ್ಲಿ ರೇವಣ್ಣ ಮಿಕ್ಕೆಲ್ಲರಿಗಿಂತಲೂ ಬಲಾಢ್ಯ. ಆದರೆ ಗೆದ್ದಿರುವುದು ಇದೇ ಮೊದಲ ಬಾರಿ. ಅಶೋಕ್ ಹಠವೇ ನಡೆಯಿತೆಂದರೆ ಬಿಜೆಪಿ ಸರ್ಕಾರದ ಮೂರನೇ ರಬ್ಬರ್‌ಸ್ಟ್ಯಾಂಪ್ ಮೇಯರ್ ಆಗಿ ಬಸವರಾಜು ಉದ್ಭವಿಸುತ್ತಾನೆ. ಈಶ್ವರಪ್ಪ ಕೈ ಮೇಲಾಯಿತೆಂದರೆ ವೆಂಕಟೇಶ್‌ಮೂರ್ತಿಗೆ ಮೇಯರ್‌ಗಾದಿ ಕಟ್ಟಿಟ್ಟಬುತ್ತಿ.

ಅಶೋಕ್ ಹಠವೇ ಗೆಲ್ಲುತ್ತಾ
ಈಶ್ವರಪ್ಪ ಕೈ ಮೇಲಾಗುತ್ತಾ?

• ರಾ. ಸೋಮನಾಥ್

ರಬ್ಬರ್‌ಸ್ಟ್ಯಾಂಪ್ ಆಯ್ಕೆಗೆ ಭಟ್ಟಂಗಿಗಳ ಕಮಿಟಿ!


ರಘು


ಸುರೇಶ್‌ಕುಮಾರ್



ಸುಬ್ಬಣ್ಣ

ಇನ್ನೆಲ್ಲಿ ಈಶ್ವರಪ್ಪ ಬಿಗಿಪಟ್ಟು ಹಿಡಿಯುತ್ತಾರೋ ಎಂದು ಹುಷಾರಾದ ಅಶೋಕ್ ಅವರ ವಿರುದ್ಧ ಹೊಸ ತಂತ್ರವೊಂದನ್ನು ರೂಪಿಸಿದ್ದಾರೆ. ಅದು ಮೇಯರ್ ಆಯ್ಕೆಗೆಂದೇ ತನ್ನ ಮೂಗಿನ ನೇರಕ್ಕೊಂದು ಸಮಿತಿ ರಚಿಸುವುದು. ಈ ಸಮಿತಿಯಲ್ಲಿ ಇರುವವರಾದರೂ ಯಾರು?

ಬೆಂಗಳೂರು ಮಹಾನಗರ ಬಿಜೆಪಿ ಅಧ್ಯಕ್ಷ ಸುಬ್ಬಣ್ಣ ಉರ್ಫ್ ಸುಬ್ಬನರಸಿಂಹ ಮತ್ತು ಬೆಂಗಳೂರು ನಗರ ಜಿಲ್ಲಾಧ್ಯಕ್ಷ ಸಚ್ಚಿದಾನಂದ ಮೂರ್ತಿ. ಇಬ್ಬರೂ ಅನಂತಕುಮಾರ್ ಭಟ್ಟಂಗಿಗಳು. ಜಾತಿಯಲ್ಲಿ ಬ್ರಾಹ್ಮಣರು. ಶಾಸಕ ವಿಜಯಕುಮಾರ್, ರಘು, ಸತೀಶ್ ರೆಡ್ಡಿ ಕೂಡ ಒಂದಲ್ಲಾ ಒಂದು ರೀತಿಯಿಂದ ಅನಂತ್ ಅಜ್ಞಾಪಾಲಕರೆ. ಇನ್ನು ಮಾಜಿ ಮೇಯರ್ ಎಸ್.ಕೆ.ನಟರಾಜ್ ಹೇಳಿಕೇಳಿ ಅಶೋಕ್ ಚೇಲಾ. ಎತ್ತಿಂದೆತ್ತ ನೋಡಿದರೂ ಇದರಲ್ಲಿ ಕುರುಬರ ಬಗ್ಗೆ ಕಾಳಜಿ ಇರುವವರಾಗಲಿ, ಈಶ್ವರಪ್ಪ ಮಾತಿಗೆ ಮಣೆಹಾಕುವವರಾಗಲಿ ಇಲ್ಲವೇ ಇಲ್ಲ. ಆದರೂ ತನ್ನ ಚೇಲಾಗಳನ್ನೇ ಮೇಯರ್ ಮಾಡಲು ಅಶೋಕ್ ತನ್ನ ಮೂಗಿನ ನೇರಕ್ಕೊಂದು ಆಯ್ಕೆ ಸಮಿತಿ ಹುಟ್ಟುಹಾಕಿದ್ದಾರೆ.

ಹಿಂದೆ ಯಾವತ್ತೂ ಈ ರೀತಿಯ ಸಮಿತಿಯಿರಲಿಲ್ಲ. ಆ ಕಾಲದಿಂದಲೂ ಬೆಂಗಳೂರಿನ ಮಟ್ಟಿಗೆ ಪಕ್ಷವನ್ನು ಸಂಘಟಿಸಿಕೊಂಡೇ ಬಂದ ಸುರೇಶ್‌ಕುಮಾರ್ ಇಲ್ಲಿ ಲೆಕ್ಕಕ್ಕೆ ಇಲ್ಲ. ತನ್ನ ಮಾತಿಗೆ ಮಣೆಹಾಕುವ, ತನ್ನದೇ ಬೆಂಬಲಿಗರಿಂದ ತುಂಬಿರುವ ಭಟ್ಟಂಗಿಗಳ ಸಮಿತಿಯನ್ನು ತಾನೇ ರಚಿಸಿ, ಅದನ್ನು ಘೋಷಿಸಿದಾಕ್ಷಣ ಯೋಗ್ಯತೆಯ ಆಧಾರದ ಮೇರೆಗೆ ಮೇಯರ್ ಆಯ್ಕೆಯಾಗುತ್ತದೆ ಎಂದು ನಂಬುವವರ್‍ಯಾರು?

ಬಹುಶಃ ಬೆಂಗಳೂರೆಂಬುದು ತನ್ನ ಪಿತ್ರಾರ್ಜಿತ ಸೊತ್ತೆಂದು ಅಶೋಕ್ ಭಾವಿಸಿರಬೇಕು. ಬೆಂಗಳೂರಿನ ಯಾವೊಬ್ಬ ಬಿಜೆಪಿ ಶಾಸಕನಿಗೂ ಸ್ವಾಭಿಮಾನ, ಸ್ವಂತ ವ್ಯಕ್ತಿತ್ವವೇ ಇಲ್ಲವೆ? ಈ ಬಾರಿಯೂ ರಬ್ಬರ್ ಸ್ಟ್ಯಾಂಪ್ ಮೇಯರೇ ಆಗಬೇಕೆ?



ಕನ್ನಡ ಚಿತ್ರರಂಗದಲ್ಲಿ ಈ ಮಟ್ಟದ ಸಿನಿಮಾ ಪೈಪೋಟಿ, ಸ್ಟಾರ್‌ವಾರ್ ...ವರೆಗೆ ಎದುರಾಗಿರಲಿಕ್ಕಿಲ್ಲ.


ಅಣ್ಣಾ ಬಾಂಡ್, ಕಠಾರಿವೀರ ಸುರಸುಂದರಾಂಗಿ ಚಿತ್ರಗಳು ಏಪ್ರಿಲ್ ...ರಂದು ಬಿಡುಗಡೆಯಾಗಲು ದೊಡ್ಡ ...ಟ್ಟದ ಸೆಣಸಾಟ ನಡೆಸುತ್ತಿವೆ. ...ರಡರ ಜೊತೆಗೆ ಕಿಚ್ಚ ಸುದೀಪ್ ...ಸಿರುವ ತೆಲುಗು ಸಿನೆಮಾ ...ಗ' ಕೂಡಾ ಈಗಲೇ ...ಗಪ್ಪಳಿಸುತ್ತಿದೆ.

ಕನ್ನಡದ ದೊಡ್ಡ ...ಮಾಗಳ ಎದುರಾಗಿ ...ಭಾಷಾ ಚಿತ್ರಗಳು ...ಬುಗಡೆಯಾಗಿ ಒಂದಿಷ್ಟು ...ನ್ ಕ್ರಿಯೇಟ್ ...ಡುವುದು ...ಮಾಮೂಲು. ಆದರೆ, ...ಕನ್ನಡದ ಮಾಸ್ ...ರೋ ಸುದೀಪ್ ...ಸಿರುವ 'ಈಗ' ಸಿನಿಮಾ ...ೀಸ್ ಆಗುತ್ತಿರುವುದು, ...ಾನೇರವಾಗಿ ಕನ್ನಡದ ...ಡು ಚಿತ್ರಗಳಿಗೆ ...ಲು ಹಾಕಿದಂತಿದೆ. ...ಕೆಂದರೆ ಕನ್ನಡ ...ತ್ತು ತೆಲುಗು ...ಕ್ಷಕರಿಬ್ಬರನ್ನೂ ...ಗ' ತನ್ನತ್ತ ...ಯುಲಿದೆ. 'ಈಗ'ದ ...ರ್ದೇಶಕ ...ಜಮೌಳಿ ಸದ್ಯ ...ತ್ ...ಡಿಯಾದ

ಈ ಎಲ್ಲದರ ಮಧ್ಯೆ ಅಣ್ಣಾ ಬಾಂಡ್ ಮತ್ತು ಕಠಾರಿವೀರ ಸಿನಿಮಾಗಳು ನೇರವಾಗಿ ಗುದ್ದಾಟಕ್ಕೆ ನಿಂತಿವೆ.

ಪುನೀತ್ ಮತ್ತು ಉಪೇಂದ್ರ ಇಬ್ಬರೂ ಮಾಸ್ ಹೀರೋಗಳಾಗಿರುವುದರಿಂದ ಒಂದೇ ದಿನ ಇಬ್ಬರ ಸಿನಿಮಾಗಳೂ ಬಿಡುಗಡೆಯಾದರೆ ಥಿಯೇಟರ್ ಸಮಸ್ಯೆ ಎದುರಾಗುತ್ತದೆ. ಜೊತೆಗೆ ಪ್ರೇಕ್ಷಕರೂ ಹಂಚಿಹೋಗುತ್ತಾರೆ. ಹೀಗಾಗಿ ಏಪ್ರಿಲ್ 27ಕ್ಕೆ ಅಣ್ಣಾ ಬಾಂಡ್ ಎದುರು ಬೇರೆ ಹೀರೋಗಳ ದೊಡ್ಡ ಸಿನಿಮಾಗಳು ಬಿಡುಗಡೆಯಾಗುವುದು ಸಹಜವಾಗೇ ಟೆನ್ಷನ್ ಸೃಷ್ಟಿಸಿದೆ. ಈಗ ಅಣ್ಣಾಬಾಂಡ್‌ಗೆ ದೊಡ್ಡ ತೊಡಕಾಗಿರುವುದು ಉಪೇಂದ್ರನ 'ಕಠಾರಿವೀರ ಸುರಸುಂದರಾಂಗಿ'.


ಸುಮಾರು ಎರಡು ದಶಕಗಳ ಹಿಂದೆ ಬಂದಿದ್ದ 'ಕಾಡಿನಲ್ಲಿ ಜಾತ್ರೆ' ಸಿನಿಮಾದ ನಂತರ ಪೂರ್ಣ ಪ್ರಮಾಣದ ತ್ರೀಡಿ ತಂತ್ರಜ್ಞಾನದಲ್ಲಿ ಮೂಡಿಬಂದಿರುವ ಚಿತ್ರ 'ಕಠಾರಿವೀರ'. ಈ ಚಿತ್ರವನ್ನು ಸುಮಾರು ಎಪ್ಪತ್ತಕ್ಕೂ ಅಧಿಕ ಚಿತ್ರ ಮಂದಿರಗಳಲ್ಲಿ ರಿಲೀಸ್ ಮಾಡಬೇಕೆನ್ನುವುದು ನಿರ್ಮಾಪಕ ಮುನಿರತ್ನರ ಪ್ಲಾನು. ಆದರೆ, ಮಲ್ಟಿಪ್ಲೆಕ್ಸ್‌ಗಳೂ ಸೇರಿದಂತೆ ಕರ್ನಾಟಕದಲ್ಲಿ ಇರುವ ತ್ರೀ ಡಿ ಸಿನಿಮಾ ಪ್ರದರ್ಶನಕ್ಕಿರುವ ಥಿಯೇಟರುಗಳು ಕೇವಲ ಇಪ್ಪತ್ತೆರಡು. ಈ ಕಾರಣಕ್ಕೆ ಮುನಿ ಸುಮಾರು ನಲವತ್ತು ಚಿತ್ರಮಂದಿರಗಳಿಗೆ ತಮ್ಮ ಖರ್ಚಿನಲ್ಲೇ ತ್ರೀಡಿ ಚಿತ್ರಪ್ರದರ್ಶನಕ್ಕೆ ಬೇಕಿರುವ ಉಪಕರಣಗಳನ್ನು ಅಳವಡಿಸುತ್ತಿದ್ದಾರೆ. ಒಟ್ಟಾರೆಯಾಗಿ ಸುಮಾರು ಹತ್ತು ಕೋಟಿಗೂ ಅಧಿಕ ಖರ್ಚಿನಲ್ಲಿ ನಿರ್ಮಾಣವಾಗಿರುವ ಈ ಚಿತ್ರವನ್ನು ಗೆಲ್ಲಿಸಲೇಬೇಕಿರುವ ಅನಿವಾರ್ಯತೆ ಮುನಿಯ ಮುಂದಿದೆ.




'ಈಗ'-'ಕಠಾರಿವೀರ'ನಿಗೆ ಅಣ್ಣಾಬಾಂಡ್ ಹೆದರಿದನಾ?

• ಅರುಣ್ ಕುಮಾರ್.ಜಿ

...ರ್ ಡೈರೆಕ್ಟರ್. ಮೌಳಿ ಕಳೆದ ಹತ್ತು ವರ್ಷದಿಂದ ಈವರೆಗೆ ...ರ್ದೇಶಿಸಿರುವ ಸ್ಟೂಡೆಂಟ್ ನಂ.1, ...ಹಾದ್ರಿ, ಸೈ, ಛತ್ರಪತಿ, ...ಮಾರ್ಕುಡು, ಯಮದೊಂಗ, ...ಗಧೀರ, ಮರ್ಯಾದ ರಾಮಣ್ಣ ...ಕ ಒಂದೇ ಒಂದು ಸಿನಿಮಾವೂ ...ೋತಿಲ್ಲ. ಪ್ರತಿಯೊಂದು ಚಿತ್ರವೂ ...ರ್ ಜ್ಯೂಬಿಲಿ ಆಚರಿಸಿವೆ. ಹೀಗೆ ...ೋಲಿಲ್ಲದ ಸರದಾರನಂತೆ ...ರೆಯುತ್ತಿರುವ ರಾಜಮೌಳಿ ಮತ್ತು ...ನ್ನಡದ ಕಿಚ್ಚನ ಕಾಂಬಿನೇಷನ್‌ನಲ್ಲಿ ...ರುತ್ತಿರುವ 'ಈಗ' ಆಂಧ್ರ ಮತ್ತು ...ರ್ನಾಟಕ ರಾಜ್ಯಗಳ ಪ್ರೇಕ್ಷಕರಿಗೆ ...ಾತ್ರವಲ್ಲದೆ, ಇಡೀ ದಕ್ಷಿಣ ಭಾರತ ಚಿತ್ರರಸಿಕರ ನಿರೀಕ್ಷೆಯ ಸಿನಿಮಾ ...ಗಿದೆ. ಅದ್ಭುತವೆನಿಸುವಂಥ ಗ್ರಾಫಿಕ್ಸ್‌ಗಳನ್ನು ಹೊಂದಿರುವ 'ಈಗ' ...ರೋಬ್ಬರಿ ಇಪ್ಪತ್ತೆರಡು ಕೋಟಿ ರೂಪಾಯಿಗಳ ಬಜೆಟ್‌ನಲ್ಲಿ ...ರ್ಮಾಣವಾಗಿದೆ.






ಮುನಿರತ್ನ ತನ್ನ ಚಿತ್ರವನ್ನು ಬಿಡುಗಡೆ ಮಾಡಲು ಪ್ರಯತ್ನ ಮಾಡುತ್ತಿದ್ದಂತೇ ತಕರಾರುಗಳೂ ಹೆಚ್ಚುತ್ತಲೇ ಇವೆ. ಕಳೆದ ವಾರ ರಾಘವೇಂದ್ರ ರಾಜ್‌ಕುಮಾರ್ ಮುನಿರತ್ನರನ್ನು ವಜ್ರೇಶ್ವರಿ ಕಚೇರಿಗೆ ಕರೆಸಿಕೊಂಡು 'ಅಣ್ಣಾಬಾಂಡ್'ಗೆ ಮೂರ್ನಾಲ್ಕು ವಾರಗಳ ಅಂತರ ನೀಡಿ 'ಕಠಾರಿವೀರ'ನನ್ನು ಬಿಡುಗಡೆ ಮಾಡಿ ಎಂದು ಹೇಳಿದ್ದರು. ಆದರೆ ಮುನಿರತ್ನ ರಾಘಣ್ಣನ ಮಾತಿಗೆ ಕಿವಿಗೊಡದೇ ತಮ್ಮ ಚಿತ್ರದ ಬಿಡುಗಡೆ ಸಿದ್ಧತೆ ಮುಂದುವರೆಸಿದರು.

ಕೊಬ್ರಿ ಕಾಲು ಅಡ್ಡ

"ನಮ್ಮ ಸಂಸ್ಥೆಯಿಂದ ನಿರ್ಮಾಣವಾಗುತ್ತಿರುವ 'ಗಾಡ್ ಫಾದರ್' ಚಿತ್ರದ ಚಿತ್ರೀಕರಣ ಸುಮಾರು ಒಂದು ವರ್ಷದಿಂದ ನಡೆಯುತ್ತಿದೆ. ಇದರಲ್ಲಿ ಉಪೇಂದ್ರ

▶19

ಪ್ರಸಾದ್ ಪ್ಲಾನು ಯಾಕೆ ವರ್ಕ್‌ಔಟಾಗಿಲ್ಲ?



'ಅಣ್ಣಾಬಾಂಡ್' ಚಿತ್ರ ನಿರ್ಮಾಣ ಹಂತದಲ್ಲಿದ್ದಾಗಲೇ ಡಿಸ್ಟ್ರಿಬ್ಯೂಟರ್ ಪ್ರಸಾದ್ ಹದಿನೈದು ಕೋಟಿ ರೂಪಾಯಿಗಳಿಗೆ ಚಿತ್ರ ಔಟ್‌ರೈಟ್ ಖರೀದಿಸಿದ್ದರು. 2.61 ಕೋಟಿ ಅಡ್ವಾನ್ಸ್ ಸಹಾ ನೀಡಿದ್ದರು.

ಹದಿನೈದು ಕೋಟಿ ರೂಪಾಯಿಗಳಿಗೆ ಸಿನಿಮಾ ಖರೀದಿಸಿ ಕರ್ನಾಟಕದ ಎಲ್ಲ ವಿತರಕರು ಮತ್ತು ಪ್ರದರ್ಶಕರನ್ನು ಒಂದು ಹೋಟೆಲಿಗೆ ಕರೆಸಿ, ಅಲ್ಲಿ 'ಅಣ್ಣಾಬಾಂಡ್'ನನ್ನು ಹರಾಜು ಹಾಕುವುದು ಪ್ರಸಾದ್ ಪ್ಲಾನಾಗಿತ್ತು. ಹಾಗೆ ಹರಾಜು ಪ್ರಕ್ರಿಯೆಯಲ್ಲಿ ಬಿಡ್ ಮಾಡಿದ ಪ್ರದರ್ಶಕರಿಂದ ಪ್ರಸಾದ್‌ಗೆ ಹಾಕಿದ ಬಂಡವಾಳದ ಮೇಲೆ ಐದು ಕೋಟಿಯ ಪ್ರಾಫಿಟ್ ಗ್ಯಾರಂಟಿಯಾಗಿ ಬರುತ್ತಿತ್ತು.


ಆದರೆ ಕಳೆದ ವಾರ ಆಡಿಯೋ ಬಿಡುಗಡೆಯಾದಾಗ ರಾಘವೇಂದ್ರ ರಾಜ್ ಕುಮಾರ್ 'ಈ ಚಿತ್ರವನ್ನು ನಾವು ಫಿಫ್ಟಿ ಫಿಫ್ಟಿ ಶೇರಿಂಗ್ ಸಿಸ್ಟಂನಲ್ಲಿ ರಿಲೀಸ್ ಮಾಡ್ತೀವಿ' ಎಂದು ಬಾಂಬು ಹಾಕಿದ್ದಾರೆ. ಇದು ಪ್ರಸಾದ್ ಪಾಲಿಗೆ ನುಂಗಲಾರದ ತುತ್ತಾಗಿಬಿಟ್ಟಿದೆ. ಬೇಸರಕ್ಕೆ ಬಿದ್ದ ಪ್ರಸಾದ್ ರಾಘವೇಂದ್ರ ರಾಜ್‌ಕುಮಾರ್‌ಗೆ ಪತ್ರವೊಂದನ್ನು ಬರೆದು 'ನನಗೆ ಮೊದಲೇ ಹೇಳದೆ, ನೀವು ಆಡಿಯೋ ರಿಲೀಸ್‌ನಲ್ಲಿ ಏಕಾಏಕಿ ಪಾರ್ಟನರ್‌ಶಿಪ್‌ನಲ್ಲಿ ರಿಲೀಸ್ ಮಾಡ್ತೀವಿ ಎಂದು ಅನೌನ್ಸ್ ಮಾಡಿದ್ದರಿಂದ ಅವಮಾನವಾಗಿದೆ' ಎಂದು ಹೇಳಿಕೊಂಡಿದ್ದಾರೆ.

ಈಗ ರಾಘಣ್ಣ ಹೇಳುವ ಪ್ರಕಾರ ಶೇರಿಂಗ್ ಸಿಸ್ಟಮ್ ಎಂದಾದರೆ, ಪ್ರಸಾದ್ ಏಳೂವರೆ ಕೋಟಿ (ನಾನ್ ರೀಫಂಡಬಲ್) ದುಡ್ಡನ್ನು ನೀಡಿ ವಿತರಣೆಯಲ್ಲಿ ಪಾಲುದಾರರಾಗಬೇಕಾಗುತ್ತದೆ. ಹಾಗೆ ಷೇರಿಂಗ್ ಸಿಸ್ಟಂನಲ್ಲಿ ಸಿನಿಮಾ ಪಡೆದರೆ ಪ್ರಸಾದ್ ಹಾಕಿದ ದುಡ್ಡು ಕೈಸೇರಲು 'ಅಣ್ಣಬಾಂಡ್' ಕನಿಷ್ಟ ಐದು ವಾರಗಳ ಕಾಲ ಭರ್ಜರಿ ಕಲೆಕ್ಷನ್ ಮಾಡಬೇಕು. ಒಂದು ವೇಳೆ ಮಾಮೂಲಿ ಎಲ್ಲ ಚಿತ್ರಗಳಿಗೂ ಆದಂತೆ ಎರಡನೇ ವಾರ 50% ಮತ್ತು ಮೂರನೇವಾರದಿಂದ 10% ನಂತೆ ಕಲೆಕ್ಷನ್ ಡ್ರಾಪ್ ಆದರೆ ಪ್ರಸಾದ್‌ಗೆ ನಯಾಪೈಸೆಯ ಲಾಭ ಬರುವುದಿಲ್ಲ.

ನಿರ್ಮಾಪಕ ರಾಘವೇಂದ್ರ ರಾಜ್‌ಕುಮಾರ್‌ಗೆ ಚಾನೆಲ್ ರೈಟ್ಸ್‌ನಿಂದ ಹಣ ಸಿಗುವುದರಿಂದ ಭರ್ಜರಿ ಲಾಭವಾಗುತ್ತದೆ. ಹೀಗಾಗಿ ಪ್ರಸಾದ್ ಈಗ ಯಾಕಾದರೂ 'ಅಣ್ಣಾಬಾಂಡ್'ಗೆ ಕೈಯಿಟ್ಟೆನೋ ಎಂದು ಮುಖ ಕಿವುಚುತ್ತಿದ್ದಾರೆ.


ಆರಂಭದಲ್ಲಿ 15 ಕೋಟಿಗೆ ಔಟ್‌ರೈಟ್ಸ್ ಕೊಡ್ತೀನಿ ಎಂದಿದ್ದ ರಾಘವೇಂದ್ರ ರಾಜ್‌ಕುಮಾರ್ ಯಾಕೆ ಇದ್ದಕ್ಕಿದ್ದಹಾಗೆ ವರಸೆ ಬದಲಿಸಿದರು? ಏನವರ ಲೆಕ್ಕಾಚಾರ? ಅನ್ನುವುದು ಗಾಂಧಿನಗರದವರ ತಲೆಗೆ ಹುಳಾ ಬಿಟ್ಟಂತಾಗಿದೆ.

ಹೆಚ್ಚೂ ಕಮ್ಮಿ ವಿತರಕರಿಂದ ಬಂದ ಅಡ್ವಾನ್ಸ್‌ನಲ್ಲೇ ಸಿನಿಮಾ ಮುಗಿಸಿದ ರಾಘಣ್ಣ ಹದಿನೈದು ಕೋಟಿ ರೂಪಾಯಿಗೆ ಮಾರಿದರೆ ಪುನೀತ್ ಸಂಭಾವನೆ, ಅದೂ, ಇದೂ ಅಂತಾ ಲೆಕ್ಕಾ ಹಾಕಿದರೂ ಎಲ್ಲಾ ಸೇರಿ ಕನಿಷ್ಟ ಹತ್ತು ಕೋಟಿಗಳ ಲಾಭವಾಗುತ್ತದೆ ಎಂದು ಅಂದಾಜಿಸಿದ್ದರು. ಆಗ ಎದ್ದು ಬಂದರು ಅಮ್ಮ!



ಅಪಾರವಾಗಿ ಬಾಧಿಸಿದ ಕ್ಯಾನ್ಸರ್‌ನಿಂದ ತತ್ತರಿಸಿದ್ದ ಪಾರ್ವತಮ್ಮ ಈಗ ಚೇತರಿಸಿಕೊಂಡಿದ್ದಾರೆ. ಮುಂಚಿನಂತೆ ವ್ಯವಹಾರಗಳಲ್ಲಿ ತೊಡಗಿಕೊಂಡಿದ್ದಾರೆ. ಹದಿನೈದು ಕೋಟಿಗೆ ಪ್ರಸಾದ್ ಸಿನಿಮಾವನ್ನು ಪಡೆದು, ಅದನ್ನು ಆತ ಹರಾಜಿಗಿಡುವ ಪ್ಲಾನು ಪಾರ್ವತಮ್ಮನವರ ಕಿವಿಗೆ ಬಿದ್ದಿದ್ದೇ ಅವರೂ ಕೂತು ಯೋಚಿಸಿದ್ದಾರೆ. ವ್ಯವಹಾರದಲ್ಲಿ ಪಾರ್ವತಮ್ಮನವರದ್ದು ಪ್ರಚಂಡ ಬುದ್ಧಿವಂತಿಕೆ. 'ಅಪ್ಪುವಿನ 'ಜಾಕಿ' ಸಿನಿಮಾ ಒಟ್ಟು 33.72 ಕೋಟಿ ರೂ. ಟರ್ನೋವರ್ ಮಾಡಿದೆ. ಹೀಗಿರುವಾಗ ಹದಿನೈದು ಕೋಟಿಗೆ ಸಿನಿಮಾವನ್ನು ಮಾರುವುದು ದಡ್ಡತನ' ಎಂದು ರಾಘಣ್ಣನಿಗೆ ಮನದಟ್ಟು ಮಾಡಿದ್ದಾರೆ. ಈ ಕಾರಣದಿಂದಲೇ ರಾಘಣ್ಣ 'ಬಾಂಡ್' ಆಡಿಯೋ ರಿಲೀಸ್ ಸಮಾರಂಭದಲ್ಲಿ 50:50 ಫಾರ್ಮುಲಾ ಎಂಬ 'ಬಾಂಬು' ಸಿಡಿಸಿದ್ದು!

'ಈಗ' ಗೆದ್ದರೆ?



ಈವರೆಗೆ ಎಷ್ಟೋ ಮಂದಿ ಹೀರೋಗಳು, ವಿಲನ್‌ಗಳು ಕನ್ನಡ ಚಿತ್ರರಂಗದಲ್ಲಿ ಒಳ್ಳೆ ಅವಕಾಶ ಸಿಗದೇ ಪರಭಾಷೆಗೆ ಹಾರಿದ್ದಾರೆ; ಗೆದ್ದು ದೈತ್ಯರಾಗಿದ್ದಾರೆ. ಆದರೆ ಸುದೀಪ್ ಇಲ್ಲಿ ಇರುವುದೆಲ್ಲವನ್ನೂ ಬಿಟ್ಟು, ಹಿಂದಿ-ತೆಲುಗು ಚಿತ್ರರಂಗಕ್ಕೆ ಎಂಟ್ರಿ ನೀಡಿದ್ದಾರೆ.

ಹಾಗೆ ನೋಡಿದರೆ, ಕನ್ನಡ ಚಿತ್ರರಂಗದಲ್ಲಿ ಈ ತಲೆಮಾರಿನ ನಾಯಕನಟರನ್ನು ಪ್ರತಿನಿಧಿಸುವ ಬೆರಳೆಣಿಕೆಯ ಹೀರೋಗಳಲ್ಲಿ ಸುದೀಪ್ ಮುಂಚೂಣಿಯ ನಟ. ಎಂಥದ್ದೇ ಪಾತ್ರ ಕೊಟ್ಟರೂ ನಿಭಾಯಿಸುವ ಛಾತಿ, ನಟನೆಯಲ್ಲಿನ ಪಕ್ವತೆ, ಆಕರ್ಷಕ ಮೈಕಟ್ಟು, ಸ್ಟಾರ್‌ಡಂ ಎಲ್ಲವೂ ಇರುವ ಸುದೀಪ್ ಗೆಲುವು, ಸೋಲು ಎರಡನ್ನೂ ಕಂಡಿರುವ ವ್ಯಕ್ತಿ. ಹೀರೋ ಆಗಿ ಬ್ಯುಸಿ ಇದ್ದರೂ, ನಿರ್ದೇಶನಕ್ಕಿಳಿದ ಸುದೀಪ್ ಅಲ್ಲೂ ಗೆಲುವು ಕಂಡ ಪ್ರತಿಭಾವಂತ. ಆದರೂ ಸುದೀಪ್‌ಗೆ 'ಕನ್ನಡ ಚಿತ್ರರಂಗ ತನ್ನನ್ನು ಸರಿಯಾಗಿ ಬಳಸಿಕೊಳ್ಳುತ್ತಿಲ್ಲ' ಎನ್ನುವ ಕೊರಗಿತ್ತು. ಈ ನಡುವೆ ರಾಮ್ ಗೋಪಾಲ್ ವರ್ಮಾರ ಸಂಪರ್ಕ ಪಡೆದು 'ಫೂಂಕ್' ಮತ್ತು 'ರಕ್ತಚರಿತ್ರ' ಎಂಬೆರಡು ಬಾಲಿವುಡ್ ಚಿತ್ರಗಳಲ್ಲಿ ನಟಿಸಿದ್ದೂ ಆಯಿತು. ಈಗ ಗ್ರೇಟ್ ಇಂಡಿಯಾದ ಸ್ಟಾರ್ ಡೈರೆಕ್ಟರ್ ರಾಜಮೌಳಿಯ 'ಈಗ' ಚಿತ್ರದಲ್ಲಿ ಸುದೀಪ್ ಪೂರ್ಣಪ್ರಮಾಣದ ನಾಯಕನಾಗಿ ನಟಿಸಿದ್ದಾರೆ. ನಿರೀಕ್ಷೆಯಂತೆಯೇ 'ಈಗ' ಗೆದ್ದುಬಿಟ್ಟರೆ, ಸುದೀಪ್ ಇನ್ನಷ್ಟು ಮೇಲೇರುವುದು ಖಚಿತ.

ರಿಯಲ್ ಸ್ಟಾರ್ ಮಾಸ್ಟರ್ ಬ್ರೈನ್

ಇತ್ತ ಕೊಬ್ರಿ ಮಂಜು ಮತ್ತು ಮುನಿರತ್ನ ನಡುವೆ ಸಣ್ಣದಾಗಿ ಕಿಡಿಯಿಟ್ಟು ಅತ್ತ ಮಜಾ ತಗೊಳ್ಳುತ್ತಿರುವುದು ಯಾರು ಗೊತ್ತೆ?

ರಿಯಲ್ ಸ್ಟಾರ್ ಉಪೇಂದ್ರ



ಯಾವುದೇ ಒಬ್ಬ ಹೀರೋಗೆ ಆತನ ಮತ್ತೊಂದು ಸಿನಿಮಾವೇ ಕಾಂಪಿಟೇಷನ್ ನೀಡುತ್ತದೆ ಎಂದರೆ ಆತ ಸೂಪರ್ ಸ್ಟಾರ್ ಅನ್ನೋದು ಚಿತ್ರರಂಗದವರ ಅಭಿಪ್ರಾಯ.

ಈಗ ಕೊಬ್ರಿ ಮಂಜು ನಿರ್ಮಿಸಿರುವ 'ಗಾಡ್ ಫಾದರ್' ಮತ್ತು ಮುನಿರತ್ನ ನಿರ್ಮಾಣದ 'ಕಠಾರಿವೀರ' ಮತ್ತು 'ಕಲ್ಪನಾ' ಈ ಎಲ್ಲ ಚಿತ್ರಗಳಲ್ಲೂ ಉಪ್ಪಿಯೇ ನಾಯಕ. ಮೂರೂ ಚಿತ್ರಗಳಲ್ಲೂ ಉಪ್ಪಿಯದ್ದು ಒಂದಕ್ಕಿಂತ ಒಂದು ಡಿಫರೆಂಟ್ ಗೆಟಪ್ಪು; ಪಾತ್ರಗಳು.

ಕನ್ನಡ ಚಿತ್ರರಂಗದ 'ಸೈಲೆಂಟ್ ಕಿಲ್ಲರ್' ಎಂದೇ ಹೆಸರಾದ ಉಪ್ಪಿಯದ್ದು ಮಾಸ್ಟರ್ ಬ್ರೈನ್. ಚಾಟಿಯಿಲ್ಲದೇ ಬುಗುರಿಯಾಡಿಸುತ್ತಾ "ನನ್ನ ಸಿನಿಮಾಗೆ ನನ್ನ ಇನ್ನೊಂದು ಸಿನಿಮಾನೆ ಸ್ಪರ್ಧೆ ನೀಡುತ್ತಿದೆ" ಎಂದು ಬಿಂಬಿಸಿಕೊಳ್ಳುತ್ತಾ ತನ್ನ ವರ್ಚಸ್ಸು, ಕ್ರೇಜ್ ಹೆಚ್ಚಿಸಿಕೊಳ್ಳುವ ಉದ್ದೇಶ ಉಪ್ಪಿಯದ್ದು! ಹೀಗಾಗಿ ತನ್ನಿಬ್ಬರೂ ನಿರ್ಮಾಪಕರನ್ನು ಕದನಕ್ಕೆ ಬಿಟ್ಟು ತನ್ನ ಕೀರ್ತಿ ಪತಾಕೆಯನ್ನು ಹಾರಿಸಿಕೊಳ್ಳುತ್ತಿದ್ದಾರೆ ಉಪ್ಪಿ.




ನರಭಕ್ಷಕ ಹುಲಿ ಚಂದಪ್ಪ ಹರಿಜನ ಹೆಸರಲ್ಲಿ ನರಿಗಳ ಕಚ್ಚಾಟ

ಇದೊಂತರ ಚಿತ್ತಲೆ ಜಗತ್ತು!

ಕರ್ನಾಟಕದಲ್ಲಿ ಕ್ರೈಂಸ್ಟೋರಿಗಳು ಇವತ್ತಿಗೂ ಮಾರಾಟದ ಸರಕಾಗಿವೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ನಟ ನಿರ್ಮಾಪಕರಿಗೆ ಸಿನಿಮಾ ಆಗಿ, ಬರಹಗಾರರಿಗೆ ಪುಸ್ತಕದ ಸರಕಾಗಿ, ಟಿವಿ ಚಾನೆಲುಗಳಿಗೆ ಒಳ್ಳೇ ಟಿಆರ್‌ಪಿ ತಂದುಕೊಡಬಲ್ಲ ಪ್ರೋಗ್ರಾಂಗಳಾಗಿ ಕ್ರೈಂ ವಿಜೃಂಭಿಸುತ್ತಿದೆ. ಸಾಮಾನ್ಯವಾಗಿ ಒಂದು ಕೊಲೆಯೊ, ಅಪರಾಧವೋ ಸಂಭವಿಸಿದಾಗ ಆರೋಪಿಗಳು 'ಅದು ನಾವು ಮಾಡಿದ್ದಲ್ಲ' ಎನ್ನುವುದು ವಾಡಿಕೆ. ಆದರೆ ಇಲ್ಲಿ ಈಗ ಸಂಭಾವಿತರೆನಿಸಿಕೊಂಡವರೆಲ್ಲಾ 'ಆ ಕ್ರೈಮು ನಿಂದಲ್ಲ, ನಂದು' ಎಂದು ಸಾರ್ವಜನಿಕವಾಗಿ ಕಿತ್ತಾಡುತ್ತಿರುವುದು ಬಹಳ ಮೋಜಿನದಾಗಿ ಕಾಣುತ್ತಿಲ್ಲವೇ?

ಚಂದಪ್ಪ ಹರಿಜನನ ಬದುಕಿನ ಕತೆ ಎನ್ನುವುದೇನು ಕರೆಂಟು ಕಂಡುಹಿಡಿದಿದಂತದ್ದಲ್ಲ, ಮೊಬೈಲು, ಕಂಪ್ಯೂಟರ್ ರೂಪಿಸಿದ ವೈಜ್ಞಾನಿಕ ಸಂಶೋಧನೆಯೂ ಅಲ್ಲ..., ಯಾರೇ ಆದರೂ ಅದು ತನ್ನದೇ ಪೇಟೆಂಟ್ ಎಂಬಂತೆ ತರ್ಕ ಹೂಡಲು!

ಪತ್ರಕರ್ತ ರವಿ ಬೆಳಗೆರೆ 'ಭೀಮಾ ತೀರದಲ್ಲಿ' ಸಿನಿಮಾದವರ ವಿರುದ್ಧ ಜಗಳಕ್ಕಿಳಿಯುವ ಮೊದಲು ಇದನ್ನೊಮ್ಮೆ ಯೋಚಿಸಬಹುದಿತ್ತು, ಅದಕ್ಕೂ ಮೊದಲು ಆ ಸಿನಿಮಾವನ್ನೊಮ್ಮೆ ನೋಡಿಯಾದ ನಂತರ ಮಾತನಾಡಬಹುದಿತ್ತು.



ಈ ಸಿನಿಮಾ ಬೆಳಗೆರೆಯ ಪುಸ್ತಕವನ್ನೇ ಪೂರ್ತಿ ಆಧರಿಸಿರುವ ಸಿನಿಮಾ ಅಲ್ಲ ಎಂಬುದು ಖಚಿತ. ಅಷ್ಟೇ ಖಚಿತವಾದ ಇನ್ನೊಂದು ಸತ್ಯ ಏನೆಂದರೆ ನಿರ್ದೇಶಕ ಓಂ ಪ್ರಕಾಶ್‌ರಾವ್ 'ನಾನು ಬೆಳಗೆರೆಯ ಪುಸ್ತಕವನ್ನೇ ಓದಿಲ್ಲ' ಎಂದಿರುವುದು ಅಪ್ಪಟ ಸುಳ್ಳು. ಈಗ್ಗೆ ಸರಿಯಾಗಿ ಒಂದು ವರ್ಷದ ಹಿಂದೆಯೇ 'ಲಂಕೇಶ್'ನಲ್ಲಿ 'ಭೀಮಾ ತೀರಕ್ಕೆ ಯಾರು ಒಡೆಯರು?' ಎಂಬ ವರದಿಯೊಂದು ಸಿನಿಮಾ ಪುಟದಲ್ಲಿ ಪ್ರಕಟಗೊಂಡಿತ್ತು. ಆಗ ಓಂ ಪ್ರಕಾಶ್ ತಾನು ಬೆಳಗೆರೆಯ ಪುಸ್ತಕ ಓದಿರುವುದಾಗಿಯೂ ಆದರೆ ಸಿನಿಮಾ ಕತೆ ಬೇರೆ ರೀತಿ ಇರುತ್ತದೆಂತಲೂ ಹೇಳಿಕೊಂಡಿದ್ದರು. ಈಗ ಆ ಸಿನಿಮಾ ಪುಸ್ತಕದಲ್ಲಿರುವುದಕ್ಕಿಂತ ಬೇರೆ ರೀತಿ ಆಗಿದೆ ನಿಜ.

ಬೆಳಗೆರೆಗೆ ರಾಯಲ್ಟಿ ದುಡ್ಡು ಕೊಡಬೇಕಲ್ಲ ಎಂದು ಯೋಚಿಸಿ ಓಂ ಪ್ರಕಾಶ್ ಹೀಗೆ ಮಾಡಿರಲಿಕ್ಕೂ ಸಾಕು.

ಅದಿರಲಿ.

ಚಂದಪ್ಪ ಹರಿಜನನ ಫೋಟೊ ಯಾರ ಬಳಿಯೂ ಇರಲಿಲ್ಲ, ಅವನ ಚಲನವಲನಗಳು ಯಾರಿಗೂ ತಿಳಿಯುತ್ತಿರಲಿಲ್ಲ ಎಂಬುದನ್ನು ಬಿಟ್ಟರೆ ಉಳಿದಂತೆ ಅವನ ಬದುಕು, ಮಾಡಿದ ಕೊಲೆಗಳು ಅವನನ್ನು ಬಳಸಿಕೊಂಡವರ ಬಗ್ಗೆ ಜನರಿಗೆ ಗೊತ್ತೇ ಇತ್ತು. ಬೆಳಗೆರೆ ಒಂದು ಪುಸ್ತಕ ಬರೆದ ಮಾತ್ರಕ್ಕೆ ಆ ಇಡೀ ವಿದ್ಯಮಾನಗಳ ವಿವರಗಳು ಆತನ ಹಕ್ಕಾಗಿಬಿಡುವುದಿಲ್ಲ. ಆಗಿನ ಲಂಕೇಶ್ ಪತ್ರಿಕೆಯಲ್ಲೇ ಈ ಕುರಿತಂತೆ ಕೆಲವು ವರದಿಗಳು ಪ್ರಕಟವಾಗಿವೆ. ಇದೆಲ್ಲಕ್ಕಿಂತ ಮಿಗಿಲಾಗಿ ಯಾರೇ ಪತ್ರಕರ್ತರಿಗಿಂತ ಮೊದಲು ಒಂದು ಕ್ರೈಂ ಬಗ್ಗೆ, ಕ್ರಿಮಿನಲ್‌ಗಳ ಬಗ್ಗೆ ವರದಿ ಬರೆಯುವ ಜನ ಪೊಲೀಸರು. ಅವರ ಎಫ್‌ಐಆರ್‌ಗಳನ್ನು ಹಿಡಿದು ಹೊರಡುವ ಪತ್ರಕರ್ತರು ಇನ್ನು ನಾಲ್ಕಾರು ಮೂಲೆ ಶೋಧಿಸಿ ವಾಸ್ತವಾಂಶವೆಂಬ ಸ್ಕೆಲಿಟನ್‌ಗೆ ರಕ್ತಮಾಂಸವನ್ನು ತುಂಬಿ ಒಂದು ವರದಿಯನ್ನೊ, ಪುಸ್ತಕವನ್ನೋ ಮಾಡುತ್ತಾರೆ.





ಸಿನಿಮಾದವರೂ ಮಾಡುವುದು ಅದನ್ನೇ. ಈಗ 'ಭೀಮಾ ತೀರದಲ್ಲಿ' ಸಿನಿಮಾ ತಂಡ ನಡೆದುಕೊಂಡಿರುವುದು ಅದೇ ತರ ಇದೆ.

ಅವರು ಚಂದಪ್ಪ ಹರಿಜನನೆಂಬುವವನ ಜೀವನದ ಎಳೆ ಇಟ್ಟುಕೊಂಡು ಆದಕ್ಕೊಂದಿಷ್ಟು ರಕ್ತ ಮಾಂಸ ತುಂಬಿ, ಸಿನಿಮಾ ಪರಿಭಾಷೆಗೆ ಸಹಜವಾದ ಹಾಡು, ರೋಮ್ಯಾನ್ಸು ತುರುಕಿ, ಸೆಂಟಿಮೆಂಟಿನ ಸೆಂಟು ಹಾಕಿ, ಟ್ರಾಜಿಡಿಯ ಘಾಟು ತುಂಬಿಸಿ ಒಂದು ಮನರಂಜನಾ ಪ್ಯಾಡೆಕ್ಕು ತಯಾರಿಸಿದ್ದಾರೆ.

ಆದರೆ "ನನ್ನ ಒಂದು ಮಾತು ಕೇಳದೆ ಈ ಸಿನಿಮಾ ಮಾಡಿದ್ದಾರೆ" ಅಂತ ಬೆಳಗೆರೆ ಜಗಳ ಶುರುಮಾಡಿದ್ದು ನಿಜಕ್ಕೂ ಬಾಲಿಶವಾಗಿತ್ತು. ಹಾಗಾದರೆ ಬೆಳಗೆರೆಯ ಹೊಸ ಪುಸ್ತಕ 'ಹಿಮಾಗ್ನಿ'ಯಲ್ಲಿ ಮೋಹಿನೊ ಗಾಂಧಿ ಹೆಸರಿನ ಸೋನಿಯಾ ಗಾಂಧಿ ಪಾತ್ರ ಬರುತ್ತದಂತೆ. ಇದನ್ನು ಬರೆಯುವ ಮೊದಲು ಬೆಳಗೆರೆ ಸೋನಿಯಾಗೆ ಒಂದು ಮಾತು ಕೇಳಿ ಬರೆದರಾ? ಕವಿ ಸಮಯ ಎಂಬುದು ಬರಹಗಾರರಿಗಿರುವಂತೆಯೇ ಸಿನಿಮಾ ನಿರ್ದೇಶಕನಿಗೂ ಇರುತ್ತದಲ್ಲವೇ?

ಚಂದಪ್ಪ ಯಮಹಾ ಬೈಕಲ್ಲಿ ಓಡಾಡುತ್ತಿದ್ದನೆಂದು ಸಿನಿಮಾದಲ್ಲಿ ಕುದುರೆ ಯಾಕೆ ಹತ್ತಿಸಬಾರದು ಹೇಳಿ?

ಆದರೆ ಈ ಜಗಳ ಆತೀ ಬೇಗನೆ ವಿಕೃತ ರೂಪ ತಾಳಿದ್ದು ನಿಜಕ್ಕೂ ರೇಜಿಗೆ ಹುಟ್ಟಿಸುವಂತಿತ್ತು.

ಟಿವಿ ನೈನ್‌ನಲ್ಲಿ ಉಡಾಫೆಯ ಮಾತು

ಶನಿವಾರ ಟಿವಿನೈನ್‌ಗೆ ಜಗಳ ತೆಗೆಯುತ್ತಾ ಬಂದ ಬೆಳಗೆರೆ 'ಅವಿವೇಕಿಗಳು', 'ಅವಳು-ಇವಳು', 'ನಾನು ಬರೆಯೋಕೆ ಶುರುಮಾಡಿದಾಗ ನೀನಿನ್ನೂ ಚಡ್ಡಿನೂ ಹಾಕ್ತಿರಲಿಲ್ಲ' ಎಂದೆಲ್ಲ ಉಡಾಫೆಯ ಮಾತಾಡಿ ದುನಿಯಾ ವಿಜಿ ಕೈಲಿ ವಿನಾಕಾರಣ ಗೇಲಿಗೊಳಗಾಗಿದ್ದು ಬೇಡಿತ್ತು.

ಇದುವರೆಗೂ ಅವರಿವರನ್ನು ಗೇಲಿ ಮಾಡಿ ಬೈಯ್ದು ಗೊತ್ತಿದ್ದ ಬೆಳಗೆರೆಗೆ ಇದೇ ಮೊದಲ ಸಾರಿ ಟಿವಿಯೊಂದರ ಲೈವ್ ಪ್ರೋಗ್ರಾಂನಲ್ಲಿ ಸ್ವತಃ ತಾನೇ ಗೇಲಿಗೊಳಗಾಗುತ್ತಿದ್ದಂತೆಯೇ ಆತನ ಪ್ಲೇಟ್ ಬದಲಾಯಿತು. 'ಚಂದಪ್ಪನ ಕುಟುಂಬಕ್ಕೆ ಏನಾದರು ಮಾಡಿ' ಎನ್ನುವ ರವಿಯ ಹೊಸ ವಾದ ಶುರುವಾಯಿತು.

ಸಿನಿಮಾದವರು ಕೊಡಬಹುದಾದ ಹಣವನ್ನು ಸೊನ್ನ-ದೇವಣಗಾಂವ್ ಗ್ರಾಮಗಳ ನಡುವಿನ ಭೀಮಾ ಸೇತುವೆಯ ಮಧ್ಯೆ ದುನಿಯಾ ವಿಜಿ ಹಾಗೂ ಬೆಳಗೆರೆ ನಿಂತು ಎರಡೂ ತುದಿಗಳಲ್ಲಿ ಜನರನ್ನು ನಿಲ್ಲಿಸಿ ವಿತರಿಸುವ ಸಲಹೆಯೂ ಬಂತು! ಇದೊಂತರ ಯಾರದ್ದನ್ನೋ ಮತ್ಯಾರೋ ದಾನ ಮಾಡಿದಂತೆ ಆಯಿತಲ್ಲವೇ!

ಟಿವಿ ನೈನ್‌ನ ಚರ್ಚೆ ಮುಗಿಯುವ ಹೊತ್ತಿಗೆ ಬೆಳಗೆರೆ ವಿಮರ್ಶಾತೀತನಲ್ಲ ಎಂಬ ಹವಾ ಕ್ರಿಯೇಟ್ ಆಗಿಹೋಗಿತ್ತು.

ಸುವರ್ಣದಲ್ಲಿ ವಿಭಟ್ಟರ ಪ್ಯಾಕ್ಸಿವಾರ್

'ಭೀಮಾತೀರದಲ್ಲಿ' ಚಿತ್ರವಿವಾದದ ಮುಂದುವರೆದ ಎಪಿಸೋಡಿನಂತೆ ಸುವರ್ಣ ಚಾನೆಲ್‌ನಲ್ಲಿ ಶುರುವಾದ ಚರ್ಚೆ ಬಹಳ ಬೇಗನೆ ರವಿ ಬೆಳಗೆರೆಯ ವಿರುದ್ಧದ ವೈಯಕ್ತಿಕ ಸೇಡಿನ ದಾಳಿಯಾಗಿ ಬದಲಾಯಿತು.

ಬೆಳಗೆರೆಯಿಂದ ವಿನಾಕಾರಣ ತೇಜೋವಧೆಗೊಳಗಾದ ಅನೇಕರು ತಮ್ಮ ಸಿಟ್ಟನ್ನು ಕಾರಿಕೊಂಡರು. ಚರ್ಚೆಯ ಗುಣಮಟ್ಟ ನಾಗರಿಕವಾಗಿರಲಿಲ್ಲ. ಆತನ ಪತ್ನಿ ಮಕ್ಕಳನ್ನು ವಿನಾಕಾರಣ ಎಳೆತಂದು ಕೆಸರೆರಚುವ ಅನಿವಾರ್ಯತೆಯೂ ಇರಲಿಲ್ಲ. ಆದರೆ ಬೆಳಗೆರೆಯನ್ನು ಕೇಳಬೇಕಾಗಿದ್ದ ಒಂದು ಪ್ರಶ್ನೆಯನ್ನು ಯಾರೂ ಕೇಳಲಿಲ್ಲ. "ಚಂದಪ್ಪ ನನ್ನ ಆಫೀಸಲ್ಲೇ ಇದ್ದ, ನಾನವನಿಗೆ ಆಶ್ರಯ ಕೊಟ್ಟಿದೆ' ಎಂದು ಬೆಳಗೆರೆ ಹೇಳಿಕೊಂಡಾಗ "ಪೊಲೀಸರು ಹುಡುಕುತ್ತಿದ್ದ ಅಪರಾಧಿಗೆ ಆಶ್ರಯ ಕೊಡುವುದು ಅಪರಾಧ ಅಲ್ವಾ? ಎಂದು ಯಾರು ಕೇಳಲಿಲ್ಲ. ಎಂತದ್ದೇ ಶತ್ರುವಿನ ವಿರುದ್ಧ ಯುದ್ಧ ನಡೆಸುವಾಗಲೂ ಕೆಲವು ಮಿನಿಮಂ ನೀತಿಸಂಹಿತೆಗಳನ್ನು ಸ್ಪಷ್ಟ ಗಡಿರೇಖೆಗಳನ್ನು ಹಾಕಿಕೊಳ್ಳುವ ಬಗ್ಗೆ ವಿಶ್ವೇಶ್ವರ ಭಟ್ಟರು ನಿಗಾ ವಹಿಸಬೇಕಿತ್ತು. ಆದರೆ ಅಲ್ಲಿ ಹಾಗಾಗಲಿಲ್ಲ. ಕೊನೆಗೆ ಈ ಚರ್ಚೆಗಳಿಂದ ಯಾವ ಮೌಲ್ಯವೂ ಸ್ಥಾಪನೆಯಾಗಲಿಲ್ಲ.





ಹುಲಿ ಪಾಲು-ನರಿ ಪಾಲು

ಚಂದಪ್ಪ ಹರಿಜನ ಕಾನೂನಿನ ದೃಷ್ಟಿಯಲ್ಲಿ ಪಾತಕಿಯೇ ಆಗಿದ್ದ. ಅವನು ಅನೇಕ ಹತ್ಯೆಗಳಲ್ಲಿ ಭಾಗಿಯಾಗಿದ್ದುದು ನಿಜ. ಶುರುವಿನ ದಿನಗಳಲ್ಲಿ ಅವನು ಬಲಿಷ್ಠ ಭೂಮಾಲೀಕರ ಒಂದು ದಾಳವಾಗಿ ಬಳಕೆಯಾದ. ಒಂದು ಹಂತ ದಾಟಿದ ನಂತರ ಅಪರಾಧಿ ಚಟುವಟಿಕೆಗಳನ್ನು ಬಿಟ್ಟರೆ ಚಂದಪ್ಪನಿಗೆ ಬೇರೆ ಆಯ್ಕೆಗಳೂ ಇರದಂತಾಗಿತ್ತು.

ಸರಿಯೋ ತಪ್ಪೋ ಚಂದಪ್ಪ ಯಾರಿಗೂ ತಲೆಬಾಗದೆ 'ವ್ಯಾಘ್ರ'ನಂತೆಯೇ ಬದುಕಿದ್ದ ಸ್ವತಃ ವಾಸ್ತವದಲ್ಲಿ ಅವನೊಬ್ಬ ನರಭಕ್ಷಕ ಹುಲಿಯಾಗಿದ್ದ.

ಇಂಡಿ ಪ್ರದೇಶದ ಸಾಮಾನ್ಯ ಗ್ರಾಮೀಣ ದಲಿತ ಯುವಕನಾಗಿದ್ದ ಚಂದಪ್ಪ ಸಾಂದರ್ಭಿಕ ಘಟನೆಗಳ ಒತ್ತಡಕ್ಕೆ ಸಿಲುಕಿ ಪಾತಕಿಯಾದ. ನಂತರ ಅಲ್ಲಿನ ಫ್ಯೂಡಲ್ ಲಾರ್ಡ್‌ಗಳ ಸ್ವಪ್ರತಿಷ್ಠೆಯ ಕಾಳಗದಲ್ಲಿ ಚಂದಪ್ಪ ಒಬ್ಬ ಬಡಿದಾಡುವ ಭಂಟನಾಗಿ ಬಳಕೆಯಾದ. ಇದರಲ್ಲಿ ಇಂಡಿಯ ಶಾಸಕನಾಗಿದ್ದ ರವಿ ಪಾಟೀಲ, ಅಫಜಲ್‌ಪುರ ಮಾಲೀಕಯ್ಯ ಗುತ್ತೇದಾರೆಲ್ಲ ಇದ್ದಾರೆ. ಆ ವ್ಯವಸ್ಥೆಯೇ ಚಂದಪ್ಪನನ್ನು ಕೊನೆಗೆ 'ನರಭಕ್ಷಕ ಹುಲಿ'ಯಾಗಿಸಿತು.



ಆ ಚಂದಪ್ಪನೆಂಬ ಹುಲಿ ತನ್ನ ಶಿಕಾರಿ ಮುಗಿಸಿ ಕೊನೆಗೆ ತಾನೂ ಶಿಕಾರಿಗೊಳಗಾಗಿ ಜೀವ ತೆತ್ತಿದ. ಈಗ ಅವನ ಹೆಸರಿನಲ್ಲಿ ನರಿಗಳು ತಮ್ಮ ಪಾಲಿಗಾಗಿ ಕಚ್ಚಾಡುತ್ತಿವೆ.

ಕ್ರೈಂ ಎಂಬುದನ್ನು ಒಂದು ಮದುವೆ ಛತ್ರದ ಊಟ ಎಂದುಕೊಂಡರೆ ಅಲ್ಲಿ ರಾಜಾರೋಷವಾಗಿ ಪಂಕ್ತಿಯಲ್ಲಿ ಕುಳಿತು ಉಂಡು ಎದ್ದು ಹೋಗುವವರೂ ಇರುತ್ತಾರೆ, ಹೊರಗೆ ತೊಟ್ಟಿಯ ಹತ್ತಿರ ಎಂಜಲೆಲೆಗಾಗಿ ಕಚ್ಚಾಡುವ ದೃಶ್ಯಗಳೂ ಇರುತ್ತವೆ.

ಇರಲಿ ಬಿಡಿ.

• ಪಾರ್ವತೀಶ

'ಭೀಮಾತೀರದಲ್ಲಿ' ಮತ್ತು 'ಹಂತಕರು'



ಒಬ್ಬ ಫ್ಯೂಡಲ್ ಧಣಿ ಪತ್ರಪ್ಪ ಬೈರಗೊಂಡ

ದುನಿಯಾ ವಿಜಿಗೆ ನಟನೆಯಲ್ಲಿ ಫುಲ್‌ಮಾರ್ಕ್ಸ್ ನೀಡಬಹುದಾದ ಸಿನೆಮಾಗಳಲ್ಲಿ 'ಭೀಮಾ ತೀರದಲ್ಲಿ'ಯು ಒಂದು. ಈ ಸಿನೆಮಾದ ಶುರುವಿನಿಂದ ಇಂಟರ್‌ವೆಲ್‌ತನಕ ನಾವು ನಿಜಕ್ಕೂ ನೋಡುತ್ತಿರುವುದು ಕನ್ನಡ ಸಿನಿಮಾನಾ? ಎಂದು ಅನುಮಾನ ಬರುವಷ್ಟರಮಟ್ಟಿಗೆ ಚೆನ್ನಾಗಿದೆ. ಪಂಚಿಂಗ್ ಡೈಲಾಗ್‌ಗಳು ಹಾಗೂ ಕ್ಯಾಮರಾ ಕೆಲಸ ಅಷ್ಟು ಅದ್ಭುತವಾಗಿದೆ. ಟೈಟಲ್ ಕಾರ್ಡ್‌ನಲ್ಲಿ ಕ್ಯಾಮೆರಾಮೆನ್ ಅಣಜಿ ನಾಗರಾಜ್ ಎಂದೇ ತೋರಿಸಿದ್ದಾರಾದರೂ ಅದರ ಕ್ರೆಡಿಟ್ ಹೋಗಬೇಕಿರುವುದು ಅಸಲಿ ಕೆಲಸಗಾರ ವೀನಸ್ ಮೂರ್ತಿಗೆ.

ಆದರೆ ಇಂಟರ್‌ವೆಲ್ ನಂತರ ನಿರ್ದೇಶಕ ಓಂಪ್ರಕಾಶ್ ಬೇಕಾದಷ್ಟು ಎಡವಿದ್ದಾರೆ. ಕೋಟಿಗಟ್ಟಲೆ ಖರ್ಚಿನ ಸಿನಿಮಾಗೆ ಕೊಂಚ ಕಮರ್ಶಿಯಲ್ ಟಚ್ ಕೊಡದಿದ್ದರೆ ಗಿಟ್ಟಲ್ಲ ಅಂತಾ ಗಾಬರಿಯಾಯಿತೇನೋ, ಪ್ರಣೀತಾ ಎಂಬ ಬಿಳಿ ಜಿರಲೆ ಹೀರೋಯಿನ್‌ಳನ್ನು ಕತೆಯ ಮಧ್ಯೆ ನುಗ್ಗಿಸಿ ಇಡೀ ಸಿನಿಮಾವನ್ನೇ ಜಾಳುಜಾಳಾಗಿಸಿ ಬಿಟ್ಟಿದ್ದಾರೆ. 'ಭೀಮಾತೀರದಲ್ಲಿ' ಹೇಗೂ ಒಂದು ಸಿನಿಮಾ ಮಾತ್ರ ಆಗಿರುವುದರಿಂದ ಹಾಡು, ಬಾಲಿಶ ಲವ್ವು, ಕುದುರೆ ಸವಾರಿಗಳೂ ಇವೆ. ಆದರೆ ವಿಜಯ್‌ಯೊಂದಿಗೆ ನಟಿಸಿರುವ ಲೋಕ್‌ನಾಥ್, ದೊಡ್ಡಣ್ಣ, ಉಮಾಶ್ರೀ, ಶರತ್ ಲೋಹಿತಾಶ್ವ, ಸುಚೇಂದ್ರ ಪ್ರಸಾದ್‌ರ ಅಭಿನಯ ಬಹಳ ಕಾಲ ನೆನಪಿನಲ್ಲುಳಿಯುವಂತಾದ್ದು. ಒಟ್ಟಿಂದದಲ್ಲಿ 'ಭೀಮಾ' ಪೈಸಾ ವಸೂಲ್ ಸಿನಿಮಾ.

ಮತ್ತೊಂದೆಡೆ ಬೆಳಗೆರೆಯ 185 ಪುಟಗಳ 'ಭೀಮಾ ತೀರದ ಹಂತಕರು' ಒಂದು ವಿಭಿನ್ನ ಅನುಭವ ಕೊಡುವ ಪುಸ್ತಕ. ಆ ಕಾಲದಲ್ಲಿ ಮುಖ್ಯವಾಹಿನಿಯ ಜರ್ನಲಿಸ್ಟರು ನಿವೃತ್ತರ ಶೈಲಿಯಲ್ಲಿ ವರದಿಗಳನ್ನು ಬರೆಯುತ್ತಿದ್ದಾಗ ಅಪರಿಚಿತ ತಾಣಗಳಲ್ಲಿ ಓಡಾಡಿ Adventurist ಪತ್ರಕರ್ತನಾಗಿ ಹೆಸರು ಪಡೆದ ಬೆಳಗೆರೆ ಅನೇಕ ಹೊಸ ವಿಚಾರ ಹೇಳಿದ್ದು ಸುಳ್ಳಲ್ಲ.

ಈ ಪುಸ್ತಕವೂ ಅದರಲ್ಲೊಂದು. ಭೀಮಾ ನದಿ ತೀರದುದ್ದಕ್ಕೂ ಹರಡಿ ಬೇರು ಬಿಟ್ಟುಕೊಂಡಿರುವ ಫ್ಯೂಡಲ್ ದಣಿಗಳ ದರ್ಪ, ಅಟ್ಟಹಾಸ, ಹುಂಬ ಸಾಹಸಗಳ ಮೂಲಕ ನಡೆಸಿದ ರಕ್ತಪಾತವನ್ನು ಈ ಪುಸ್ತಕ ನಿರೂಪಿಸುತ್ತದೆ. ಕಳೆದ ಐವತ್ತು ವರ್ಷಗಳಲ್ಲಿ ಚಂದಪ್ಪನಂಥ ಅನೇಕರು ಅಲ್ಲಿ ಆಗಿ ಹೋಗಿದ್ದಾರೆ. ಅದರ ಪಾತ್ರಧಾರಿಗಳು, ಪ್ರೇಕ್ಷಕರು, ಪ್ರೇರಕರೂ ಈಗಲೂ ಬೇಕಾದಷ್ಟು ಜನ ಇದ್ದಾರೆ. ಇವನ್ನೆಲ್ಲಾ ಮೊದಲು ಬರೆದರೆಂಬ ಕಾರಣಕ್ಕೆ ಅಲ್ಲಿನ ಜನ-ಜೀವನ-ಪ್ರಾಣಹರಣಗಳ ಕತೆಗಳೆಲ್ಲಾ ಯಾರ ಆಸ್ತಿಯೂ ಆಗಿಬಿಡುವುದಿಲ್ಲ.

...ಂದಪ್ಪ ಹರಿಜನನ ...25 ಲಕ್ಷ ...ೂಪಾಯಿ ...ಾರು ತಿಂದರು?

...ಂದಪ್ಪ ಹರಿಜನ 9, ಮೇ 2000 ರಂದು ಪೊಲೀಸರ ಗುಂಡೇಟು ... ಸತ್ತ. ಇದು ನಡೆದದ್ದು ದೋತ್ರಿ ...ದಲ್ಲಿ. ದೋತ್ರಿ ಮಹಾರಾಷ್ಟ್ರದ ...ಾಪುರ ಜಿಲ್ಲೆಯ ಅಕ್ಕಲಕೋಟೆ ...ಿನಲ್ಲಿದೆ. ಇದೇ ದೋತ್ರಿಯಲ್ಲಿ ಚಂದಪ್ಪನ ...ರವ್ವ ಇದ್ದಳು. ಚಂದಪ್ಪ ಎನ್‌ಕೌಂಟರ್ ...ನವೇ ಅವನ ಜನ್ಮದಿನವೂ ಆಗಿತ್ತು. ... ಅವನು ಮಕ್ಕಳಿಗೆ ಒಂದಷ್ಟು ಬಟ್ಟೆ ... ಕೇಕ್ ತೆಗೆದುಕೊಂಡು ಅಲ್ಲಿಗೆ ...ಗಿದ್ದ. ಕೈಲಿ ಸ್ವಲ್ಪ ಹಣವನ್ನು ...ೊಂಡಿದ್ದ. ತನ್ನ ಅಂತ್ಯ ಅಲ್ಲೇ ಘಟಿಸುವ ...ಜೇ ಇರದಿದ್ದ ಚಂದಪ್ಪ ಪತ್ನಿ ಶಾರವ್ವಳ ... "ಇನ್ನು ಸ್ವಲ್ಪ ದಿನ ತಾಳು, ಇಲ್ಲಿಂದ ...ಹೋಗಿಬಿಡೋಣ. ನನ್ನತ್ರ ಹನ್ನೊಂದು ...ೂಕ್ಕ ಐತಿ, ಬೆಂಗಳೂರಾಗೆ ನಂಬಿಕಸ್ಥರ ...ಾಡಿಸೀನಿ. ನಾ ಮಳ್ಳಿ ಹೋಗಿ ರೊಕ್ಕ ...ಮ್ಯಾಗೆ ಯಾರ ಕಣ್ಣಿಗೂ ಬೀಳದಾಂಗೆ ... ಹೋಗಿಬಿಡೋಣ" ಎಂದಿದ್ದನಂತೆ.



...ದರೆ ಚಂದಪ್ಪನಿಗೆ ತನ್ನ ಹಣ ವಾಪಸ್ ...ುವ ಅವಕಾಶ ಸಿಗಲೇ ಇಲ್ಲ. ಕೊನೆಗದು ಹೆಂಡತಿ ಶಾರವ್ವಗೂ ...ಿಲ್ಲ.

...ಿಷ್ಟು ಹಣ ಯಾರ ಪಾಲಾಯಿತೆಂಬ ಪ್ರಶ್ನೆ ಇವತ್ತಿಗೂ ಬಗೆಹರಿದಿಲ್ಲ. ...ಹಣ ಚಂದಪ್ಪನ ಕೈಗೆ ಹೇಗೆ ಬಂತೆಂಬ ಬಗ್ಗೆಯೂ ಪುರಾವೆಗಳಿವೆ. ...ಂದಪ್ಪ 1995ರ ನವೆಂಬರ್ 11 ರಂದು ಬಿಜಾಪುರ ಜೈಲಿನಿಂದ ...ಕೊಂಡು ಹೋದನಂತರ ಮತ್ತೆಂದೂ ಪೊಲೀಸರ ಕೈಗೆ ಸಿಗಲಿಲ್ಲ. ...ನಂತರ ಗುಲ್ಬರ್ಗಾ ಜೈಲಿನಲ್ಲಿದ್ದ ಕೇಶಪ್ಪ ತಾವರಖೇಡ, ಶಿವಾಜಿ ...ಗಿ ಮತ್ತಿತರರನ್ನು ಚಂದಪ್ಪ ಎಸ್ಕೇಪ್ ಮಾಡಿಸಿದ್ದ. ಇವರೆಲ್ಲ ...ೊಂದು ದಿಕ್ಕಿಗೆ ಪರಾರಿಯಾದರಾದರೂ ಕೇಶಪ್ಪ ಪುನಃ ಸೆರೆಸಿಕ್ಕ. ...ಲ್ಲಿ ಏಕಾಂಗಿಯಾಗಿ ಹತಾಶನಾಗಿದ್ದ ಚಂದಪ್ಪ ಒಂದಷ್ಟು ದುಡ್ಡು ...ಕೊಂಡು ಪತ್ನಿ ಶಾರವ್ವ ಹಾಗೂ ಮಕ್ಕಳೊಂದಿಗೆ ಕರ್ನಾಟಕ ... ದೂರ ಹೋಗಲು ಸಿದ್ಧನಾಗುತ್ತಿದ್ದ.

ಆಗ ಹಣ ಮಾಡಲು ಅವನು ಹುಡುಕಿಕೊಂಡಿದ್ದೇ ಕಿಡ್‌ನ್ಯಾಪ್ ದಂಧೆ.

ಗುಲ್ಬರ್ಗಾದ ಷಾಹಜಿರಾವ್ ಚಂದಪ್ಪನ ಕಿಡ್‌ನ್ಯಾಪ್ ದಂಧೆಗೆ ಮೊದಲು ಫೀಜು ಕಟ್ಟಿ ಬಲಿಪಶುವಾದ.

ಅದು ನಡೆದದ್ದು ಹೀಗೆ.

ಗುಲ್ಬರ್ಗಾದ ಅಡತ್ ಮಾರ್ಕೆಟ್‌ನಲ್ಲಿದ್ದ ಷಾಹಜಿರಾವ್ ಚಿತ್ತಾಪುರದ ವೃದ್ಧೆಯೊಬ್ಬಳಿಗೆ ಕೊಂಚ ಸಾಲ ಕೊಟ್ಟು ಆ ಸಾಲಕ್ಕೆ ಆಕೆಯ ಐವತ್ತೆಕರೆ ಜಮೀನು ಅಡಮಾನವಾಗಿ ಬರೆಸಿಕೊಂಡಿದ್ದ. ಆ ಅಜ್ಜಿ ಸಕಾಲದಲ್ಲಿ ಸಾಲ ಹಿಂತಿರುಗಿಸಲಿಲ್ಲ. ಷಾಹಜಿರಾವ್ ಆತುರಕ್ಕೆ ಬಿದ್ದು ಆಕೆಯ ಜಮೀನನ್ನು ಕಬ್ಜಾ ಮಾಡಿಕೊಂಡುಬಿಟ್ಟ. ಈ ಡೀಲ್ ಚಂದಪ್ಪನ ಹತ್ತಿರ ಬಂತು. ಚಂದಪ್ಪ ಷಾಹಜಿರಾವ್‌ನನ್ನು ಎತ್ತಾಕಿಕೊಂಡು ಹೋಗಿ ಬೆದರಿಸಿ ಎಂಟು ಲಕ್ಷ ಕಿತ್ತ. ಮುದುಕಿಗೆ ಎರಡು ಲಕ್ಷ ಕೊಟ್ಟು ತಾನು ಆರು ಲಕ್ಷ ಇಟ್ಟುಕೊಂಡಿದ್ದ.

ನಂತರ ಪಾಲಾದಿ ಎಂಬುವವನ ಕಿಡ್ನಾಪ್ ಆಯಿತು.

ಫ್ಯಾಕ್ಟ್ ರಸಗೊಬ್ಬರ ಮಾರಾಟದ ಡೀಲ್ ಒಂದರಲ್ಲಿ ಕಂಪೆನಿಯ ಡಿವಿಜನಲ್ ಮ್ಯಾನೇಜರ್ ಆಗಿದ್ದ ಗಿರಿ ಎಂಬಾತ ಗೊಬ್ಬರದ ರೇಟ್ ಒಂದು ದಿನ ದಿಢೀರನೆ ಮುನ್ನೂರು ರೂಪಾಯಿ ಏರಿಕೆಯಾದಾಗ ಹಿಂದಿನ ದಿನಾಂಕಗಳನ್ನು ನಮೂದಿಸಿ ಪಾಲಾದಿಗೆ ಗೊಬ್ಬರ ಮಾರಿದಂತೆ ದಾಖಲೆ ಸೃಷ್ಟಿಸಿದ. ಈ ಡೀಲ್‌ನಲ್ಲಿ ಪಾಲಾದಿಗೆ 20 ಲಕ್ಷ ರೂಪಾಯಿ ಲಾಭ ಹತ್ತಿತು. ಆದರೆ ಅವನು ಗಿರಿಗೆ ನಯಾಪೈಸೆ ಕೊಡದೆ ಸತಾಯಿಸುತ್ತಿದ್ದ. ಈ ಮಧ್ಯೆ ಗೊಬ್ಬರ ಕಂಪೆನಿಯವರಿಗೆ ಅನುಮಾನ ಬಂದು ತಕ್ಷಣ ಹಣ ಕಟ್ಟದಿದ್ದರೆ ಪೊಲೀಸರಿಗೆ ಕಂಪ್ಲೆಂಟ್ ನೀಡುವುದಾಗಿ ಗಿರಿಗೆ ಧಮಕಿ ಕೊಟ್ಟರು. ಆಗ ಗಿರಿ ಹೋಗಿ ಚಂದಪ್ಪನಿಗೆ ಹಣ ವಸೂಲಿಯ ಡೀಲ್ ಕೊಟ್ಟಿದ್ದ. ಚಂದಪ್ಪ ಪಾಲಾದಿಯನ್ನು ಕಿಡ್‌ನ್ಯಾಪ್ ಮಾಡಿ ಹಣ ವಸೂಲಿ ಮಾಡಿಕೊಟ್ಟ. ಈ ಡೀಲ್‌ನಲ್ಲಿ ಚಂದಪ್ಪನಿಗೆ ಐದೂವರೆ ಲಕ್ಷ ಬಂತೆಂದು ಹೇಳಲಾಗಿದೆ. ಅಂದರೆ ಈ ಎರಡೂ ಕಿಡ್ ನ್ಯಾಪ್‌ಗಳಿಂದಲೇ ಚಂದಪ್ಪನ ಕೈಗೆ ಹನ್ನೊಂದೂವರೆ ಲಕ್ಷ ರೂಪಾಯಿ ಸೇರಿತ್ತು. ಇದಾದ ನಂತರ ಚಂದಪ್ಪ ಕೆಲದಿನ ಯಾರ ಕಣ್ಣಿಗೂ ಬೀಳಲಿಲ್ಲ.

2000 ಮೇ, 9 ರಂದು ಸಾಯುವ ಮುನ್ನ ತನ್ನ ಹೆಂಡತಿ ಶಾರವ್ವನಿಗೆ 'ನಾನು ಬೆಂಗಳೂರಾಗ ಅದೀನಿ, ನಾನೀರು ಜಾಗಕ್ಕ ಯಾರು ಬರಂಗಿಲ್ಲ. ಪೊಲೀಸರಿಗೂ ಅನುಮಾನ ಬರಂಗಿಲ್ಲ. ರೊಕ್ಕನೂ ಅಲ್ಲೇ ಐತಿ' ಅಂದಿದ್ದನೆಂದು ಹೇಳಲಾಗುತ್ತಿದೆ. ಚಂದಪ್ಪ ಬೆಂಗಳೂರಿನಿಂದ ಹೊರಡುವಾಗ ಕೈಲಿ 25 ಸಾವಿರ ಇಟ್ಟುಕೊಂಡಿದ್ದ ಅಷ್ಟೆ. ಪೊಲೀಸರಿಗೆ ಬೇಕಾಗಿದ್ದ ಚಂದಪ್ಪ ಬೆಂಗಳೂರಿನಲ್ಲಿ ಎಲ್ಲಿದ್ದ? ಯಾಕಿದ್ದ? ಅವನ ಹಣ ಏನಾಯಿತೆಂಬುದು ಕೊನೆಗೂ ಹೊರಬರಲಿಲ್ಲ.

...ೀರೆಯುವರ ಜಗಳ ...ವು ಆಡಬಾರದು ವಿಜಿ!

...ಾಯಕನಟ ದುನಿಯಾ ವಿಜಿ ಬಗ್ಗೆ ಈ ಮಾತು ಹೇಳಬೇಕಿದೆ.

...ಭೀಮಾ ತೀರದಲ್ಲಿ' ಸಿನಿಮಾದ ಜಗಳ ಶುರುವಾದ ತಕ್ಷಣ ಟಿವಿ9ರಲ್ಲಿ ಕಾಣಿಸಿಕೊಂಡ ...ದುನಿಯಾ ವಿಜಯ್. ಅದಾದ ನಂತರ ಸುವರ್ಣ ನ್ಯೂಸ್ ಚಾನಲ್‌ನಲ್ಲಿ ಮೇಲಿಂದ ಮೇಲೆ ... ದಿನ ಕಾಣಿಸಿಕೊಂಡರು. ಅವತ್ತು ಅಲ್ಲಿ ನಡೆದ ಬೈಗುಳಗಳೆಂಬ ಚರ್ಚೆಯು ಸುವರ್ಣದಲ್ಲಿ ... ಬಾರಿ ಟೆಲಿಕಾಸ್ಟ್ ಆಯಿತು.

ಮೊದಲಿಗೆ ಟಿವಿನೈನ್‌ನಲ್ಲಿ ಜಗಳ ಶುರುವಾದಾಗ ಪತ್ರಕರ್ತ ರವಿ ಬೆಳಗೆರೆ ಹೇಳಬೇಕೆನಿಸಿದ ...ಷಣೆಗಳನ್ನು **arrogant** ಆಗಿ ಮಂಡಿಸಿದ್ದು ವಿಜಿಯನ್ನು ಕೆರಳಿಸಿತ್ತು. ಮುಖ್ಯವಾಗಿ ...ರೆ ಮಾತಿನಲ್ಲಿ ಸಂಯಮವಿರಲಿಲ್ಲ.

...ನಿರ್ಮಾಪಕ ಅಣಜಿ ನಾಗರಾಜ್ ಒಬ್ಬ ಅವಿವೇಕಿ, ನಿರ್ದೇಶಕ ಓಂಪ್ರಕಾಶ್‌ರಾವ್ ಇನ್ನೊಬ್ಬ ...ವೇಕಿ' ಅಂತ ಒಬ್ಬರ ಬಗ್ಗೆ ಅದೂ ಟಿವಿಯ ಲೈವ್ ಪ್ರೋಗ್ರಾಂನಲ್ಲಿ ವಿವೇಕಿಗಳಾದವರು ...ಕೂಡದಿತ್ತು. ಆದರೆ ಬೆಳಗೆರೆ ಅದನ್ನು ನಿರ್ಲಕ್ಷಿಸಿ ಆಡಿದ ಮಾತು ವಿಜಿ ತಕ್ಷಣ ತಿರುಗೇಟು ...ಲು ಪ್ರಚೋದಿಸಿತ್ತು. ಅದೇರೀತಿ ರವಿ "ನಾನು ಬರೆಯಲು ಶುರುಮಾಡಿದಾಗ ನೀವಿನ್ನೂ ...ಡೂ ಹಾಕಿಕೊಳ್ಳುತ್ತಿರಲಿಲ್ಲ" ಅಂದಾಗ ವಿಜಿ ಸಹಾರಣವಾಗಿಯೇ "ಹಾಗಾದ್ರೆ ನೀವು ಹುಟ್ತಾನೆ ...ಶ್ ಹಾಕ್ಕೊಂಡು ಹುಟ್ಟಿದ್ರಾ" ಅಂದಿದ್ದು ಜನರಿಗೆ ಒಳ್ಳೇ ಮನರಂಜನೆ ನೀಡಿದ್ದು ಸುಳ್ಳಲ್ಲ.

...ಆದರೆ ಅಲ್ಲಿಂದಾಚೆಗೆ ಸುವರ್ಣದಲ್ಲಿ ನಡೆದದ್ದು ಘನತೆಯಿಂದ ಕೂಡಿರಲಿಲ್ಲ. ಸುವರ್ಣ ... ಮುಖ್ಯಸ್ಥ ವಿಶ್ವೇಶ್ವರ ಭಟ್ಟರಿಗೂ ಬೆಳಗೆರೆಗೂ ಈಗೊಂದು ತಾತ್ಕಾಲಿಕ ಅಘೋಷಿತ ...ದ್ಧ ನಡೆಯುತ್ತಿದೆಯಲ್ಲ, ಇವರಿಬ್ಬರ ಜಗಳದಲ್ಲಿ ದುನಿಯಾ ವಿಜಿ ಒಂದು ದಾಳವಾಗಿ ...ಯಾಗುತ್ತಿದ್ದದು ನೋಡುಗರಿಗೂ ಅರ್ಥವಾಗುತ್ತಿತ್ತು. ಈ ವಿಜಿ ತಮ್ಮ ಸಿನಿಮಾ ಪರ ...ವಾದಿ, ಹೇಳಬೇಕಾದ್ದನ್ನು ಹೇಳಿ ಎದ್ದು ಹೋಗಿದ್ದರೆ ಸಾಕಾಗುತ್ತಿತ್ತು. ಅದು ಬಿಟ್ಟು ...ಬ್ಬರ ಜಗಳವನ್ನು ತಾನು ಪ್ರತಿನಿಧಿಸುವಂತೆ ಬೆಳಗೆರೆ ವಿರುದ್ಧ ಜನ ದಂಗೆ ಏಳುವಂತೆ ಕರೆ ...ವುದು ಬೇಕಿರಲಿಲ್ಲ. ಏಕೆಂದರೆ ರವಿ ಅಷ್ಟರಲ್ಲಿ ಸಾಕಷ್ಟು ಎಕ್ಸ್‌ಪೋಸ್ ಆಗಿಯಾಗಿತ್ತು. ...ಷ್ಟೇ ಅಲ್ಲದೆ ಅವತ್ತು ವಿಜಿ ಜೊತೆ ಇದ್ದವರು ಬೆಳಗೆರೆ ವಿರುದ್ಧ 'ಅ ನನ್ಮಗ', 'ಸೂಳೇಮಗ' ...ತ್ಯಾದಿ ಕೆಟ್ಟ ಬೈಗುಳಗಳನ್ನೆಲ್ಲಾ ವಿವೇಚನೆ ಮರೆತು ಪ್ರಯೋಗಿಸಿದ್ದರು. ವಿಜಿ ಅದನ್ನು ... ಎತ್ತಲಿಲ್ಲ. ಆದರೆ ಸಿನಿಮಾದವರ ಬಗ್ಗೆ ರವಿ ಬೆಳಗೆರೆ 'ಅವಳು, ಇವಳು, ಯಾವಳೋ' ...ದು ಕೆಟ್ಟದಾಗಿ ಹೇಳಿದಾಗ ಇದೇ ವಿಜಿ ಅದು ಸರಿಯಲ್ಲ ಎಂದಿದ್ದೂ ಉಂಟಲ್ಲವೆ?

... ಸುಳಿಗೆ ... ...

...ಳು ... ಜಗಳವನ್ನು ಮಾತ್ರ ಆಡು ಮಾರಾಯ, ಬೀರೆಯುವರ ಜಗಳವನ್ನು ನೀನು ... ಆಡಬ್ಯಾಡ'





ಮೆಗಾಜೀಲ್ ತನಿಖೆ ಎತ್ತ ಸಾಗಿದೆ ಉಮೇಶ್?

ಮೆಗಾಝೀಲ್‌ನ ಹೈಟೆಕ್ ಗೋಲ್‌ಮಾಲ್ ದಂಧೆಯ ಬಗ್ಗೆ ಹೊಸಹೊಸ ವಿಷಯಗಳು ಬೆಳಕಿಗೆ ಬರುತ್ತಿವೆ. ಇದೇ ಮೆಗಾಜೀಲ್ ಕಂಪನಿ ಕಚೇರಿಯ ಎದುರಿನಲ್ಲೇ ಇರುವ ದೊಡ್ಡ ಕಟ್ಟಡವೊಂದನ್ನು ಶ್ರವಣ್ ಶರ್ಮಾ ಬಾಡಿಗೆಗೆ ಪಡೆದುಕೊಂಡಿದ್ದಾನೆ. ಆ ಕಟ್ಟಡದ ಇಂಟೀರಿಯರ್ ಡೆಕೋರೇಷನ್‌ಗಾಗಿ ಬರೋಬ್ಬರಿ 40 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದ್ದನೆಂಬ ಸುದ್ದಿಯಿದೆ. ಹೇಗೂ ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ ತಾನೇ? ಆದರೆ ಬಹುಮುಖ್ಯ ಪ್ರಶ್ನೆಯೆಂದರೆ ಈ ಹೊಸ ಕಟ್ಟಡದಲ್ಲಿ ಮತ್ತೆ ಯಾವ ರೀತಿಯ ದಂಧೆ ಶುರು ಮಾಡುವವರಿದ್ದರು? ಅದರಲ್ಲಿ ಯಾರ್‍ಯಾರು ಪಾಲುದಾರರಾಗಿದ್ದರು ಎಂಬುದೆಲ್ಲಾ ತನಿಖೆಯಿಂದ ಹೊರಬರಬೇಕಷ್ಟೆ.

ಇವರ ಮೋಸದ ಜಾಲಕ್ಕೆ ಸ್ವತಃ ಪೊಲೀಸರೇ ಬಲಿಯಾಗಿದ್ದಾರೆಂದರೆ ಇನ್ನೂ ಸಾಮಾನ್ಯರ ಪಾಡೇನು? ಇದೇ ಜಯನಗರದ ಠಾಣೆಯಲ್ಲಿರುವ ಕಾನ್‌ಸ್ಟೇಬಲ್‌ಗಳು ಈ ಬ್ಲೇಡ್ ಕಂಪನಿಯನ್ನು ನಂಬಿ ಹಣ ಹೂಡಿದ್ದಾರಂತೆ. ರಾಮನಗರದ ಕಾನ್‌ಸ್ಟೇಬಲ್ ಒಬ್ಬರು ತಮ್ಮ ಬಂಧುಮಿತ್ರರಿಂದ ಹಣ ಹಾಕಿಸಿ ಈಗ ಬಾಯಿಬಾಯಿ ಬಿಡುತ್ತಿದ್ದಾರೆ. ಇವರದು ಒಂದು ರೀತಿಯಾದರೆ ಅದೆಷ್ಟೋ ಜನ ಗ್ರಾಜುಯೇಟ್‌ಗಳು ಕನಿಷ್ಠ ಪಕ್ಷ ರಶೀದಿಯನ್ನೂ ಪಡೆಯದೆ ಕೇವಲ ಬಾಯಿಮಾತಿನ ಭರವಸೆಯನ್ನೇ ನಂಬಿ ಲಕ್ಷಾಂತರ ಹಣ ಕೊಟ್ಟಿದ್ದಾರೆಂದರೆ ಇವರಿಗೆ ತಿರುಪತಿ ತಿಮ್ಮಪ್ಪನೇ ಗತಿ.

ಅದೆಲ್ಲಾ ಒಂದುಕಡೆ ಇರಲಿ. ಇಷ್ಟಕ್ಕೂ ತನಿಖೆ ಯಾವ ಹಂತಕ್ಕೆ ತಲುಪಿದೆ ಎಂಬುದೂ ನಿಗೂಢವಾಗಿಯೇ ಉಳಿದಿದೆ. ಫ್ರಾಡ್ ಶ್ರವಣ್ ಶರ್ಮಾ ಏನೋ ಪೊಲೀಸ್ ಕಸ್ಟಡಿಯಲ್ಲಿದ್ದಾನೆ ಸರಿ, ಮತ್ತೊಬ್ಬ ಡೈರೆಕ್ಟರ್ ಆಗಿದ್ದ ಆತನ ಮಗ ಮತ್ತು ಆತನ ಹೆಂಡತಿಯನ್ನೂ ಬಂಧಿಸಿದ್ದಾರೆಂದು ಸುದ್ದಿ ಬಂದಿದೆ. ಇದೆಲ್ಲಾ ಸರಿ, ಆದರೆ ಇತರ ಕೆಲವು ಖತರ್‌ನಾಕ್ ಡೈರೆಕ್ಟರ್‌ಗಳು ಮತ್ತು ಈ ಮೋಸದ ಜಾಲದ ಕಿಂಗ್‌ಪಿನ್‌ಗಳಾಗಿದ್ದ ಬೆಂಗಳೂರಿನ ಭಾರತಿ, ಆಕೆಯ ತಮ್ಮ ಬಾಬು, ಎಂ.ಬಿ.ದೀಪು, ಮೈಸೂರಿನ ಚಂದ್ರು ಮತ್ತು ನೆಲಮಂಗಲದ ಚಂದ್ರಶೇಖರ್ ಮುಂತಾದ ಖದೀಮರು ಕಾನೂನಿನ ಕಣ್ಣಿಗೆ ಮಣ್ಣೆರಚಿ ಹೇಗೆ ತಪ್ಪಿಸಿಕೊಳ್ಳಬೇಕೆಂಬ ಹವಣಿಕೆಯಲ್ಲಿದ್ದಾರೆ. ಆದರೆ ಪೊಲೀಸರು ಇದುವರೆಗೂ ಅವರ ಗೋಜಿಗೂ ಹೋಗಿಲ್ಲವೆಂದು ಸಂತ್ರಸ್ಥರು ಆಕ್ರೋಶದಿಂದ ಪ್ರಶ್ನಿಸುತ್ತಿದ್ದಾರೆ.


ಉದಾಹರಣೆಗೆ ಹಲವಾರು ಫ್ರಾಡ್ ಕಂಪನಿಗಳಲ್ಲಿ ಸಾವಿರಾರು ಜನರಿಗೆ ಟೋಪಿ ಹಾಕಿರುವ ಐನಾತಿ ಲೇಡಿ ಭಾರತಿಯ ಉದಾಹರಣೆಯನ್ನೇ ತೆಗೆದುಕೊಳ್ಳಿ. ಮೆಗಾಜೀಲ್‌ನಿಂದ ನನಗೆ 3 ಕೋಟಿ ಕಮೀಷನ್ ಬಂದಿದೆ ಎಂದು ಬಂದವರಿಗೆಲ್ಲಾ ಬ್ಯಾಂಕ್ ಪಾಸ್‌ಬುಕ್ ತೋರಿಸಿ, ಅಮಾಯಕರಿಂದ ಕೋಟಿಗಟ್ಟಲೆ ಹಣ ಕಲೆಕ್ಷನ್ ಮಾಡಿರುವ ಈಕೆ ಐಷಾರಾಮಿ ಜೀವನ ನಡೆಸುತ್ತಿದ್ದಾಳೆ. ತನಿಖೆಗೆ ಉಪಯೋಗವಾಗಬಹುದೆಂಬ ಉದ್ದೇಶದಿಂದ ಕೆಲವು ದೋಖಾ ಮಂದಿಯ ವಿಳಾಸವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಇದನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಅಗತ್ಯವೇನಿದೆ? ನೇರವಾಗಿ ಪೊಲೀಸರನ್ನೇ ಸಂಪರ್ಕಿಸಿ ಈ ಮಾಹಿತಿ ನೀಡಬಹುದಲ್ಲವೇ ಎಂದು ನಿಮಗನಿಸಬಹುದು. ಅದೇನೋ ನಿಜ, ಆದರೆ ಪೊಲೀಸರಿಗೆ ಆ ಬಗ್ಗೆ ಆಸಕ್ತಿಯಿರಬೇಕಲ್ಲವೆ? ಕೆಲ ಫಿರ್ಯಾದುದಾರರು ಈ ಖದೀಮರ ಮನೆ ತೋರಿಸುತ್ತೇವೆಂದು ಖುದ್ದಾಗಿ ಹೇಳಿದರೂ ಪೊಲೀಸರು ಅದನ್ನು ಕಿವಿಯ ಮೇಲೂ ಹಾಕಿಕೊಳ್ಳುತ್ತಿಲ್ಲವೆಂದರೆ ಇದಕ್ಕೇನು ಹೇಳುವುದು? ಈ ಕೇಸನ್ನು ಸಿಸಿಬಿಯವರಿಗೆ ವಹಿಸಲಾಗಿದೆ, ಹಾಗೆ ಹೀಗೆ ಅಂತ ಕಾರಣಗಳನ್ನು ನೀಡಿ ತಮ್ಮ ಅನಾಸಕ್ತಿಯನ್ನು ತೋರ್ಪಡಿಸಿದ್ದಾರೆ. ಆದ್ದರಿಂದ ತನಿಖೆಗೆ ಉಪಯೋಗವಾಗಲಿ ಎಂಬ ದೃಷ್ಟಿಯಿಂದ ಇಲ್ಲಿ ಕೆಲವು ವಿಳಾಸಗಳನ್ನು ನೀಡುತ್ತಿದ್ದೇವೆ. ಸಂಬಂಧಪಟ್ಟವರು ಸೂಕ್ತ ಕ್ರಮ ತೆಗೆದುಕೊಳ್ಳಲಿ ಎಂಬುದು ನಮ್ಮ ಆಶಯ.

1) ಭಾರತಿ, ಗಂಡನ ಹೆಸರು ಶಿವಣ್ಣ, ಪೂರ್ಣ ವಿಳಾಸ : ನಂ.1120, ಕನಸಿನ ನಿಲಯ, ಜೆ.ಎಸ್‌ಎಸ್. ಸ್ಕೂಲ್ ಹಿಂಭಾಗ, ಕೋಣನಕುಂಟೆ, ಬೆಂಗಳೂರು-62.
2) ಎಂ.ಬಿ.ದೀಪು, ಮಹದೇವಪ್ಪ ಬಿಲ್ಡಿಂಗ್, ಗಾಣಿಗರ ಪಾಳ್ಯ, ತಲಘಟ್ಟಪುರ, ಬೆಂಗಳೂರು-62.
   ಮತ್ತೊಂದು ವಿಳಾಸಃ ನಂ.88/1, ಕಾಲಭೈರವೇಶ್ವರ ನಿಲಯ, ವಸಂತಪುರ ಮುಖ್ಯ ರಸ್ತೆ, ಲಕ್ಷ್ಮಿ ವಲ್ಲಭ ಕಲ್ಯಾಣ ಮಂಟಪದ ಎದುರು, ವಸಂತಪುರ, ಬೆಂಗಳೂರು-78.
3) ಚಂದ್ರಶೇಖರ್ ಅಲಿಯಾಸ್ ಚಂದ್ರು, ಈತ ಮೂಲತಃ ಮೈಸೂರು ಪಕ್ಕದ ಹಳ್ಳಿಯವನು, ಈಗ ಮೈಸೂರು ನಗರದ ಕುವೆಂಪು ನಗರದಲ್ಲಿ ವಾಸವಾಗಿದ್ದಾನೆ.

ನಮ್ಮ ಪತ್ರಿಕೆ ಈ ಬಗ್ಗೆ ತನಿಖೆ ಮುಂದುವರೆಸಿದ್ದು ಮುಂದಿನ ದಿನಗಳಲ್ಲಿ ಮತ್ತಷ್ಟು ವಿಳಾಸಗಳು ಹಾಗೂ ಮತ್ತಿತರ ಮಾಹಿತಿಗಳನ್ನು ಪತ್ತೆಮಾಡಲಾಗುವುದು.

ಮತ್ತೊಂದು ಕಡೆ, ದೂರು ನೀಡಲು ಹೋದವರಿಗೆ ಪೊಲೀಸರು ಸರಿಯಾಗಿ ಸ್ಪಂದಿಸುತ್ತಿಲ್ಲವೆಂಬ ದೂರು ಈಗಲೂ ಕೇಳಿಬರುತ್ತಿದೆ. ಕೆಲವು ಫಿರ್ಯಾದಿಗಳಿಗೆ ಎಫ್‌ಐಆರ್ ಪ್ರತಿ ನೀಡದೇ ಸತಾಯಿಸುತ್ತಿದ್ದಾರೆಂದೂ ಅಮಾಯಕರು ಅಲವತ್ತುಕೊಂಡಿದ್ದಾರೆ. ಹೇಗೂ ಇದೇ ಏಪ್ರಿಲ್ 13 ರಂದು ಈ ದೋಖಾ ಶರ್ಮಾನನ್ನು ಕೋರ್ಟ್‌ಗೆ ಹಾಜರುಪಡಿಸಬೇಕಿದೆ. ಆತನ ದೋಖಾ ಗ್ಯಾಂಗ್ ಮತ್ತು ವಕೀಲರು ಜಾಮೀನು ಸಿಗುವ ನಿರೀಕ್ಷೆಯಲ್ಲಿದ್ದಾರೆ. ಪೊಲೀಸ್ ಇಲಾಖೆ ಈ ಪ್ರಕರಣವನ್ನು ಯಾವ ದಿಕ್ಕಿನತ್ತ ಕೊಂಡೊಯ್ಯುತ್ತದೆ ಎಂಬುದನ್ನು ಕಾದು ನೋಡಬೇಕು. ಪ್ರಕರಣದ ... ಗಹನತೆ, ವಿಸ್ತಾರಗಳನ್ನು ಗಮನದಲ್ಲಿಟ್ಟುಕೊಂಡು ... ವಹಿಸುವುದು ಉತ್ತಮ. ಏನೇ ಆಗಲಿ, ... ಕಾರಣಕ್ಕೆ ಹಲವರಲ್ಲಿ ನಿರೀಕ್ಷೆ ಹುಟ್ಟಿಸಿರುವ ... ನಿರೀಕ್ಷೆಗಳನ್ನು ಹುಸಿಮಾಡಬಾರದು ...

ಜನರ ದುಡ್ಡಲ್ಲಿ ಮೋಜು, ಮಸ್ತಿ ಸ್ವಯಂಕೃಷಿ ಸರ್ವನಾಶ



ಸ್ವಯಂಕೃಷಿ ಎಂಬ ಬ್ಲೇಡ್ ಕಂಪನಿಯ ಕುರಿತಂತೆ ಪತ್ರಿಕೆ ಈ ಹಿಂದೆ ಏನೆಲ್ಲಾ ಭವಿಷ್ಯ ನುಡಿದಿತ್ತೋ ಅದು ಅಕ್ಷರಶಃ ನಿಜವಾಗಿದೆ. ಅದರ ಧಣಿ ವೀರೇಂದ್ರ ಬಾಬು ಹೈದರಾಬಾದಿಗೆ ಪರಾರಿಯಾಗಿದ್ದಾನೆ. ಅದೂ ಪಾರ್ವತಿ ಎಂಬ ಅವಿವಾಹಿತ ಯುವತಿಯ ಜೊತೆ. ವೀರೇಂದ್ರ ಬಾಬು ವಿರುದ್ಧ ಯಲಹಂಕ, ನ್ಯೂ ದೇವನಹಳ್ಳಿ ಇತ್ಯಾದಿ ಪೊಲೀಸ್ ಠಾಣೆಗಳಲ್ಲಿ ವಂಚನೆ, ಕಿಡ್ನಾಪ್, ವಿವಾಹೇತರ ಸಂಬಂಧ, ಪತ್ನಿಗೆ ಹಿಂಸೆ, ಕೊಲೆ, ಬೆದರಿಕೆ ಇತ್ಯಾದಿ ಪ್ರಕರಣಗಳು ದಾಖಲಾಗಿವೆ. ಪೊಲೀಸರು ಆತನನ್ನು ಹುಡುಕುತ್ತಿದ್ದಾರೆ. ಮತ್ತೊಂದೆಡೆ ದೇವನಹಳ್ಳಿ, ಸಹಕಾರನಗರ, ಯಲಹಂಕದ ಸ್ವಯಂಕೃಷಿ ಅಡ್ಡೆಗಳಿಗೆ ಬೀಗಬಿದ್ದಿದೆ.

ಇದು ಕೇವಲ ವೀರೇಂದ್ರ ಬಾಬು ಎಂಬ ವಂಚಕನ ಹೆಣ್ಣುಬಾಕ ಶೋಕಿಯಷ್ಟೇ ಆಗಿದ್ದರೆ ಆ ಮಾತು ಬೇರೆ. ಗುರುಟೀಕ್, ವಿನಿವಿಂಕ್, ಅಗ್ರಿಗೋಲ್ಡ್, ಸ್ವರ್ಣಕೃಷಿ, ಮೈಸೂರಿನ ನಿಷ್ಕಾ ಇತ್ಯಾದಿ ಬ್ಲೇಡ್ ಕಂಪೆನಿಗಳಂತೆ ಇತ್ತೀಚೆಗೆ ವಿಜೃಂಭಿಸಿದ್ದು ಸ್ವಯಂಕೃಷಿ. ರಾತ್ರಿ ಕಂಡ ಹಗಲುಬಾವಿಗೆ ಜಾರಿ ಬಿದ್ದಂತೆ ಜನ ಗೊತ್ತಿದ್ದೂ ದುಡ್ಡು ಹಾಕಿದ್ದು ಸ್ವಯಂಕೃಷಿಗೆ. ಸ್ವಯಂಕೃಷಿ ಫುಡ್ ಪ್ರಾಡೆಕ್ಟ್ಸ್, ಕೃಷಿ ಹೋಲ್ಡಿಂಗ್ಸ್, ಸ್ವಯಂಕೃಷಿ ಸಾಫ್ಟ್‌ವೇರ್, ಸ್ವಯಂಕೃಷಿ ಚಿಟ್ ಫಂಡ್, ಸುರಕ್ಷಾ ಚಿಟ್ ಫಂಡ್ಸ್, ಸ್ವಯಂಕೃಷಿ ಕೋ-ಆಪರೇಟಿವ್ ಬ್ಯಾಂಕ್, ಸ್ವಯಂಕೃಷಿ ಮೊಬೈಲ್ಸ್, ಸ್ವಯಂಕೃಷಿ ಟೀವಿ ಚಾನಲ್, ಸ್ವಯಂಕೃಷಿ ಮುಸ್ಸಂಜೆ ಪತ್ರಿಕೆ, ಶುಭೋದಯ ದಿನಪತ್ರಿಕೆ-ಹೀಗೆ ಏಕಕಾಲಕ್ಕೆ ಸ್ವಯಂಕೃಷಿ ಹೆಸರಿನ ಅಸಂಖ್ಯಾತ ಕಂಪೆನಿ, ಬ್ಯಾಂಕ್, ಚಿಟ್‌ಫಂಡ್, ಗಾರ್ಮೆಂಟ್ಸ್ ಇತ್ಯಾದಿ ಹೆಸರಿನ ಸಂಸ್ಥೆಗಳನ್ನು ಹುಟ್ಟುಹಾಕಿದ್ದು ಈಗ ಪರಾರಿಯಾಗಿರುವ ವೀರೇಂದ್ರಬಾಬು!

ಇಷ್ಟೆಲ್ಲಾ ಕಂಪೆನಿಗಳಿಗೆ ಹೆಸರಿಗಷ್ಟೇ ಮುರಳಿ ಎಂಬಾತ ಅಧ್ಯಕ್ಷನಾದರೂ ಅಸಲೀ ಅಧಿಪತಿಯಂತಿದ್ದವನು ವೀರೇಂದ್ರಬಾಬು.

ಸಿನಿಮಾ ಶೋಕಿ

ಈಗ ತನ್ನದೇ ಕಂಪೆನಿಯಲ್ಲಿ ಉದ್ಯೋಗಿಯಾಗಿದ್ದ ಪಾರ್ವತಿ ಎಂಬ ತನ್ನ ಮಗಳ ವಯಸ್ಸಿನ ಯುವತಿಯ ಜೊತೆ ಹೈದರಾಬಾದಿಗೆ ಪರಾರಿಯಾಗಿದ್ದಾನೆ ವೀರೇಂದ್ರಬಾಬು. ಬೇರೆಲ್ಲಾ ಬ್ಲೇಡ್ ಕಂಪೆನಿಗಳ ವಂಚಕ ಧಣಿಗಳು ಜನ ಠೇವಣಿಯಿಟ್ಟದ್ದ ಕೋಟಿಗಟ್ಟಲೆ ರೊಕ್ಕದ ಸಮೇತ ಪರಾರಿಯಾದರೆ ಈ ವೀರೇಂದ್ರ ಬಾಬುವಿನದು ಕೊಂಚ ವಿಚಿತ್ರ ಕೇಸು. ಈತ ಜನರ ಕೋಟಿಗಟ್ಟಲೇ ದುಡ್ಡಷ್ಟೇ ಅಲ್ಲದೆ ಸಿಕ್ಕಿಸಿಕ್ಕ ಹೆಂಗಸರನ್ನೆಲ್ಲ ಜೊತೆಗೆ ಹಾಕಿಕೊಂಡು ನಾಪತ್ತೆಯಾಗಿದ್ದಾನೆ.

ವೀರೇಂದ್ರಬಾಬು ಕತೆ ಬರೆದು, ನಿರ್ಮಿಸಿ, ನಟಿಸಿ, ಅರ್ಪಿಸಿದ ಸ್ವಯಂಕೃಷಿ ಎಂಬ ಸಿನಿಮಾ ಪ್ರಚಾರದಲ್ಲಿ ವಿಜೃಂಭಿಸಿತ್ತಾದರೂ ಹಾಕಿದ ಎಂಟುಕೋಟಿ ಬಂಡವಾಳದಲ್ಲಿ ನಯಾಪೈಸೆ ಕೂಡ ಬರಕತ್ತಾಗಲಿಲ್ಲ. ತಾನೇ ಹೀರೋ ಆಗಿ, ನಾಯಕಿಯರ ಜೊತೆ ಡ್ಯಾನ್ಸು ಗೀನ್ಸು ಮಾಡಿದ ವೀರೇಂದ್ರಬಾಬು ಇದೇ ದುಡ್ಡಲ್ಲಿ ಕನ್ನಡದ ಯಾರಾದರೂ ಹೀರೋ ಹಾಕಿಕೊಂಡು ಸಿನಿಮಾ ಮಾಡಿದ್ದರೆ ಕನಿಷ್ಠ ಹಾಕಿದ ದುಡ್ಡಾದರೂ ಬರುತ್ತಿತ್ತು, ಶೋಕಿಗೆ ಬಿದ್ದ ವೀರೇಂದ್ರಬಾಬು ತಾನೇ ಬಣ್ಣ ಹಚ್ಚಿದ. ಚಿತ್ರಕ್ಕೆ ತನ್ನದೇ ಕಂಪೆನಿಯ ಹೆಸರಿಟ್ಟ. ನೆಟ್ಟಗೊಂದು ವಾರ ಕೂಡ ಸಿನಿಮಾ ಓಡಲಿಲ್ಲ! ಎಂಟು ಕೋಟಿಯಷ್ಟು ಜನರ ದುಡ್ಡನ್ನು ವೀರೇಂದ್ರಬಾಬು ಸಿನಿಮಾ ಶೋಕಿಯಲ್ಲಿ ಹುಡಿಹಾರಿಸಿದ್ದ.

ಆತನ ವಿಕೃತಿ ಇಷ್ಟಕ್ಕೇ ತಣಿಯಲಿಲ್ಲ, ಸ್ವಯಂಕೃಷಿಯಲ್ಲಿ ಎರಡನೇ ಹೀರೋಯಿನ್ ಆಗಿ ನಟಿಸಿದ್ದ 'ಶೃತಿ' ಎಂಬ ನಟಿಯನ್ನು ಪಟಾಯಿಸಿದ್ದೇ ಸಹಕಾರ ನಗರದಲ್ಲಿ ಮನೆ ಮಾಡಿಟ್ಟ. ಅದೂ ತಿಂಗಳಿಗೆ 18 ಸಾವಿರದ ಬಾಡಿಗೆಯ ಬಂಗಲೆ!

ವಿಕಟವೆಂದರೆ ಈ ಹೊತ್ತಿಗಾಗಲೇ ವೀರೇಂದ್ರಬಾಬು ಒಂದಲ್ಲ ಎರಡು ಮದುವೆಯಾಗಿದ್ದ. ಅಗ್ರಿಗೋಲ್ಡ್ ಎಂಬ ಇನ್ನೊಂದು ಬ್ಲೇಡ್ ಕಂಪೆನಿ ಸೇರಿ ಜನರಿಂದ ದುಡ್ಡೆತ್ತುವ ಚಾಕಚಕ್ಯತೆ ರೂಢಿಸಿಕೊಂಡವನು ಕ್ರಮೇಣ ತಾನೇ ನಿಂತು ಸ್ವರ್ಣಕೃಷಿ ಎಂಬ ಬ್ಲೇಡ್ ಕಂಪೆನಿ ಹುಟ್ಟು ಹಾಕಿ ಅಲ್ಲೂ ಭಾಗಡಿಗೆ ಬಿದ್ದು ಆನಂತರ ಆಂಧ್ರ ಮೂಲದ ಸ್ವಯಂಕೃಷಿ ಎಂಬ ಕಂಪೆನಿ ಶುರುಹಚ್ಚಿಕೊಂಡ. ಇದೆಲ್ಲಕ್ಕೂ ಮೊದಲೇ ವೀರೇಂದ್ರಬಾಬು ಪೀಣ್ಯದ ಗಾರ್ಮೆಂಟ್ ಫ್ಯಾಕ್ಟರಿಗೆ ದಿನಗೂಲಿಯಾಗಿದ್ದ. ಅದೇ ಗಾರ್ಮೆಂಟಿಗೆ ಬರುತ್ತಿದ್ದ ಸೌಭಾಗ್ಯ ಎಂಬ ಯುವತಿಯನ್ನು ಲವ್ ಮಾಡಿ ಮದುವೆಯಾಗಿ ಆಕೆಗೊಂದು ಮಗು ಕರುಣಿಸಿದ್ದೇ ಅಲ್ಲಿಂದ ಪರಾರಿಯಾದ.

ಹೀಗೆ ಪೀಣ್ಯದ ಗಾರ್ಮೆಂಟ್ ಬಿಟ್ಟವನು ಕೆಲಕಾಲ ಕಲಾಸಿಪಾಳ್ಯದ ಫುಟ್‌ಪಾತಿನಲ್ಲಿ ಬೆಲ್ಟುಗಳನ್ನು ಮಾರಿಕೊಂಡಿದ್ದ. ಆನಂತರ ಮಗ್ಗದ ಕೆಲಸಕ್ಕೆ ಬಿದ್ದವನು ಅಂತಿಮವಾಗಿ ಅಗ್ರಿಗೋಲ್ಡ್ ಎಂಬ ಬ್ಲೇಡ್ ಕಂಪೆನಿ ಸೇರುವ ಹೊತ್ತಿಗೆ ಈತನ ಕಣ್ಣಿಗೆ ಬಿದ್ದವಳು ಚಂದ್ರಿಕಾ!

ಸಿನಿಮಾ ನಟಿ.....!

ವೀರೇಂದ್ರಬಾಬು ಮೂಲತಃ ಶಿಡ್ಲಘಟ್ಟ ತಾಲ್ಲೂಕು ಬೆಳ್ಳೂಟ್ಟಿಯವನು ಈತನ ಬಲೆಗೆ ಬಿದ್ದ ಚಂದ್ರಿಕಾ ಪಕ್ಕದ ಭಕ್ತರ ಹಳ್ಳಿಯವಳು. ಆ ಹೊತ್ತಿಗಾಕೆ ಬೆಂಗಳೂರಿನ ಧವನಂ ಜ್ಯುವೆಲ್ಲರ್ಸ್‌ನಲ್ಲಿ ಎಚ್.ಆರ್. ಮ್ಯಾನೇಜರ್ ಆಗಿದ್ದಳು. ತನಗೆ ಮೊದಲೊಂದು ಮದುವೆಯಾಗಿದ್ದನ್ನು ಮುಚ್ಚಿಟ್ಟು ಚಂದ್ರಿಕಾಳನ್ನು ಯಾಮಾರಿಸಿ ಮದುವೆಯಾದ ವೀರೇಂದ್ರಬಾಬು ಆ ಹೊತ್ತಿಗೆ ಸ್ವರ್ಣಕೃಷಿ ಕಂಪೆನಿಗೆ ಧಣಿಯಾಗಿದ್ದ. ಈತನನ್ನೇ ನಂಬಿದ ಚಂದ್ರಿಕಾ ವೀರೇಂದ್ರಬಾಬು ತನಗೆ ತಕ್ಕ ಗಂಡನೆಂದೇ ಭಾವಿಸಿದ್ದಳು. ಆದರೆ ಆತ ಸ್ವಯಂಕೃಷಿ ಶುರುಹಚ್ಚಿಕೊಳ್ಳುವ ಹೊತ್ತಿಗೆ ಅದು ಸುಳ್ಳಾಗಿತ್ತು.



ಎರಡನೇ ಮದುವೆಯಾಗಿ ಪತ್ನಿ ಚಂದ್ರಿಕಾ ಇದ್ದೂ ಸಿನಿಮಾ ನಟಿ ಶೃತಿಯನ್ನು ಸಹಕಾರ ನಗರದಲ್ಲಿ ಮನೆ ಮಾಡಿ ವೀರೇಂದ್ರಬಾಬು. ತನ್ನ ಕಚೇರಿಯಲ್ಲೇ ಕೆಲಸ ಮಾಡಿಕೊಂಡಿದ್ದ ಮಂಗಳೂರು ಮೂಲ ಪಾರ್ವತಿ ಎಂಬ ಯುವತಿಯ ಜೊತೆ ಚಕ್ಕಂದಕ್ಕಿಳಿದಿದ್ದ!

ಇದು ಗೊತ್ತಾಗಿದ್ದೇ ಪತ್ನಿ ಚಂದ್ರಿಕಾ ಕುಸಿದುಹೋದಳು. ತಾನು ಪ್ರೀತಿಸಿದ್ದು ಓರ್ವ ಸ್ತ್ರೀಲಂಪಟನನ್ನು ಎಂಬುದು ಆಕೆಗೆ ಖಾತರಿಯಾಗಿತ್ತು.

ಮಂಡ್ಯ ಮೈಸೂರು, ಚಾಮರಾಜನಗರ, ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ಹಳ್ಳಿಗಾಡಿನ ಸರಿಸುಮಾರು 16 ಸಾವಿರ ಮಂದಿಯಿಂದ ವೀರೇಂದ್ರಬಾಬು 70 ಕೋಟಿಯಷ್ಟು ಠೇವಣಿ ಸಂಗ್ರಹಿಸಿದ್ದ. ದೇವನಹಳ್ಳಿಯನ್ನು ಹೆಡ್ಡಾಫೀಸು ಮಾಡಿಕೊಂಡು ಬೆಂಗಳೂರಿನ ಸಹಕಾರನಗರದಲ್ಲಿ ಮತ್ತೊಂದು ಬ್ರಾಂಚ್ ಆಫೀಸು ತೆಗೆದ. ಪತ್ರಿಕೋದ್ಯಮದ ಗಂಧಗಾಳಿ ಗೊತ್ತಿಲ್ಲದಿದ್ದರೂ ಶುಭೋದಯ ಮತ್ತು ಸ್ವಯಂಕೃಷಿ ಮುಸ್ಸಂಜೆ ಎಂಬ ಎರಡು ಪತ್ರಿಕೆಗಳನ್ನು ಆರಂಭಿಸಿದ. ಸ್ವಯಂಕೃಷಿ ಹೆಸರಲ್ಲಿ ಟೀವಿ ಚಾನಲ್ಲನ್ನೂ ಶುರುಹಚ್ಚಿಕೊಂಡ.

ಪತ್ರಿಕೆಗಳೇ ಬೇಕಾಬಿಟ್ಟಿ ಇಷ್ಟಾಡುತ್ತಿರುವಾಗ ಸ್ವಯಂಕೃಷಿ ಎಂಬ ತಲೆಬುಡವಿಲ್ಲದ ಪತ್ರಿಕೆಗಳನ್ನು ಓದುವವರ್ಯಾರು?



ವೀರೇಂದ್ರ ಬಾಬು ಮನೆ

ನ್ಯೂಸ್ ಚಾನಲ್ಲುಗಳನ್ನೇ ಕೇಳುವವರು ದಿಕ್ಕಿಲ್ಲದಿರುವಾಗ ಈತನ ಬೂರ್ನಾಸು ವಾಹಿನಿಯನ್ನು ನೋಡುವವರ್ಯಾರು?

ಚಿತ್ರವಿಚಿತ್ರ ಚಪಲಗಳು

ಹೇಗೆ ತಾನೇ ಹೀರೋ ಆಗಿ ಹುಚ್ಚಾಟ ಮಾಡಿದ ಸಿನಿಮಾ ಕೋಪಾಯಿತ್ತೋ ಹಾಗೆ ಗೊತ್ತುಗುರಿಯಿಲ್ಲದ ಈತನ ಪತ್ರಿಕೆ, ಚಾನಲ್ಲುಗಳೂ ಬಿಟ್ಟಿ ಸಂಬಳ ನುಂಗುವ ಬಂಡಲ್ ಕಸುಬಾಗಿ ತೋಪೆದ್ದವು. ಅಲ್ಪನಿಗೆ ಐಶ್ವರ್ಯ ಬಂದರೆ ಏನೆಲ್ಲಾ ವಿಪರೀತಗಳಾಗುತ್ತದೋ ಅದೇರೀತಿ ಬಾಬು ಪ್ರೇಯಸಿಗೊಂದು, ಪತ್ನಿಗೊಂದು, ಶೋಕಿಗೊಂದು ಮನೆಯೆಂದು ಮೂರು ಮನೆಗಳನ್ನು ಮಾಡಿದ. ಪತ್ನಿ ಚಂದ್ರಿಕಾಗಿದ್ದ ಮಾಸಿಕ 40 ಸಾವಿರದ ಸಂಬಳದ ಕೆಲಸವನ್ನೂ ಬಿಡಿಸಿಬಿಟ್ಟ.

ಇದೆಲ್ಲದರ ಜೊತೆಗೆ ತನ್ನ ದೌಲತ್ತು ಮೆರೆಯಬೇಕಲ್ಲ ಒಂದಲ್ಲ ಐದು ಮಂದಿ ಗನ್‌ಮನ್‌ಗಳನ್ನು ಅಂಗರಕ್ಷಕರಾಗಿ ನೇಮಿಸಿಕೊಂಡ. ತನ್ನ ಖಾಸಗಿ ಶೋಕಿಗೆಂದೇ ಒಂದು ಲ್ಯಾಂಡ್ ಕ್ರೂಜರ್ ಕಾರು ಖರೀದಿಸಿದ. ಅದಕ್ಕೆ ಪೂರಕವಾಗಿ ನಾಲ್ಕು ಇಂಡಿಕಾ ಕಾರುಗಳನ್ನೂ, ಎರಡು ಟಾಟಾ ಸುಮೋಗಳನ್ನೂ ಖರೀದಿಸಿದ. ಮಧ್ಯೆ ತಾನು ಐಷಾರಾಮಿ ಕಾರಲ್ಲಿ ಹೋಗುತ್ತಿದ್ದರೆ ತನಗೆ ಬೆಂಗಾವಲಾಗಿ ಮುಂದೊಂದು ಹಿಂದೊಂದು ಇಂಡಿಕಾ ಕಾರುಗಳಲ್ಲಿ ಗನ್‌ಮನ್‌ಗಳು ಬರಬೇಕು. ತನ್ನ ವೈಯಕ್ತಿಕ ಶೋಕಿಗೆಂದೇ ಎಂಟು ಮಂದಿ ಡ್ರೈವರ್‌ಗಳನ್ನು ನೇಮಿಸಿಕೊಂಡ. ಇದೆಲ್ಲ ಚಪಲಗಳಿಗೆ ತಪ್ಪಿತೆ ಇನ್ನೂ ಒಂದು ಶೋಕಿ ಶುರುಹಚ್ಚಿಕೊಂಡ.

ಅದು ಈ ರಾಜ್ಯದ ಮುಖ್ಯಮಂತ್ರಿಗೂ ಇಲ್ಲದಂಥ ವಿಚಿತ್ರ ಸೆಕ್ಯೂರಿಟಿ ಸಿಸ್ಟಮ್. ಯಾರಾದರೂ ಈತನನ್ನು ನೋಡಬೇಕೆಂದರೆ ಮೊದಲು ಮನೆ ಬಾಗಿಲಿನ ಸೆಕ್ಯೂರಿಟಿಯವರ ಬಳಿ ಸಹಿ ಹಾಕಬೇಕು. ಆನಂತರ ಅದೇ ವ್ಯಕ್ತಿ ಮೊದಲನೇ ಮಹಡಿಯಲ್ಲಿರುವ ಬಾಡಿಗಾರ್ಡ್ ಬಳಿ ಎರಡನೇ ಸಹಿ ಹಾಕಬೇಕು. ಅಲ್ಲಿ ಸಹಿ ಓಕೆ ಆದಮೇಲೆ ಎರಡನೇ ಮಹಡಿಯಲ್ಲಿರುವ ಈತನನ್ನು ನೋಡುವ ಮುನ್ನ ಮೂರನೆ ಸಹಿ ಹಾಕಬೇಕು. ಈ ಮೂರು ಸಹಿಗಳು ಮ್ಯಾಚ್ ಆದ ನಂತರವೇ ಬಾಬು ದರ್ಶನ ಕೊಡುವುದು!

ಸರ್ವನಾಶದ ಸನ್ನಿಧಿಯಲ್ಲಿ.....

ರಾಷ್ಟ್ರಪತಿಯಲ್ಲ, ಮುಖ್ಯಮಂತ್ರಿಯಲ್ಲ, ಭೂಗತ ಡಾನ್ ಅಲ್ಲ, ಸಾವಿರಾರು ಕೋಟಿಯ ಬಿಜಿನೆಸ್‌ಮನ್ ಅಲ್ಲ, ಬಹುಶಃ ಎಲ್ಟಿಟಿಇ ಪ್ರಭಾಕರನ್, ಒಸಾಮಾ ಬಿನ್ ಲಾಡೆನ್ ಕೂಡ ಈ ಪಾಟಿ ಗನ್‌ಮನ್‌ಗಳು, ಸೆಕ್ಯೂರಿಟಿ, ತಪಾಸಣೆ ಇತ್ಯಾದಿ ಬಳಸಿರಲಿಕ್ಕಿಲ್ಲ. ತಾನೊಬ್ಬ ಯಃಕಶ್ಚಿತ್ ವಂಚಕನೆಂಬುದು ಗೊತ್ತಿದ್ದೂ ವೀರೇಂದ್ರಬಾಬು ಇಂಥದೊಂದು ಹುಚ್ಚಾಟಕ್ಕಿಳಿದಿದ್ದ. ಬೆಳ್ಳಂಬೆಳಿಗ್ಗೆಯೇ ಕಂಠಮಟ್ಟ ಕುಡಿಯುತ್ತಿದ್ದ. ಹೀಗೆ ಕುಡಿದಾಗಲೆಲ್ಲ ಆತನ ಚಪಲ ಕೆರಳುತ್ತಿತ್ತು. ಕೆಲವೊಮ್ಮೆ ಎರಡನೇ ಪತ್ನಿ, ಮತ್ತೊಮ್ಮೆ ಉಪಪತ್ನಿ, ಮಗದೊಮ್ಮೆ ತನ್ನ ಕಚೇರಿಯಲ್ಲೇ ಇದ್ದ ಪಾರ್ವತಿ. ನಡುನಡುವೆ ಪಾರ್ಟ್‌ಟೈಮ್ ಪ್ರೇಯಸಿಯರ ಜೊತೆ ಹೊತ್ತು ಗೊತ್ತಿಲ್ಲದೆ ಚಕ್ಕಂದಕ್ಕಿಳಿಯುತ್ತಿದ್ದ.

ಸ್ವಯಂಕೃಷಿಯ ಹೆಸರಲ್ಲಿ ಸಂಗ್ರಹಿಸಿದ್ದ 70 ಕೋಟಿ ರೂಪಾಯಿಗಳ ಪೈಕಿ 50 ಕೋಟಿಯನ್ನು ವೀರೇಂದ್ರಬಾಬು ಕೇವಲ ಒಂದು ವರ್ಷದಲ್ಲಿ ಹುಡಿಹಾರಿಸಿದ್ದ. ತನ್ನ ಮನೆಯಲ್ಲೇ ಬಾರ್ ಕೌಂಟರ್ ಒಂದನ್ನು ಮಾಡಿಕೊಂಡು ಕೇಸುಗಟ್ಟಲೇ ದುಬಾರಿಯ 100 ಪೈಪರ್ಸ್ ವಿಸ್ಕಿ ಬಾಟಲುಗಳನ್ನು ಜೋಡಿಸಿದ್ದ!

ಒಂದೆಡೆ ಠೇವಣಿದಾರರು ತಮ್ಮ ಮೆಚ್ಯೂರಿಟಿ ಫಂಡ್‌ಗಾಗಿ ಸ್ವಯಂಕೃಷಿ ಕಚೇರಿಗೆ ದಾಳಿಯಿಟ್ಟರೆ ಮತ್ತೊಂದೆಡೆ ಪತ್ನಿ, ಉಪಪತ್ನಿ, ಪ್ರೇಯಸಿಯರ ಮಧ್ಯೆ ಬಾಬು ಸಂಭಾಳಿಸವಾಗಲೇ ಪರದಾಡುತ್ತಿದ್ದ. ಈ ಮಧ್ಯೆ ಪತ್ನಿ ಚಂದ್ರಿಕಾ ಮತ್ತು ಪ್ರೇಯಸಿ ಪಾರ್ವತಿ ಮಧ್ಯೆ ಕಚ್ಚಾಟಗಳಾದವು. ನಟಿ ಶೃತಿ ಬೇರೆ ಹೊತ್ತಲ್ಲದ ಹೊತ್ತಲ್ಲಿ ದಾಳಿಯಿಟ್ಟು ಪೀಡಿಸುತ್ತಿದ್ದಳು. ಸ್ವಯಂಕೃಷಿಯ ನಾಮಕಾವಸ್ತೆ ಅಧ್ಯಕ್ಷ ಮುರಳಿಗೂ ಬಾಬುವಿಗೂ ಕಿತ್ತಾಟ ಶುರುವಾಯಿತು. ಬರುಬರುತ್ತ ಪತ್ರಿಕೆ, ಚಾನಲ್, ಕಚೇರಿಯ ನೌಕರರಿಗೆ ಸಂಬಳಕ್ಕೇ ಪರದಾಡುವಂತಾಯ್ತು.

ಇದು ಯಾವ ಮಟ್ಟಕ್ಕೆಂದರೆ ಕಳೆದ ಐದು ತಿಂಗಳಿಂದ ತನ್ನ ಯಾವ ಸಿಬ್ಬಂದಿಗೂ ಬಾಬು ಸಂಬಳ ಕೊಟ್ಟಿಲ್ಲ. ನಟಿ ಶೃತಿಯನ್ನು ಇಟ್ಟಿದ್ದ ಮನೆಗೆ ಎರಡು ತಿಂಗಳಿಂದ ಬಾಡಿಗೆ ಕೊಟ್ಟಿಲ್ಲ. ಇಷ್ಟೆಲ್ಲದರ ಮಧ್ಯೆ ಪತ್ನಿ ಚಂದ್ರಿಕಾಳಿಗೇ ಕೈಕೊಟ್ಟು ಬಾಬು ಹೈದರಾಬಾದಿಗೆ ಪರಾರಿಯಾಗಿದ್ದಾನೆ. ಅಲ್ಲಿ ಅಪಾರ್ಟ್‌ಮೆಂಟ್ ಒಂದರಲ್ಲಿ ತನ್ನ ಪ್ರೇಯಸಿ ಕಮ್ ಅಕೌಂಟೆಂಟ್ ಪಾರ್ವತಿಯ ಜೊತೆ ಹೊಸ ಸಂಸಾರ ಶುರು ಹಚ್ಚಿಕೊಂಡಿದ್ದಾನೆ. ಪತ್ನಿ ಚಂದ್ರಿಕಾ ಯಲಹಂಕ ಪೊಲೀಸರಿಗೆ ದೂರುಕೊಟ್ಟರೆ ಸ್ವಯಂಕೃಷಿ ನಂಬಿ ದುಡ್ಡು ಹಾಕಿದ ಸಹಸ್ರಾರು ಮಂದಿ ಆತನ ಕಚೇರಿಯೆದುರು ನಿಂತು ಎದೆಬಡಿದುಕೊಳ್ಳುತ್ತಿದ್ದಾರೆ.

ಘಟಿಂಗ ವೀರೇಂದ್ರಬಾಬುವನ್ನು ಜೈಲಿಗೆ ಹಾಕುವವರ್ಯಾರು?

• ರಾ. ಸೋಮನಾಥ್

...ಕ್ಸಲ್ ನಿಗ್ರಹಕ್ಕೊಂದು ಸದವಕಾಶ

...ಂಗಳೂರು ವಿಶ್ವವಿದ್ಯಾಲಯದಲ್ಲಿ ಸಮೂಹ ...ನ ಮತ್ತು ಪತ್ರಿಕೋದ್ಯಮ(MCJ)ದ ಸ್ನಾತಕೋತ್ತರ ...ನಲ್ಲಿ ವ್ಯಾಸಂಗ ಮಾಡುತ್ತಿರುವ ವಿಠಲ ಎಂಬ ...ಯನ್ನು ಶಂಕಿತ ನಕ್ಸಲ್ ಬೆಂಬಲಿಗ ಎಂಬ ಕಾರಣಕ್ಕೆ ... ಮಾಡಿ ನ್ಯಾಯಾಂಗ ಬಂಧನದಲ್ಲಿರಿಸಲಾಗಿದೆ. ...ವೆ ಆದಿವಾಸಿ-ಪರಿಶಿಷ್ಟ ಪಂಗಡದ ವಿದ್ಯಾರ್ಥಿ ...ರ್ವನ ಅಪರೂಪದ ಸಾಧನೆಗೆ ಅಡ್ಡಿಯಾಗುತ್ತಿದೆ. ...ದ್ದಿ ಕಾಣದ ಹಿಂದುಳಿದಿರುವ ಕಾಡು ಪ್ರದೇಶದ ...ಡಿಯ ಸಮುದಾಯದ ಈಗತಾನೇ ಚಿಗುರುತ್ತಿರುವ ...ರ್ಯವನ್ನೇ ಚಿವುಟಿ ಹಾಕಲು ದಾರಿಯಾಗುತ್ತಿದೆ. ...ನ್ನು ತಪ್ಪಿಸಲು ಸದರಿ ವಿದ್ಯಾರ್ಥಿಯು ಪ್ರಸಕ್ತ ...ಯುತ್ತಿರುವ ಎಂ.ಸಿ.ಜೆ ಸೆಮಿಸ್ಟರ್ ತರಗತಿಗಳಿಗೆ ಹಾಜ... ಅವಕಾಶ ಕೊಡಿ ಎಂದು ಮನವಿ ಮಾಡಲು ...ಸಿಚ್ಛಿಸಿನ. ಈ ಮನವಿಯನ್ನು ಮುಖ್ಯವಾಗಿ ಶ್ರೀ ...ಪ್ ರೆಡ್ಡಿ, ಮಾನ್ಯ ಐ.ಜಿ.ಪಿ, ದಕ್ಷಿಣ ವಲಯ, ...ಗಳೂರು ಇವರಿಗೆ ಉದ್ದೇಶಿಸಿ ಮಾಡಲಾಗಿದೆ. ...ಯ್ಯೂ ಪ್ರಕರಣಕ್ಕೆ ಸಂಬಂಧಿಸಿದ ಯಾವುದೇ ಪ್ರಮುಖ ...ರಿಗಳಿಗೂ ಇದು ಸಲ್ಲುತ್ತದೆ. ಈ ಮನವಿಯನ್ನು ... ಈ ದೇಶದ ಸಾಮಾನ್ಯ ಪ್ರಜೆಯ ನೆಲೆಯಲ್ಲಿ ...ಯುತ್ತಿದ್ದೇನೆ; ನಮ್ಮ ಸಾರ್ವಜನಿಕ ಬದುಕಿನಲ್ಲಿ ಸಂದಿಗ್ಧ ...ತಿಗಳನ್ನು ಕೇವಲ "ಸಮಸ್ಯೆ" ದೃಷ್ಟಿಕೋನದಿಂದ ...ತದೆ, ಅವುಗಳನ್ನು ಸಾಧ್ಯತೆ ಮತ್ತು ಸದವಕಾಶಗಳಿಗಾಗಿ ...ರ್ತಿಸಬಹುದು ಎಂದು ನಂಬುವ ತೀವ್ರ ಪ್ರಾಯೋಗಿಕ ...ನ ಒಬ್ಬ ಅಂಬೇಡ್ಕರ್‌ವಾದಿಯಾಗಿ ಮಾಡುತ್ತಿದ್ದೇನೆ; ...ಾ ನಕ್ಸಲರು ಪ್ರತಿಪಾದಿಸುವ ಹಿಂಸಾತ್ಮಕ ವರ್ಗ ...ರಾಟದ ಗುಂಗಿಗೆ-ತಂತ್ರಗಳಿಗೆ ಆದಿವಾಸಿ ಸಮುದಾಯ ... ಬಲಿಯಾಗಬಾರದು, ದಿಕ್ಕು ತಪ್ಪಬಾರದು. ಬದಲಿಗೆ ...ೀಡ್ಕರ್ ಸಿದ್ಧಾಂತದ ಸಂವಿಧಾನದ ನೆಲೆಯಲ್ಲಿ ಶಾಂತಿ ...ಶವಾದ ಜಾತಿಸಂಘರ್ಷ ನಡೆಸಬೇಕು ಎಂದು ...ಪಾದಿಸುವವನಾಗಿ ಮಾಡುತ್ತಿದ್ದೇನೆ. ಆ ಹುಡುಗನ ...ಂಯ ಗೋಳು ನನ್ನ ಹೃದಯ ಹಿಂಡಿದ್ದಕ್ಕಾಗಿ ...ತುತ್ತಿದ್ದೇನೆ. ವಿಠಲನ ಗುರುತು ಪರಿಚಯ ನನಗಿಲ್ಲ ...ಎಂದನ್ನು ಸ್ಪಷ್ಟಪಡಿಸುತ್ತೇನೆ.

...ವಿಠಲನನ್ನು ಪರೀಕ್ಷೆಗೆ ಕುಳಿತುಕೊಳ್ಳಲು ಬಿಡಬೇಕು ... ಸ್ಥಳೀಯ ನ್ಯಾಯಾಲಯವು ನಿರ್ದೇಶನ ನೀಡಿರುವುದು ...ವಂದನಾರ್ಹ. ಆದರೆ, ತರಗತಿಗಳಿಗೆ ಹಾಜರಾಗುವ ...ಯಾವುದೇ ಉಲ್ಲೇಖವಿಲ್ಲದ ಕೋರ್ಟಿನ ಈ ನಿರ್ದೇಶನ ...ನಿಗೆ ಅಷ್ಟೊಂದು ಸಹಾಯವಾಗುವ ಸೂಚನೆಗಳಿಲ್ಲ. ...ತೆಂದರೆ ವಿಠಲ್ ಪ್ರಸಕ್ತ ಸೆಮಿಸ್ಟರ್‌ನ ಜನವರಿ ಹಾಗೂ ...ವರಿ ತಿಂಗಳುಗಳಲ್ಲಿ ತರಗತಿಗೆ ಹಾಜರಾಗಿದ್ದಾನೆ ಎಂದು ...ಲಾಗುತ್ತಿದೆ. ಆದರೆ ಮಾರ್ಚ್ 2 ರಂದು ಅರೆಸ್ಟ್ ... ಅವನು ಆ ತಿಂಗಳ ಪೂರ್ತಿ ತರಗತಿಗೆ ಹಾಜರಾಗಿಲ್ಲ. ... ಏಪ್ರಿಲ್ ತಿಂಗಳಲ್ಲೂ ಹಾಜರಾಗದೇ ಹೋದರೆ ...%ರಷ್ಟು ಹಾಜರಾತಿ ಕೊರತೆ ಉಂಟಾಗುತ್ತದೆ. ಪರೀಕ್ಷೆಗೆ ...ಜರಾಗಲು ವಿದ್ಯಾರ್ಥಿಯೊಬ್ಬ ಕನಿಷ್ಟ 75% ರಷ್ಟು ...ಜರಾತಿ ಹೊಂದಿರಬೇಕು. ಎರಡನೆಯದಾಗಿ ಮಾರ್ಚ್-...ಲ್ ಅಂದರೆ ಸುಮಾರು ಅರ್ಧ ಸೆಮಿಸ್ಟರ್ ಅವಧಿಗೆ ...ಜರಾಗದೆ ವಿದ್ಯಾರ್ಥಿಯೊಬ್ಬ ಸಮರ್ಥವಾಗಿ ಪರೀಕ್ಷೆ ...ಯುಲು ಆಗುತ್ತದೆಯೇ? Internal Assessment ... ಕ್ಲಾಸ್ ಟೆಸ್ಟ್ ಮತ್ತು ಅಸೈನ್‌ಮೆಂಟ್‌ಗಳನ್ನು ...ಯುಬೇಕು ಹಾಗೂ 50 ಅಂಕಗಳ ಫೋಟೋ...ಲಿಸಂ ಕುರಿತ ಪ್ರಾಕ್ಟಿಕಲ್ ಕೆಲಸಗಳನ್ನು ಮಾಡಬೇಕು. ...ಲ್ಲಾ ಪೂರೈಕೆ ಆಗದೆ ಮುಖ್ಯ ಪರೀಕ್ಷೆಗೆ ಕುಳಿತುಕೊಳ್ಳಲು ...ಕಾಶವಿದೆಯೇ?

ಹಾಜರಾತಿ ಕೊರತೆಯ ವಿಷಯದಲ್ಲಿ ಒಬ್ಬರಿಗೊಂದು ನೀತಿ ಅನುಸರಿಸಿ ತಾರತಮ್ಯ ಮಾಡುವುದರಲ್ಲಿ ಮಂಗಳೂರು ವಿ.ವಿ, ಅದರಲ್ಲೂ ಮುಖ್ಯವಾಗಿ ಎಂ.ಸಿ.ಜೆ. ವಿಭಾಗದ HOD ಗಳು ದಾಖಲೆ ನಿರ್ಮಿಸಿದ್ದಾರೆ. ಆದರೆ ಈಗ ಕುಲಪತಿ ಪ್ರೊ. ಟಿ.ಸಿ. ಶಿವಶಂಕರ್‌ಮೂರ್ತಿಯವರ ಅವಧಿಯಲ್ಲಿ ಇದು ಸಾಧ್ಯವೇ? ಹಾಜರಾತಿಯ ಜೊತೆಗೆ ವಿದ್ಯಾರ್ಥಿಯೊಬ್ಬನನ್ನು ವಿ.ವಿ.ಯಲ್ಲಿ ಮುಂದುವರಿಸಲು ಗುಣ, ನಡತೆಯ ಪ್ರಶ್ನೆಯೂ ಬರುತ್ತದೆ. ವಿಠಲ ಈಗ ನಕ್ಸಲ್ ಆರೋಪಿಯಾದರೂ ಈ ಮೇಲಿನ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದೆ ಕೇವಲ ಕುಲಪತಿಯವರನ್ನು ದೂಷಿಸಿದರೆ ವಿಠಲನ ಮೇಲೆ ಅವರಿಗಿರುವ ಕಾಳಜಿ ಎಷ್ಟು Casual ಎನ್ನುವುದನ್ನು ತೋರಿಸುತ್ತದೆ ಅಷ್ಟೇ.

ಒಟ್ಟಾರೆ ಪ್ರಕರಣವನ್ನು ಸ್ಪಷ್ಟವಾಗಿ ವಿಶ್ಲೇಷಿಸಿದಾಗ ಪ್ರಕರಣಕ್ಕೆ ಅತ್ಯಂತ ಗುಣಾತ್ಮಕ, ಆರೋಗ್ಯಕರ, ಮಾನವೀಯ ಹಾಗೂ ಪ್ರಗತಿಪರ ತಿರುವನ್ನು ಕೊಡಲು ಅವಕಾಶವಿರುವುದು ಪೊಲೀಸರಿಗೆ ಮಾತ್ರ. ಚೆಂಡು ಪೊಲೀಸರ ಕೋರ್ಟಿನಲ್ಲಿದೆ. ಸಮಸ್ಯೆಗೆ ಒಂದೇ ಒಂದು ಪರಿಹಾರ ವಿಠಲನಿಗೆ ತರಗತಿಗೆ ಹಾಜರಾಗಲು ತಕ್ಷಣಕ್ಕೆ ಅವಕಾಶ ನೀಡುವುದು. ಇದನ್ನು ಅವನ ಮೇಲಿನ ತನಿಖೆಯನ್ನು ಮುಂದುವರೆಸಿಕೊಂಡೇ ಮಾಡಬಹುದಲ್ಲವೇ? ಈ ಮನವಿಗೆ ಸಮರ್ಥನೆಯಾಗಿ ದಿನಾಂಕ 21.03.2012 ಉದಯವಾಣಿ ಪತ್ರಿಕೆಯಲ್ಲಿ (ಪುಟ-14) "ವಿಠಲನನ್ನು ಸಮಾವೇಶಕ್ಕೆ ಕರೆದೊಯ್ದುದು ವಿಕ್ರಂಗೌಡ ಎಂಬ ವರದಿಯನ್ನು ಗಮನಿಸಬಹುದು. ಈ ವರದಿಯ ಒಂದು ಪ್ಯಾರಾವನ್ನು ಇಲ್ಲಿ ಉಲ್ಲೇಖಿಸುತ್ತೇನೆ."

"ಎಲ್ಲಾ ಸರಿಹೋಗಿದ್ದರೆ ವಿಠಲನನ್ನು ನಕ್ಸಲ್ ಗುಂಪಿಗೆ ಸೇರಿಸಲು ಸಕಲ ಸಿದ್ಧತೆಗಳೂ ನಡೆದಿದ್ದವು ಎನ್ನುತ್ತವೆ ತನಿಖಾ ಮೂಲಗಳು. ಕುತ್ಲೂರಿನ ಮಣಿಲ ಹೊಸಮನೆಯ ವಿಠಲ(23) ಆ ಪರಿಸರದಲ್ಲಿ ಅತಿಹೆಚ್ಚು ಕಲಿತ ಮಲೆಕುಡಿಯ ಜನಾಂಗದ ಯುವಕ. ಇದನ್ನು ನಕ್ಸಲರು ದುರ್ಬಳಕೆ ಮಾಡಲು ನೋಡಿದ್ದರು. ಈ ಉದ್ದೇಶಧಿಂದಲೇ 2011 ರಲ್ಲಿ ಜೂನ್‌ನಲ್ಲಿ ಕುತ್ಲೂರಿನಲ್ಲಿ ನಡೆದ (ಮಾ.19 ರ ಉದಯವಾಣಿಯಲ್ಲಿ 2011 ಎಂದು ಮುದ್ರಣ ದೋಷದಿಂದ ತಪ್ಪಾಗಿದೆ.) ಸಮಾವೇಶಕ್ಕೆ ಕರೆದೊಯ್ಯಲಾಗಿತ್ತು ಎಂದು ಗೊತ್ತಾಗಿದೆ. ಈಗ ನಕ್ಸಲ್ ಪಾಳಯದಲ್ಲಿರುವ ಹೆಬ್ರಿಯ ವಿಕ್ರಂಗೌಡನೇ ವಿಠಲನನ್ನು ಸಮಾವೇಶಕ್ಕೆ ಕರೆದೊಯ್ದಿದ್ದ ಎಂದು ಗೊತ್ತಾಗಿದೆ. ವಿಠಲನ ಮುಖಾಂತರ ಸಂಘಟನೆಯನ್ನು ಬಲಗೊಳಿಸುವುದು, ಬುದ್ಧಿವಂತರನ್ನು ಸಂಘಟನೆಗೆ ಸೇರಿಸಿಕೊಳ್ಳುವ ಉದ್ದೇಶ ನಕ್ಸಲರದಾಗಿತ್ತು ಎನ್ನುವುದು ಪೊಲೀಸರ ವಾದ."

ಈ ಮೇಲಿನ ಒಂದು ಪ್ಯಾರಾದಲ್ಲಿರುವ ಅಂಶಗಳನ್ನೇ ಇಡೀ ವರದಿ ಸ್ಪಷ್ಟೀಕರಿಸುತ್ತದೆ.

(ಆವರಣದೊಳಗಿರುವ ಮುದ್ರಣ ದೋಷದ ಕುರಿತ ತಪ್ಪೊಪ್ಪಿಗೆ ಉದಯವಾಣಿ ಪತ್ರಿಕೆಯವರದ್ದು)

ಹಾಗೂ ಸದರಿ ವರದಿಯೊಂದಿಗೆ ಬಾಕ್ಸ್‌ಐಟಂ ಒಂದು ಪ್ರಕಟವಾಗಿದ್ದು ಅದರಲ್ಲಿ "ರಾಜ್ಯದಲ್ಲಿ ನಕ್ಸಲರ ಸಂಖ್ಯೆ ಹೆಚ್ಚಿಲ್ಲ; ರಾಜ್ಯದ ನಕ್ಸಲರ ಸಂಖ್ಯೆ ಈ ಹಿಂದಿನಷ್ಟೇ ಸುಮಾರು 25 ರಷ್ಟು ಇದೆ. ಹೆಚ್ಚಾಗಿಲ್ಲ, ಸಮಾವೇಶಕ್ಕೆ ಬೇರೆ ಬೇರೆ ರಾಜ್ಯದ ಮಂದಿ ಬಂದಿರುವ ಸಾಧ್ಯತೆಯಿದೆ" ಎಂದು ಐ.ಜಿ.ಪಿ.ಯವರು ಹೇಳಿರುವುದು ಪ್ರಕಟವಾಗಿದೆ. ಮೇಲಿನ ವರದಿಗಳ ಪ್ರಕಾರ ವಿಠಲನಿಂದ ಈವರೆಗೆ ಯಾವುದೇ ಹಿಂಸಾಕೃತ್ಯ /ನಕ್ಸಲ್ ಚಟುವಟಿಕೆ ನಡೆದಿಲ್ಲ, ಆಗಿರುವುದೆಲ್ಲಾ ಅವನನ್ನು ನಕ್ಸಲೈಟ್ ಮಾಡುವ ಪ್ರಯತ್ನಗಳಷ್ಟೇ. ಅದು ವಿಠಲನು ಹುಟ್ಟಿ ಬೆಳೆದಿರುವ ಅಂತಹ ಕಾಡು ಪ್ರದೇಶದಲ್ಲಿ ಸಾಮಾನ್ಯವಾಗಿ ನಡೆಯುತ್ತಿರುವ ಕೆಲಸ. ಆ ಭಾಗದಲ್ಲಿ ಮತ್ತು ಆ ಸಮುದಾಯದಲ್ಲಿ



ಬಿ.ಎ. ಮುಗಿಸಿರುವುದೇ ಅತಿ ಹೆಚ್ಚು ಕಲಿಕೆ ಎಂದರೆ ಅವರೆಷ್ಟು ಹಿಂದುಳಿದಿದ್ದಾರೆ ಎಂಬುದು ತಿಳಿಯುತ್ತದೆ. ಅಲ್ಲದೆ ಅದು ವಿಠಲನ ಸಾಧನೆ ಎಂತಹದು ಎಂಬುದಕ್ಕೂ ಸಾಕ್ಷಿ. ಆ ಕಾರಣಕ್ಕಾಗಿ ಅವನ ಶಿಕ್ಷಣ ಹಾಳಾಗದಂತೆ ಕಾಪಾಡುವುದು ಪೊಲೀಸರ/ಸರ್ಕಾರದ ಕರ್ತವ್ಯ, ಐತಿಹಾಸಿಕ ಜವಾಬ್ದಾರಿ.

ಹಳ್ಳಿಗಾಡುಗಳಿಗೆ ಯಾರಾದರೂ ವಿದ್ಯಾವಂತರು/ನಗರವಾಸಿಗಳು/NGO ಗಳು ಸರ್ವೇ, ಸಮಾಜಕಾರ್ಯ, ಬೀದಿ ನಾಟಕ ಇತ್ಯಾದಿ ಎಂದುಕೊಂಡು ಹೋಗಿ ಇಳಿದರೆ ಆ ಊರಿನ ಅಮಾಯಕ ಜನ "ಬನ್ನಿ ಸಾರ್, ಬನ್ನಿ ಮೇಡಂ... ಏನ್ ಆಗ್ಬೇಕು ನಮ್ಮಿಂದ ಹೇಳಿ" ಎನ್ನುತ್ತಾ ಪರಮ ಉತ್ಸಾಹ ತೋರುತ್ತಾರೆ. ಅವರ ಸತ್ಕಾರಕ್ಕೆ ಮುಂದಾಗುತ್ತಾರೆ. ಎಷ್ಟೇ ನಾಜೂಕಿನ ಹಳ್ಳಿಯಾಗಲಿ ಇಂತಹ ಒಂದಿಬ್ಬರು ವ್ಯಕ್ತಿಗಳಾದರೂ ಇದ್ದೇ ಇರುತ್ತಾರೆ.

ನಕ್ಸಲ್ ಸಿದ್ಧಾಂತವನ್ನು ಇಷ್ಟಪಟ್ಟೇ, ಒಪ್ಪಿಕೊಂಡೇ ವಿಠಲ ಅವರೊಂದಿಗೆ ಓಡಾಡಿದ್ದ, ಅವರನ್ನು ಮನೆಗೆ ಆಹ್ವಾನಿಸಿದ್ದ ಎಂದು ಹೇಳಲಾಗದು. ಹೆದರಿಕೆಯಿಂದಲೇ ಹಾಗೇ ಮಾಡಿರಬಹುದು. ನಕ್ಸಲರ ಭಾಷಣಗಳನ್ನು ಕೇಳಿಸಿಕೊಂಡದ್ದೇ ಅಪರಾಧ ಎನ್ನುವುದಾದರೆ, ಮೊನ್ನೆ ಪುತ್ತೂರಿನಲ್ಲಿ ಕಲ್ಲಡ್ಕನ ಭಾಷಣ ಕೇಳಿಸಿಕೊಂಡವರನ್ನೆಲ್ಲಾ ಜೈಲಿನಲ್ಲಿಡಬೇಕಾಗಿತ್ತಲ್ಲವೇ?

'ಒಬ್ಬನನ್ನು ಸಂಪೂರ್ಣ ಸೋಲಿಸಿಬಿಡುವುದಕ್ಕಿಂತ ಅವನ ಹೃದಯ ಗೆಲ್ಲುವುದು ಹೆಚ್ಚು ಬಾಳ್ವಿಕೆ ಬರುವುದು' ಎಂಬ ಮಾತಿದೆ. ವಿಠಲನನ್ನು ಸಂಪೂರ್ಣ ನಿರ್ನಾಮ ಮಾಡುವ ಮುನ್ನ ಪೊಲೀಸರು ಇದನ್ನು ಗ್ರಹಿಸಬೇಕು. ಈಗ ಸದ್ಯ ಅವನ ಹೃದಯವನ್ನು ನಕ್ಸಲರು ಗೆದ್ದಿರುವ ಹಾಗಿದೆ. ಇನ್ನೇನು ನಕ್ಸಲ್ ಆಗುವಷ್ಟರಲ್ಲಿ ಅವನನ್ನು ಬಂಧಿಸಿರುವುದು ನಿಜವೇ ಆದರೆ ಅದು ಪೊಲೀಸರ ಅಭಿನಂದನಾರ್ಹ ಸಾಧನೆಯೇ ಸರಿ. ನಕ್ಸಲರ ವಿರುದ್ಧ ಅದು ಅರ್ಧ ಯಶಸ್ಸು. ಆದರೆ ಅವರು ಸಂಪೂರ್ಣ ಯಶಸ್ವಿಯಾಗಲು ಬಿಡದೆ ಆ ಪ್ರೀತಿಯುದ್ಧವನ್ನು ಪೊಲೀಸರು ಪೂರ್ತಿ ಗೆಲ್ಲಬೇಕು. ಅದಕ್ಕಾಗಿ ಈ ಹುಡುಗ ತಕ್ಷಣಕ್ಕೆ ತರಗತಿಗೆ ಹಾಜರಾಗಲು ಅವಕಾಶ ಮಾಡಬೇಕು. ಈ ಸಾರಿ ವಿಠಲ ಮುಖ್ಯ ಪರೀಕ್ಷೆ ಬರೆಯದಿದ್ದರೆ ದ್ವಿತೀಯ ವರ್ಷಕ್ಕೆ ಹೋಗುವಂತಿಲ್ಲ, ಪ್ರಥಮ ವರ್ಷಕ್ಕೆ ಹೊಸದಾಗಿ ಪ್ರವೇಶ ಪರೀಕ್ಷೆ ಬರೆದು ಉತ್ತೀರ್ಣನಾಗಬೇಕು. ಹೊಸದಾಗಿ ಶುಲ್ಕ ಕಟ್ಟಬೇಕು. ಇಷ್ಟೆಲ್ಲಾ ಆಗುವಾಗ ಅವನಿಗೆ ಉನ್ನತ ಶಿಕ್ಷಣವೇ ಬೇಡ ಕಾಡಿನಲ್ಲಿ ನಕ್ಸಲ್ ಚಟುವಟಿಕೆಯೇ ಸರಿ ಎನಿಸಿ ಬಿಡಬಹುದು. ಇಲ್ಲಿನ ಐರನಿ ನೋಡಿ: ಕಾಡಿನಲ್ಲಿ ಸಂಪರ್ಕದಲ್ಲಿದ್ದವನಿಗೆ ವಿಶ್ವವಿದ್ಯಾಲಯದ ಮೆಟ್ಟಿಲು ಹತ್ತಲು ಅಡ್ಡಿಯಾಗಲಿಲ್ಲ, ಆದರೆ ಊರಿನ ಪೊಲೀಸರಿಂದ ಆಗಿದೆ.

ಜೈಲಿನಲ್ಲಿರುವ ಕೈದಿಗಳಿಗೆ ಉನ್ನತ ಶಿಕ್ಷಣಕ್ಕೆ ಅವಕಾಶವಿದೆ. ಈಗ ಇನ್ನೂ ಆರೋಪಗಳು ಸಾಬೀತಾಗದ ಒಬ್ಬ ಬಡ ಪರಿಶಿಷ್ಟ ಪಂಗಡದ ಹುಡುಗನಿಗೆ ಅಂತಹ ಅನುಕೂಲವನ್ನು ಯಾಕೆ ನಿರಾಕರಿಸ ಬೇಕು? ವಿಠಲನಿಗೆ ತರಗತಿ ತಪ್ಪಿಸುವುದು ಅವನ Right to lifeನ ಸ್ಪಷ್ಟ ಉಲ್ಲಂಘನೆಯಾಗುತ್ತದೆ. ವಿಠಲನ ಬಂಧನ ಮತ್ತು ತನಿಖೆಯನ್ನು ಮುಂದುವರೆಸಿಕೊಂಡೇ ತರಗತಿಗೆ ಹೋಗಲು ಅವಕಾಶ ಮಾಡಕೊಡ ಬಹುದಲ್ಲವೇ? ಬಲವಾದ ಭದ್ರತೆಯೊಂದಿಗೆ ಅವನನ್ನು ಕ್ಲಾಸಿಗೆ ಕಳುಹಿಸಿ. ಅಷ್ಟೆಲ್ಲಾ ಖರ್ಚು ಮಾಡಲು ಸಾಧ್ಯವಿದೆ. ನಕ್ಸಲರ ಪ್ಯಾಕೇಜ್ ಸರಿಯಾಗಿ ಖರ್ಚಾಗದೆ ಉಳಿದಿರುವ ಮಾತಿದೆ.

ನಕ್ಸಲರಿಗೆ ಶರಣಾಗತಿ ಮತ್ತು ಪುನರ್ವಸತಿಯ ಬಗ್ಗೆ ಕೇಂದ್ರ ಸರ್ಕಾರ ಹೇಳುತ್ತಿದೆ. ರಾಜ್ಯ ಸರ್ಕಾರ ಅದನ್ನು ನಿನ್ನೆ ಒತ್ತಿ ಹೇಳಿದೆ. ಮಾನ್ಯ ಡಿ.ಜಿ.ಪಿ (ಈಗ ಮಾಜಿ) ಶಂಕರ ಬಿದರಿಯವರು "ನಿಮ್ಮ ಬಗ್ಗೆ ಸರ್ಕಾರ ಹಾಗೂ ಮುಖ್ಯ ಮಂತ್ರಿಗಳು ಸಹಾನುಭೂತಿ ಹೊಂದಿದ್ದಾರೆ" ಎಂದಿದ್ದಾರೆ" (ದಿ.31.03.2012ರ ಉದಯವಾಣಿ ಮುಖಪುಟ ಸುದ್ದಿ) ಈ ವಿಠಲ ಸ್ನಾತಕೋತ್ತರ ಕೋರ್ಸಿಗೆ ಸೇರಿ ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳುತ್ತಿದ್ದಾಗ ಅವನನ್ನು ಹಿಡಿದು ಜೈಲಿನಲ್ಲಿಡುವುದು ಯಾವ ನ್ಯಾಯ? ವಸತಿಯನ್ನೇ ಕಟ್ಟಿಕೊಳ್ಳಲು ಬಿಡದೆ ಪುನರ್ವಸತಿಯ ಮಾತನಾಡುವುದು ಎಷ್ಟು ಸರಿ?

ಪೊಲೀಸರು ಸರಿಯಾಗದೆ ಈ ದೇಶ ಸರಿಯಾಗುವುದಿಲ್ಲ, ಇಲ್ಲಿನ ದಲಿತರ ಮಹಿಳೆಯರ ಮೇಲಿನ ದೌರ್ಜನ್ಯ ಕೋಮುವಾದ, ಆದಿವಾಸಿಗಳ ನಕ್ಸಲ್ ಆಕರ್ಷಣೆ ಇತ್ಯಾದಿ ಗಳೆಲ್ಲಕ್ಕೂ ಪೊಲೀಸರು ಹೊಣೆ ಎಂದು ಹೇಳುವ ನೂರಾರು ವರದಿಗಳು/ಲೇಖನಗಳು ಬಂದಿವೆ. ಈ ಪೊಲೀಸ್ ನಡತೆಯನ್ನು PM, CM ಗಳೇ ಸುಧಾರಿಸಬೇಕು ಎಂದರೆ ಆಗುವುದಿಲ್ಲ, ಸಣ್ಣಮಟ್ಟ ಅಧಿಕಾರಿಗಳು ಸಹ Catalyst ಗಳಾಗಿ ಕೆಲಸ ಮಾಡಬೇಕು. ಐ.ಜಿ.ಪಿ.ಯವರು ಸಣ್ಣ ಅಧಿಕಾರಿಯೇನಲ್ಲ, ಅವರು ಮುಖ್ಯ ಮಂತ್ರಿ- ಗೃಹಮಂತ್ರಿ ಗಳೊಡನೆ ಚರ್ಚಿಸಬಹುದಾಗಿದೆ. ಆ ಮೂಲಕ ನಮ್ಮ ಪೊಲೀಸ್ ವ್ಯವಸ್ಥೆಯನ್ನು ನಾಗರಿಕಗೊಳಿ ಸುವ ಚಾರಿತ್ರಿಕ ಪ್ರಕ್ರಿಯೆಗೆ ಚಾಲನೆ ನೀಡಬಹುದಾಗಿದೆ. ಪ್ರತಾಪ್ ರೆಡ್ಡಿಯವರ ಸಾಹಸಮಯ ವೃತ್ತಿಜೀವನದ ಬಗ್ಗೆ ಕೇಳಿದ್ದೇನೆ. ಆದರೆ ಅವರಿಗೆ ಕಿರಣ್ ಬೇಡಿ, ಶ್ರೀಕುಮಾರ್, ಸಂಜೀವ್ ಭಟ್ ಮುಂತಾದವರಿಗೆ ಸಿಕ್ಕ ಪ್ರಚಾರ ಸಿಕ್ಕಲಿಲ್ಲ. ಇವರಿಗಿಂತಲೂ ತಾವು ಕಡಿಮೆಯಲ್ಲ ಎಂಬುದನ್ನು ಸಾಬೀತು ಪಡಿಸುವುದು ಈ ವಿಠಲನ ಪ್ರಕರಣದಲ್ಲಿ ಸಾಧ್ಯವಿದೆ.

ದಯವಿಟ್ಟು ವಿಠಲನನ್ನು ಕ್ಲಾಸಿಗೆ ಹಾಜರಾಗಲು ಬಿಡಿ ಮತ್ತು ಅವನು ಅಪರಾಧಿ ಎಂದು ಸಾಬೀತಾದ ನಂತರ ಅವನನ್ನು ಶಿಕ್ಷಿಸಬಹುದು.

• ಎಂ.ಪಿ.ಉಮೇಶ್ ಚಂದ್ರ

▶6


ಹೆಗಡೆಯ ಮಾರ್ಫಿಂಗ್ ಮಸಲತ್ತು!

...ಹಾಗೆ ನೋಡಿದರೆ ಶಾಸಕನೊಬ್ಬ ಅಂಗೈ ಅಗಲದ ...ದ ಸಮಸ್ಯೆ ಅರಿಯಲು ಅಥವಾ ನೀರಾವರಿ ಯೋಜನೆ ... ಒತ್ತಾಯಿಸಲು ಪಾದಯಾತ್ರೆ ಹೊರಡುತ್ತಾನೆಂದು ...ಕೋದೋ ಹೊಣಗೇಡಿತನದ ಪರಮಾವಧಿ, ಅಷ್ಟೇ ... ನಾಚಿಕೆಗೇಡು ಕೂಡ. ಈ ಎರಡೂ ತಾಲ್ಲೂಕುಗಳ ...ಕು-ಬೇಡಗಳೆಲ್ಲ ಸುನಿಲ್‌ಗೆ ಗೊತ್ತಿರುವಂಥದ್ದೇ. ನಾಲ್ಕು ...ದ ಹಿಂದೆ ಎಮ್ಮೆಲ್ಲೆಗಿರಿಗೆ ಸ್ಪರ್ಧಿಸಿದಾಗ ಸುನಿಲ್‌ಗೆ ...ಯಿಂದಾ-ಹಳಿಯಾಳದ ಸುಖ-ದುಃಖ ಗೊತ್ತಾಗಿದೆ. ...ಗಿರುವಾಗ ಆತ ಪಾದಯಾತ್ರೆ ಮಾಡುವ ಅವಶ್ಯಕತೆಯೇ ...ಲ್ಲ, ಆದರೆ ಯಾವ ಗಳಿಗೆಯಲ್ಲಾದರೂ ಬರಬಹುದಾದ ...ಬ್ಬಿ ಎಲೆಕ್ಷನ್ ತಡಕವಾದರೂ ಕ್ಷೇತ್ರದ ಮತದಾರರ ...ರಿಟ್ಟುಕೊಂಡಿರಲು ಮಾಡಬಾರದ ಗಿಮಿಕ್ ಎಲ್ಲ ...ಡುತ್ತಿದ್ದಾರೆ. ಈ ವರ್ಷದ ಆರಂಭದಲ್ಲಿ ತನ್ನ ಸಾಧನೆ ...ದ ಕ್ಯಾಲೆಂಡರ್ ಒಂದನ್ನು ಸುನಿಲ್ ಜನರಿಗೆ ಹಂಚಿದ್ದಾರೆ.

... ಈ ಕ್ಯಾಲೆಂಡರ್‌ನಲ್ಲಿ ಬುದ್ಧಿಪೂರ್ವಕವಾಗೇ ಒಂದು ...ಸಲ್ ಗಿಮಿಕ್ ಮಾಡಲಾಗಿದೆ. ಹಳಿಯಾಳಕ್ಕೆ ಬೇಕಾದ ...ವರಿ ಯೋಜನೆಯ ನೀಲನಕ್ಷೆಯನ್ನು, ಮಾಜಿ ...-ಜೆಡಿಎಸ್ ದಾಸ ಕುಮಾರಸ್ವಾಮಿಗೆ ತೋರಿಸುತ್ತಿರುವ ...ಟೋ ಒಂದನ್ನು ಅಚ್ಚಿಸಲಾಗಿದೆ. ವಾಸ್ತವವಾಗಿ ಅಂಥದೊಂದು ಸಂದರ್ಭವೇ ಬಂದಿರಲಿಲ್ಲ, ಬದಲಿಗೆ ಆ ಬ್ಲೂಪ್ರಿಂಟ್ ಅಂದು ಸಿಎಂ ಆಗಿದ್ದ ಯಡ್ಡಿಗೆ ಸುನಿಲ್-ವೀಡಿ ಜೋಡಿ ಜೆಡಿಎಸ್ ನಿಯೋಗದೊಂದಿಗೆ ಹೋಗಿ ಅರ್ಪಿಸಿ ಬಂದಿತ್ತು. ಇದಾಗಿದ್ದು 2009 ರಲ್ಲಿ.

ಈ ಫೋಟೋ ಸುನಿಲ್ ಹೆಗಡೆಯ 2012 ರ ಕ್ಯಾಲೆಂಡರ್‌ನಲ್ಲಿ ಎಲ್ಲಿಯೂ ಇಲ್ಲ. ವರ್ಚಸ್ಸು ಕಳೆದುಕೊಂಡು ಮಾಜಿ ಸಿಎಂ ಆಗಿರುವ, ಜೈಲಿಗೂ ಹೋಗಿ ಬಂದು ಅಧಿಕಾರಕ್ಕಾಗಿ ಹಪಹಪಿಸುತ್ತಿರುವ, ಎಲ್ಲಕ್ಕಿಂತ ಹೆಚ್ಚಾಗಿ ಜೆಡಿಎಸ್ ಸುಪ್ರಿಮೋಗಳಾದ ಮಣ್ಣಿನ ಮಗ-ಮೊಮ್ಮಗನ ಆಜನ್ಮ ವೈರಿಯಾದ ಯಡ್ಡಿಯೊಂದಿಗೆ ತಾನಿರುವ ಫೋಟೋ ಕ್ಯಾಲೆಂಡರ್‌ನಲ್ಲಿ ಪ್ರಿಂಟಾದರೆ 'ಎಡವಟ್ಟು' ಆದೀತೆಂಬ ಆತಂಕದಿಂದ ಸುನಿಲ್ ತಂತ್ರಗಾರಿಕೆ ಮಾಡಿದ್ದಾರೆ. ಆದರೆ ತಾನು ಕಾಳಿ ನೀರಾವರಿ ಪ್ರಾಜೆಕ್ಟ್‌ಗಾಗಿ ಸಾಹಸ ಮಾಡಿದ್ದೇನೆಂದು ರೈತರಿಗೆ ಕ್ಯಾಲೆಂಡರ್‌ನಲ್ಲಿ ತೋರಿಸುವ ಜರೂರತ್ತು ಸುನಿಲ್‌ಗೆ ಇತ್ತು.

ಆಗ ಆತ ಮಾರ್ಫಿಂಗ್ ಮಸಲತ್ತಿನ ಮೊರೆ ಹೊಕ್ಕಿದ್ದಾರೆ. ಯಡ್ಡಿಗೆ ನೀರಾವರಿ ನೀಲನಕ್ಷೆ ತೋರಿಸುತ್ತಿರುವ ಫೋಟೋ ನಕಲಿ ಮಾಡಲು ತಲೆ ಓಡಿಸಿದ್ದಾರೆ. ಆ



ಫೋಟೋದಲ್ಲಿದ್ದ ಯಡ್ಡಿಯ ರುಂಡವನ್ನೇ ಮಾರ್ಫಿಂಗ್ ಮೂಲಕ ಹಾರಿಸಿ ಅಲ್ಲಿ ಜೆಡಿಎಸ್ ಯಜಮಾನ ಕುಮಾರಸ್ವಾಮಿಯ ಮೂತಿ ಜೋಡಿಸಿದ್ದಾನೆ. ಅಂಥದೊಂದು ಕ್ರಿಮಿನಲ್ ಮಾರ್ಫಿಂಗ್ ಫೋಟೋ ಸೃಷ್ಟಿಸಿ ಕ್ಯಾಲೆಂಡರ್‌ನಲ್ಲಿ ಅಚ್ಚಿಸಿದ್ದಾರೆ ದಿ ಗ್ರೇಟ್ ಸುನಿಲ್ ಹೆಗಡೆ. ಇದರಿಂದ ಸುನಿಲ್ ಹೆಗಡೆಯ ಎರಡೆರಡು ಉದ್ದೇಶ ಒಂದೇ ಏಟಿಗೆ ಈಡೇರಿದೆ. ಒಂದು, ಯಡ್ಡಿ ಅವೈಡ್ ಮಾಡಿದಂತೂ ಆಯ್ತು, ಸ್ವ-ಪಕ್ಷದ ಸರದಾರರನ್ನು ಸಂಪ್ರೀತಗೊಳಿಸಿದ ಹಾಗೂ ಆಯ್ತು, ಇನ್ನೊಂದು, ರೈತರಿಗೆ ತಾನು ನೀರಾವರಿ ಯೋಜನೆಗಾಗಿ ಬೆವರಿಳಿಸಿದ್ದೇನೆಂದು ತೋರಿಕೊಂಡಂತೂ ಆಯ್ತು, ಹೇಗಿದೆ ಶಾಸಕನಂಥ ದೊಡ್ಡವನ ಸಣ್ಣತನ?!

ಈ ಫೋಟೋ ಮಾರ್ಫಿಂಗ್‌ನಲ್ಲಿ ಮಾಜಿ ಒಂ... ಸುನಿಲ್ ಹೆಗಡೆ, ವಿ.ಡಿ. ಹೆಗಡೆ, ಬಸವರಾಜ ಹೊರಟ್ಟಿಯ ಜೆಡಿಎಸ್ ನಿಯೋಗ ಸಿಎಂ ಯಡ್ಡಿ ಮಹಾತ್ಮನ ಬಳಿ ಹೋದಾಗ ಅಲ್ಲಿ ನೀರಾವರಿ ಮಂತ್ರಿ ಬೊಮ್ಮಾಯಿ ಇದ್ದರು. ಆ ಫೋಟೋದ ಯಡ್ಡಿ ಮುಖಕ್ಕೆ ಕುಮಾರಸ್ವಾಮಿ ಮುಸುಡು ಜೋಡಿಸಿದಾಗ ಭರ್ಜರಿ ಅಭಾಸ ಒಂದಾಗಿದೆ. ಮಾಜಿ ಸಿಎಂ ಕುಮಾರಸ್ವಾಮಿಯೇ ಬಿಜೆಪಿ ಮಂತ್ರಿ ಬಸವರಾಜ ಬೊಮ್ಮಾಯಿ ಬಳಿ ಸುನಿಲ್ ಹೆಗಡೆ-ವಿ.ಡಿ. ಹೆಗಡೆ ವಗೈರೆಗಳ ಜೆಡಿಎಸ್ ನಿಯೋಗ ಕರೆದುಕೊಂಡಂತೆ ಭಾಸವಾಗುತ್ತದೆ. ಇದರಿಂದ ಕುಮಾರಸ್ವಾಮಿ ಕಮ್ಮತ್ತೇ ಕಮ್ಮಿಯಾಗಿದೆ. ಇದು ಕಳ್ಳನ ಅಚಾತುರ್ಯದಂತಿದೆ, ಅಲ್ಲವಾ?

ಸುನಿಲ್ ಹೆಗಡೆ-ವಿ.ಡಿ. ಹೆಗಡೆಗಳ ನೀರು ಹೋರಾಟದ ನಖರಾ ಈಗ ದೊಡ್ಡ ವಿವಾದ ಸೃಷ್ಟಿಸಿಬಿಟ್ಟಿದೆ. ಆತ ನೈತಿಕ ಹೊಣೆಗಾರಿಕೆಯಿಂದ ತಕ್ಷಣ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುವಂತೆ ವಿವಿಧ ಸಂಘಟನೆಗಳು ಬೀದಿಗಿಳಿವ ಸಿದ್ಧತೆಯಲ್ಲಿವೆ. ಮಾರ್ಫಿಂಗ್ ಹವಾಲ ಬಯಲು ಮಾಡಿದ ಕಾರವಾರದ 'ಜನಶಕ್ತಿ ವೇದಿಕೆ'ಯ ಅಧ್ಯಕ್ಷ ಮಾಧವ ನಾಯ್ಕರಂತೂ ಸುನಿಲ್ ರಾಜೀನಾಮೆ ಕೊಡದಿದ್ದರೆ ಪೊಲೀಸ್ ಕೇಸ್ ಮಾಡುವ ತಯಾರಿ ನಡೆಸಿದ್ದಾರೆ. ಒಟ್ಟಿನಲ್ಲಿ ಏನೋ ಮಾಡಲು ಹೋಗಿ ಇನ್ನೇನೋ ಮಾಡಿಕೊಂಡು ಹೆಗಡೆ ... ಹೆಗಡೆ ಸಿಕ್ಕಿ ಒದ್ದಾಡುತ್ತಿದ್ದಾರೆ. ❖

ಕನ್ನಡ ಸಾಹಿತ್ಯ ಪರಿಷತ್ ಚುನಾವಣೆ

ನನ್ನ ಕನಸಿನ ಕಸಾಪ



ಅಭ್ಯರ್ಥಿಗಳ ಅನಿಸಿಕೆ

'ಲಂಕೇಶ್' ನ ಈ ಪ್ರಯತ್ನಕ್ಕೆ ಕಸಾಪ ಹಾಗೂ ಸಾಹಿತ್ಯ ವಲಯದಿಂದ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ. ನಾವು ಕೇಳಿದ್ದ ಪ್ರಶ್ನೆಗಳಿಗೆ ಅಭ್ಯರ್ಥಿಗಳಾದ ಚಂಪಾ ಹಾಗೂ ಪುಂಡಲೀಕ ಹಾಲಂಬಿ ಈ ಬಾರಿ ಉತ್ತರಿಸಿದ್ದಾರೆ.


ನಮ್ಮ ಪ್ರಶ್ನೆಗಳು

1. ಕಸಾಪ ಬದಲಾಗಬೇಕು ಅನಿಸುತ್ತಿದೆಯೇ? ಯಾವ ರೀತಿ?
2. ನಿಮ್ಮ ಪ್ರಕಾರ ಕನ್ನಡ ಎದುರಿಸುತ್ತಿರುವ ಮತ್ತು ಕನ್ನಡ ಸಾಹಿತ್ಯ ಎದುರಿಸುತ್ತಿರುವ ಸಮಸ್ಯೆಗಳೇನು?
3. ಕಸಾಪದೊಳಗೆ ಜಾತಿವಾದ ಬೆಳೆಯುತ್ತಿರುವುದು ಕೆಟ್ಟ ಪ್ರವೃತ್ತಿ ಅಲ್ಲವೆ? ಅದನ್ನು ಹೇಗೆ ನಿವಾರಿಸುತ್ತೀರಿ.
4. ಮಠಾಧೀಶರು, ರಾಜಕಾರಣಿಗಳನ್ನು ಅನಗತ್ಯವಾಗಿ ಸಮ್ಮೇಳನಗಳಲ್ಲಿ ಮೆರೆಸುವ ಪ್ರವೃತ್ತಿಯನ್ನು ನೀವು ನಿಲ್ಲಿಸುತ್ತೀರಾ?
5. ಕನ್ನಡದ ಓದು ಪ್ರಸ್ತುತವಾಗಲು, ವಿಸ್ತಾರಗೊಳ್ಳಲು ಉಳಿದುಕೊಳ್ಳಲು ನಿಮ್ಮ ಕಾರ್ಯಕ್ರಮಗಳೇನು?
6. ಕೋಮುವಾದ, ಜಾತಿವಾದ, ಶಿಕ್ಷಣ ಕೇಸರೀಕರಣವನ್ನು ನೀವು ವಿರೋಧಿಸುತ್ತೀರಾ?

ಚಂದ್ರಶೇಖರ ಪಾಟೀಲ (ಚಂಪಾ)

೧. ಕಸಾಪ: ಒಂದು ಶತಮಾನ ಪೂರೈಸಿರುವ, ಕನ್ನಡ ಭಾಷಿಕ ಸಮುದಾಯದ ಸಾಹಿತ್ಯಿಕ ಸಂಸ್ಥೆ. ನಿರಂತರವಾಗಿ ಬದಲಾಗುತ್ತ ತನ್ನ ಪ್ರಸ್ತುತತೆಯನ್ನು ಉಳಿಸಿಕೊಂಡಿರುವುದೇ ಅದರ ಹೆಚ್ಚುಗಾರಿಕೆ. ಈಗ ಅದು ಎರಡು ನೆಲೆಯಲ್ಲಿ ಬದಲಾಗಲು ಸಕಾಲ: (ಅ) ನಾಡಿನ ಬಲಾಢ್ಯ ಸಮುದಾಯಗಳ ಹಿಡಿತದಿಂದ ಬಿಡುಗಡೆ ಹೊಂದಿ ಹಿಂದುಳಿದ ವರ್ಗಗಳು, ದಲಿತರು, ಅಲ್ಪಸಂಖ್ಯಾತರು, ಮಹಿಳೆಯರು ಹೆಚ್ಚುಹೆಚ್ಚಾಗಿ ಒಳಗೊಳ್ಳುವಂತಾಗಬೇಕು. (ಬ) ಕುವೆಂಪು ಅವರ 'ಸಾಂಸ್ಕೃತಿಕ ಕರ್ನಾಟಕ'ದ ಪರಿಕಲ್ಪನೆಯಂತೆ, ಎಲ್ಲೆಲ್ಲಿ ಕನ್ನಡಿಗರಿದ್ದಾರೋ-(ಉದಾ: ಅಮೆರಿಕ-ಇಂಗ್ಲೆಂಡ್-ಆಸ್ಟ್ರೇಲಿಯಾ-ನ್ಯೂಜಿಲ್ಯಾಂಡ್, ಅರಬ್‌ರಾಷ್ಟ್ರಗಳು)-ಅಲ್ಲೆಲ್ಲ ಕಸಾಪ ತನ್ನ ತೋಳುಗಳನ್ನು ಚಾಚಬೇಕಾಗಿದೆ. ಈ ಬಗ್ಗೆ ನನ್ನಲ್ಲಿ ನಿರ್ದಿಷ್ಟ ಯೋಜನೆಗಳಿವೆ.

೨. ನವನವೋನ್ಮೇಷ ಶಾಲಿನಿಯಾಗಿರುವ ಕನ್ನಡ ಸಾಹಿತ್ಯ ಈ ಕಾಲಘಟ್ಟದ ಸಮಸ್ಯೆಗಳನ್ನು ಸಮರ್ಥವಾಗಿಯೇ ಎದುರಿಸುತ್ತಿದೆ. ಆದರೆ ಜಾಗತೀಕರಣದ ಪ್ರಬಲ ಅಸ್ತ್ರವಾಗಿರುವ ಇಂಗ್ಲಿಷ್ ಮತ್ತು 'ರಾಷ್ಟ್ರ ಭಾಷೆ' ಎಂಬ ಸುಳ್ಳು ನಾಮಾಂಕಿತದಲ್ಲಿ ಹೇರಲ್ಪಡುತ್ತಿರುವ ಹಿಂದಿ ಸ್ವಲ್ಪ ಆತಂಕ ಸೃಷ್ಟಿಸುತ್ತಿವೆ. ಆಧುನಿಕ ತಂತ್ರಜ್ಞಾನಕ್ಕೆ ಕನ್ನಡ ಇನ್ನೂ ಒಗ್ಗಿಕೊಳ್ಳಬೇಕಾಗಿದೆ. (ಕಸಾಪ ಅಧ್ಯಕ್ಷತೆಯ ನನ್ನ ಮೊದಲ ಅವಧಿಯಲ್ಲಿ ಪ್ರಪ್ರಥಮ ಕನ್ನಡ ಗಣಕ ಸಮ್ಮೇಳನ ಹಮ್ಮಿಕೊಂಡಿದ್ದೆ. ಅದನ್ನು ಮುಂದುವರಿಸುವ ಯೋಚನೆ ಇದೆ.)



೩. ಎಲ್ಲೆಡೆ ಹಬ್ಬುತ್ತಿರುವ ಜಾತಿವಾದ ಮತ್ತು ದುಡ್ಡಿನ ಪ್ರಭಾವ ಕಸಾಪದಲ್ಲೂ ದೊಡ್ಡ ಪ್ರಮಾಣದಲ್ಲಿ ನುಗ್ಗುತ್ತಿದೆ. ಸದ್ಯದ ಚುನಾವಣಾ ಪ್ರಚಾರದಲ್ಲಿ ಬಾಡೂಟ ಸಾಮಾನ್ಯವಾಗುತ್ತಿದೆಯಂತೆ. ನನ್ನ ಸಹಸ್ಪರ್ಧಿಯೊಬ್ಬರು ಬೀದರಿನಲ್ಲಿ ಪತ್ರಕರ್ತರಿಗೆ ಎರಡೆರಡು ವಾಚು-(ಒಂದು ಜೆಂಟ್ಸ್; ಇನ್ನೊಂದು ಲೇಡಿಸ್) ಕೊಟ್ಟರೆಂದು ಸುದ್ದಿ ಕೇಳಿ ನನಗೆ ಗಾಬರಿಯಾಯಿತು. ಇದಕ್ಕೊಂದೇ ಮದ್ದು: ಜಾತಿ ಮುಂದೊಡ್ಡುವವರನ್ನು ನಾವು ಸ್ಪಷ್ಟವಾಗಿ ತಿರಸ್ಕರಿಸಬೇಕು. 'ಮನುಷ್ಯ ಜಾತಿ ತಾನೊಂದೆ ವಲಂ'-ಇದು ಪರಿಷತ್ತಿನ ಧ್ಯೇಯ ವಾಕ್ಯ.

೪. ರಾಜಕಾರಣಿಗಳಿಗೆ ಮಠಾಧೀಶರಿಗೆ ಅನಗತ್ಯ ಪ್ರಾಮುಖ್ಯತೆ ನೀಡುವುದಿಲ್ಲ. ಆದರೆ ಈ ವಲಯದ ತಜ್ಞರಿಗೆ, ವೈಚಾರಿಕ ನೆಲೆಯ ಮುತ್ಸದ್ದಿಗಳಿಗೆ, ಸೃಜನಶೀಲರಿಗೆ ನಮ್ಮ ಗೋಷ್ಠಿಗಳಲ್ಲಿ ಧಾರಾಳ ಅವಕಾಶವಿದೆ. ರಾಜಕಾರಣ ಮತ್ತು ಧರ್ಮಕಾರಣ ಈ ನೆಲೆಗಳ ಮಹಾನುಭಾವರಿಗೆ ವೇದಿಕೆಗಳಲ್ಲಿ ಅನಗತ್ಯದ ಸ್ಥಾನವನ್ನು ನೀಡುವುದಿಲ್ಲ. (ನಾನು ಅಧ್ಯಕ್ಷನಾಗಿ ಆಯ್ಕೆಯಾದರೆ ಇದನ್ನು ಸಾಧಿಸಿ ತೋರಿಸುವೆ)


೫. ಇವತ್ತಿನ ಕಂಪ್ಯೂಟರ್ ಯುಗದಲ್ಲಿ ಅರಿವನ್ನು, ಜ್ಞಾನವನ್ನು ಗಳಿಸುವ ಮಾರ್ಗಗಳು ವಿಪುಲವಾಗಿವೆ. ಅವುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಅದಕ್ಕೆ ಬಹುಜನ ಸಮುದಾಯಕ್ಕೆ 'ಓದು' (ವಾಚನ)- ಅಂದರೆ ಅಕ್ಷರ ಮಾಧ್ಯಮವೇ. ಈ ನಿಟ್ಟಿನಲ್ಲಿ ಕಸಾಪದ ಪುಸ್ತಕ ಪ್ರಕಟಣೆಯ ಅಂಗವಾಗಿ 'ಪ್ರಸಾರಾಂಗ'ವನ್ನು ಸ್ಥಾಪಿಸುವ ಯೋಚನೆ ನನ್ನದು. ವಿವಿಧ ವಿಷಯಗಳ ಬಗ್ಗೆ ತಜ್ಞರಿಂದ ಸರಳ ಶೈಲಿಯಲ್ಲಿ ಬರೆಯಿಸಿ, ಸುಲಭ ಬೆಲೆಯಲ್ಲಿ ಕನ್ನಡಿಗರಿಗೆ ತಲುಪಿಸುವುದು; 'ಪುಸ್ತಕ ಸಂತೆ'ಯ ಪರಿಕಲ್ಪನೆಯನ್ನು ಜಿಲ್ಲಾ-ತಾಲ್ಲೂಕು-ಹೋಬಳಿ ಮಟ್ಟಕ್ಕೂ ವಿಸ್ತರಿಸುವ ಕನಸು ನನ್ನದು. (ಈ ದಿಸೆಯಲ್ಲಿ ನಾನು ಮಾಡಿದ ಯಶಸ್ವೀ ಪ್ರಯೋಗ ನಾಡಿನ ಜನತೆಗೆ ಗೊತ್ತು)

೬. ಕೋಮುವಾದ, ಜಾತಿವಾದ, ಶಿಕ್ಷಣದ ಕೇಸರೀಕರಣ- ಇವುಗಳ ವಿರುದ್ಧ ಕಳೆದ ಐದು ದಶಕಗಳಿಂದ ಹೋರಾಡುತ್ತಾ ಬಂದಿರುವವ ನಾನು. ಕಸಾಪ ಅಧ್ಯಕ್ಷತೆ ಈ ಹೋರಾಟಕ್ಕೆ ಒಂದು ದೊಡ್ಡ ವೇದಿಕೆ ಒದಗಿಸೀತು ಎಂಬ ನಿರೀಕ್ಷೆ ಇದೆ. ಎಲ್ಲ ಜನಪರ ಆಂದೋಲನಗಳಿಗೆ ಪೂರಕವಾಗಿ ಕಸಾಪ ಇರಲೆಂಬುದೇ ನನ್ನ ಸ್ಪಷ್ಟ ನಿಲುವಾಗಿದೆ. ಸಮಷ್ಟಿ ಶಕ್ತಿಯಾಗಿ ಕನ್ನಡ ರೂಪುಗೊಳ್ಳಬೇಕಾಗಿದೆ. ಅಂತೆಯೇ ನನ್ನ ಕರೆ: ಕನ್ನಡ ಕನ್ನಡ ಬರ್‍ರಿ ನಮ್ಮ ಸಂಗಡ.

ಪುಂಡಲೀಕ ಹಾಲಂಬಿ

1. 97 ವರ್ಷದ ಇತಿಹಾಸ ಹೊಂದಿರುವ ಕನ್ನಡ ಸಾಹಿತ್ಯ ಪರಿಷತ್ತು ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಕನ್ನಡಿಗರ ಆಶೋತ್ತರಗಳನ್ನು ಪ್ರತಿನಿಧಿಸುವ ಸಂಸ್ಥೆ. ಇಲ್ಲಿಯವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಗಾಂಭೀರ್ಯದ ನಡೆ ಮುಂದುವರೆಯುತ್ತಾ, ಬದಲಾದ ಕಾಲಕ್ಕೆ ಅನುಗುಣವಾಗಿ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಧ್ಯೇಯ ಧೋರಣೆಯನ್ನು ಹೊಂದಬೇಕಾಗಿದೆ. ಕನ್ನಡದ ಭಾಷೆಯ ಬೆಳವಣಿಗೆಗೆ ಪೂರಕವಾಗಿ ಕೆಲಸ ಮಾಡಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಮುಂದುವರೆಯುತ್ತಾ ಕನ್ನಡಿಗನ ಬದುಕನ್ನು ಕೂಡ ಪ್ರತಿನಿಧಿಸುವಂತಹ ಸಂಸ್ಥೆಯಾಗಬೇಕು. ಭಾಷೆ ಮತ್ತು ಬದುಕು ಬೇರೆಯಲ್ಲ. ಈ ನಿಟ್ಟಿನಲ್ಲಿ ಪರಿಷತ್ತು ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳಬೇಕು.

2. ಕನ್ನಡ ಭಾಷೆ ನಾಶದ ಅಂಚನ್ನು ಮುಟ್ಟುತ್ತಿದೆ ಎನ್ನುವ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ತಮ್ಮ ಬದುಕನ್ನು ಕಟ್ಟಲು ಆಂಗ್ಲ ಭಾಷೆಗೆ ಶರಣಾಗುತ್ತಿದ್ದಾರೆಯೇ ಹೊರತು ಕನ್ನಡದ ಮೇಲಿನ ಅಸಡ್ಡೆಯಿಂದಲ್ಲ. ಕನ್ನಡ ಭಾಷೆಯನ್ನು ನಮ್ಮ ದಿನನಿತ್ಯದ ವ್ಯವಹಾರದಲ್ಲಿ ಸಂಬಂಧವಾಚಕಗಳಲ್ಲಿ ಉಳಿಸಿಕೊಳ್ಳದಿದ್ದರೆ ಕನ್ನಡಕ್ಕೆ ಅಪಾಯ ಖಂಡಿತ. ಸದ್ಯದಲ್ಲಿ ನಗರ ಪ್ರದೇಶದಲ್ಲಿ ಕನ್ನಡ ಈ ಸಮಸ್ಯೆಯನ್ನು ಎದುರಿಸುತ್ತಿದೆ. ಶಿಕ್ಷಣ ಮಾಧ್ಯಮಕ್ಕೂ, ವ್ಯವಹಾರಕ್ಕೂ ಬಳಸುವ ಭಾಷೆಗೂ ವ್ಯತ್ಯಾಸ ಇರಬೇಕು. ಕನ್ನಡ ಉಳಿಸಿಕೊಂಡು, ಬೆಳೆಸುವ ನಿಟ್ಟಿನಲ್ಲಿ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆ ಶ್ರದ್ಧೆಯಿಂದ ಕೆಲಸ ಮಾಡಬೇಕು.



ಕನ್ನಡ ಸಾಹಿತ್ಯ ಈ ಕಾಲಘಟ್ಟದಲ್ಲಿ ಸಮೃದ್ಧವಾಗಿ ಬೆಳೆದಿದೆ. ಮುದ್ರಣವೆ ಮೊದಲಾದ ಪ್ರಕಟಣೆಗೆ ಅಗತ್ಯವಾದ ಸಂಗತಿಗಳು ವೈಜ್ಞಾನಿಕವಾಗಿ ಬಹಳಷ್ಟು ಪೂರಕವಾಗಿ ಕೆಲಸ ಮಾಡುತ್ತಿವೆ. ಸಾಹಿತ್ಯದ ದೊಡ್ಡ ಸಮಸ್ಯೆ ಬರೆದವರೆಲ್ಲರೂ ಕವಿಗಳೆಂದು ಬರಹಗಾರರೆಂದು ಪರಿಭಾವಿಸಿ ತಮ್ಮ ಸಾಹಿತ್ಯ ಕೃಷಿಯಲ್ಲಿ ಸುಧಾರಣೆ ಮಾಡಿಕೊಳ್ಳದೆ ಹೋಗುತ್ತಿರುವುದು. ಜಗತ್ತಿನ ಎಲ್ಲಾ ಭಾಷೆಗಳಲ್ಲಿ ಬಂದಿರುವ ಪ್ರಮಾಣದಲ್ಲಿ ಅತ್ಯಂತ ಶ್ರೀಮಂತವಾದ ಸಾಹಿತ್ಯ ಕನ್ನಡ ಸಾಹಿತ್ಯದಲ್ಲಿದೆ, ಯುವ ಸಾಹಿತಿಗಳಿಗೆ ಸರಿಯಾದ ಮಾರ್ಗದರ್ಶನದಿಂದ ಸಾಹಿತ್ಯ ಸೃಷ್ಟಿಯ ಲೋಪಗಳನ್ನು ಸರಿಪಡಿಸಬಹುದು.

3. ಜಾತಿವಾದ ಕಸಾಪದೊಳಗೆ ಮಾತ್ರವಲ್ಲ, ಎಲ್ಲಿ ಬಂದರೂ ಕೆಟ್ಟ ಪ್ರವೃತ್ತಿ ರಾಜಕೀಯ ಕ್ಷೇತ್ರದ ರಾಜಕಾರಣಿಗಳು ತಮ್ಮ ಬೆಳೆಯನ್ನು ಬೇಯಿಸಿಕೊಳ್ಳಲು ಬಿತ್ತಿದ ಈ ಜಾತೀಯತೆಯ ವಿಷಬೀಜ ಈ ರಾಷ್ಟ್ರದ ಎಲ್ಲಾ ಕ್ಷೇತ್ರಗಳಲ್ಲಿ ಹೆಮ್ಮರವಾಗಿ ಬೆಳೆದಿದೆ. ಕಸಾಪದಂತಹ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆಯಲ್ಲೂ ತನ್ನ ಕಬಂಧಬಾಹುಗಳನ್ನು ಚಾಚಲು ಪ್ರಾರಂಭಿಸಿದೆ. " ಮನುಷ್ಯ ಜಾತಿ ತಾನೊಂದೆ ವಲಂ" ಎನ್ನುವ ನಾಮ ಫಲಕದ ಮುಖ್ಯದ್ವಾರದ ಒಳಗೆ ಪ್ರವೇಶಿಸಿದ ಕನ್ನಡಿಗೆ ಈ ಜಾತಿಯ ವಿಷವರ್ತುಲದಿಂದ ಹೊರಬರಬೇಕು. ಈ ಪಾರ್ಥೇನಿಯಂ ಕಳೆಯನ್ನು ಅಷ್ಟು ಸುಲಭವಾಗಿ ನಾಶಮಾಡುವುದು ಕಷ್ಟ ಆದರೂ ಸಾಮಾಜಿಕ ದೃಷ್ಟಿಕೋನದ ಅಡಿಯಲ್ಲಿ ಪರಿಷತ್ತಿನ ಚಟುವಟಿಕೆಗಳನ್ನು ನಡೆಸಿದರೆ ಈ ಜಾತಿಯ ಭೂತದಶಕ್ತಿ ಕುಂಠಿತವಾಗಬಹುದು. ಪರಿಷತ್ತಿನ ಅಧ್ಯಕ್ಷ ಅತ್ಯಂತ ಜಾತ್ಯತೀತ ಧೋರಣೆಯಿಂದ ಕೆಲಸ ಮಾಡಿದರೆ ಕಸಾಪದೊಳಗಿನ ಜಾತಿಯ ಸೋಂಕು ಕಡಿಮೆಯಾಗುತ್ತದೆ. ಇದರ ಪರಿಣಾಮವನ್ನು ಬಹಳಷ್ಟು ಶ್ರಮಪಟ್ಟು ಕಡಿಮೆ ಮಾಡಬೇಕಾದ ಸವಾಲು ಪರಿಷತ್ತಿನ ಅಧ್ಯಕ್ಷರಿಗಿದೆ.

4. ಈ ಪ್ರಶ್ನೆಯಲ್ಲಿ ಕಾಣಿಸಿರುವ ಪದ "ಅನಗತ್ಯ" ಎಂಬ ಪದ ಬಹಳ ಮುಖ್ಯ ನಾನು ಅಧ್ಯಕ್ಷನಾದಲ್ಲಿ ಸಮ್ಮೇಳನಗಳಲ್ಲಿ ಅನಗತ್ಯವಾಗಿ ರಾಜಕಾರಣಿಗಳನ್ನು ಹಾಗೂ ಮಠಾಧೀಶರನ್ನು ಮೆರೆಸುವ ಪ್ರಯತ್ನವನ್ನು ನಾಜೂಕಾಗಿ ನಿಲ್ಲಿಸುತ್ತೇನೆ.

ಈಗ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳ ಸ್ವರೂಪ ಬಹಳಷ್ಟು ವಿರಾಟ್‌ರೂಪ ತಾಳಿದೆ. ಇಂತಹ ಸಮ್ಮೇಳನಗಳನ್ನು ನಡೆಸಲು ಪರಿಷತ್ತು ಅನಿವಾರ್ಯವಾಗಿ ರಾಜಕಾರಣಿಗಳ ಆಶ್ರಯಕ್ಕೆ ಮೊರೆಹೋಗಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ರಾಜಕಾರಣಿಗಳಿಗೆ ವೇದಿಕೆಯಲ್ಲಿ ಸ್ಥಾನಮಾನ ನೀಡಲೇಬೇಕಾಗುತ್ತದೆ. ಅಗತ್ಯಕ್ಕಿಂತ ಹೆಚ್ಚಾಗದಂತೆ ಅವರನ್ನು ಬಳಸಿಕೊಂಡು ಎಲ್ಲಾ ಆಹ್ವಾನಿತರನ್ನು ನೋಡುವ, ಗೌರವಿಸುವ ರೀತಿಯಲ್ಲಿ ಅವರನ್ನು ನಡೆಸಿಕೊಂಡರೆ ಈ ಆರೋಪ ಬರುವುದಿಲ್ಲ. ಮೂಲತಃ ಕನ್ನಡಿಗನಾದ ರಾಜಕಾರಣಿ ಹಾಗೂ ಮಠಾಧೀಶರು ಕನ್ನಡಿಗರಾಗಿ ಸಮ್ಮೇಳನದಲ್ಲಿ ಭಾಗವಹಿಸುವಂತೆ ನೋಡಿಕೊಂಡರೆ ಯಾರು ಈ ಬಗ್ಗೆ ಬೇಸರಿಸುವುದಿಲ್ಲ. ಇದನ್ನು ನಾನು ನಾಜೂಕಾಗಿ ಎಂದು ಕರೆದಿರುವುದು.

5. ನಾನು ಹಿಂದೆಯೇ ಪ್ರಸ್ತಾಪಿಸಿದಂತೆ ಬದುಕು ಮತ್ತು ಭಾಷೆ ಒಂದಕ್ಕೊಂದು ಪೂರಕ ಬದುಕನ್ನು ಕಟ್ಟಿಕೊಡಬಲ್ಲ ಭಾಷೆ ಜೀವಂತವಾಗಿ ಉಳಿಯುತ್ತದೆ ಬೆಳೆಯುತ್ತದೆ.

ಬದುಕಿಗೆ ಪೂರಕವಾಗಿ ಭಾಷೆ ಇದ್ದರೆ ಜನರು ಅದನ್ನು ಒಪ್ಪುತ್ತಾರೆ ಹಾಗೂ ಅಪ್ಪುತ್ತಾರೆ ಕನ್ನಡದ ಓದು ಈ ಹಿನ್ನೆಲೆಯಲ್ಲಿ ಗಮನಿಸಬೇಕು. ಕನ್ನಡದ ಓದಿನಿಂದ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯ ಎಂದರೆ, ಎಲ್ಲರೂ ಅದನ್ನು ಓದುತ್ತಾರೆ. ಆಗ ಭಾಷೆ ಬೆಳೆಯುತ್ತದೆ ಹಾಗೂ ಉಳಿಯುತ್ತದೆ. ಸಮಾನ ಶಿಕ್ಷಣ ನೀತಿ ಹಾಗೂ ಮಾತೃಭಾಷಾ ಶಿಕ್ಷಣ ನೀತಿ ಜಾರಿಗೆ ಬಂದರೆ ಕನ್ನಡದ ಓದು ಪ್ರಸ್ತುತವಾಗುತ್ತದೆ. ಕನ್ನಡದ ಮಾಧ್ಯಮದಲ್ಲಿ ಕಲಿತವರಿಗೆ ಉದ್ಯೋಗದಲ್ಲಿ ಮೀಸಲಾತಿ ಸಿಕ್ಕರೆ ಎಲ್ಲ ಪೋಷಕರು ತಮ್ಮ ಮಕ್ಕಳನ್ನು ಕನ್ನಡದ ಮಾಧ್ಯಮದ ಶಾಲೆಗೆ ಕಳುಹಿಸುತ್ತಾರೆ. ಸರ್ಕಾರದ ಕಪಾಟಿನಲ್ಲಿ ಧೂಳು ತಿನ್ನುತ್ತಾ ಬಿದ್ದಿರುವ " ಸರೋಜಿನಿ ಮಹಿಷಿ ವರದಿ" ಜಾರಿಗೆ ಬಂದರೆ ಕನ್ನಡ ಉಳಿಯುತ್ತದೆ. ಕನ್ನಡಿಗರು ಉಳಿಯುತ್ತಾರೆ.


6. ಕನ್ನಡವೇ ಜಾತಿ, ಕನ್ನಡವೇ ಧರ್ಮ, ಕನ್ನಡವೇ ಸತ್ಯ ಕನ್ನಡವೇ ನಿತ್ಯ ಎನ್ನುವ ಬಗ್ಗೆ ನಂಬಿಕೆಯಿರುವ ನಾನು ಮಾನವ ನಿರ್ಮಿತ ಜಾತಿ, ಕೋಮು ಇವುಗಳಿಗೆ ಮಹತ್ವ ನೀಡುವುದಿಲ್ಲ. ಯಾವುದೋ ಕಾಲದಲ್ಲಿ ಸ್ವಾರ್ಥಕ್ಕಾಗಿ ಕಟ್ಟಿದ ಈ ಜಾತಿ ವ್ಯವಸ್ಥೆಯನ್ನು ಮನುಷ್ಯ ಸಂಬಂಧಗಳ ಬಗ್ಗೆ ಪ್ರೀತಿ ಇರುವ ಯಾರೂ ಒಪ್ಪಲು ಸಾಧ್ಯವಿಲ್ಲ. ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಲು ಮನುಷ್ಯ ಮನುಷ್ಯನ ನಡುವೆ ಜಾತಿಯ ಗೋಡೆಕಟ್ಟಿ ತಮ್ಮಲ್ಲಿನ ಮನಸ್ಸು ಒಡೆಯುವ ಕೋಮುವಾದವನ್ನು ಪ್ರಜ್ಞಾವಂತರಾದ ಯಾರೂ ಒಪ್ಪಲು ಸಾಧ್ಯವಿಲ್ಲ. ನಾನು ಲಂಕೇಶರ ಗರಡಿಯಲ್ಲಿ ಬಂದವ ಡಾ|| ಶಿವರುದ್ರಪ್ಪನವರ ಮಾರ್ಗದರ್ಶನದಲ್ಲಿ ಬೆಳೆದವ, ಆದುದರಿಂದ ಕೋಮುವಾದ ಜಾತಿವಾದ, ಶಿಕ್ಷಣದಲ್ಲಿ ಕೇಸರಿಕರಣ ಯಾವುದನ್ನು ಒಪ್ಪುವುದಿಲ್ಲ ನಾನು ಒಪ್ಪುವುದು ಪ್ರೀತಿ ತುಂಬಿದ ಮಾನವನ ಅಂತಃಕರಣವನ್ನು

ದುಗುಡಗೊಳಿಸುವ 'ಕೆಂಗುಲಾಬಿ'

ಪುಸ್ತಕ ವಿಮರ್ಶೆ

• ಅರುಣ್ ಜೋಳದಕೂಡ್ಲಿಗಿ

ತ್ರಕರ್ತ ಮಿತ್ರ ಹನುಮಂತ ಹಾಲಿಗೇರಿ ಕೆಂಗುಲಾಬಿ' ಕಾದಂಬರಿಯ ಓದು ಗೊಳಿಸುವಂಥದ್ದು. ವೇಶ್ಯಾಜಗತ್ತಿನ ರುಗಳ ಯಾತನೆಯ ನಾಡಿಮಿಡಿತ ನಂತರವೂ ಬಹುಕಾಲ ತಾಕುತ್ತದೆ. ಮಮ್ಮಲ ಮರುಗುತ್ತದೆ. ದಂಬರಿಯ ನಾಯಕ ಮಲ್ಲೇಶಿ ಕೋಟೆ ಸಮೀಪದ ಭೀಮನಕೊಪ್ಪದ ಜೋಗತಿಯ ಮಗ. ಸ್ವತಃ ಸಿಯ ಮಗನಾಗಿ, ಆದರೆಲ್ಲಾ -ಅಪಮಾನಗಳಿಗೆ ಒಳಗಾದವನು. ಳ್ಳಿಯ ಪಟ್ಟಭದ್ರರ ಹಿತಾಸಕ್ತಿಗೆ ಗಿ ಬಾಲ್ಯದಲ್ಲಿಯೇ ನಗರಕ್ಕೆ ಬಂದು ಕಟ್ಟಿಕೊಳ್ಳಲು ಹೆಣಗುವವ. ಕಾರ್ಯಕರ್ತರ ಪರ ಕಾಳಜಿಯ .ಓಗಳಲ್ಲಿ ಕೆಲಸ ಮಾಡುತ್ತಾ ಅವರ ಸಲ್ಲಿ ಬದಲಾವಣೆ ತರುವ ಕನಸು ಕವನು.



ನುಮಂತ ಅವರು ತಮ್ಮ ಮಾತುಗಳಲ್ಲಿ 'ಇಲ್ಲಿ ನಾನು ವೃತ್ತಿ ಸರಿ ಅಥವಾ ಎಂದು ವಾದಿಸಲು ಲ್ಲ. ಈ ಕೃತಿ ದಂತರ ನಿಮ್ಮೊಳಗೆ ಗೊಳ್ಳುವ ತೀರ್ಮಾನಕ್ಕೆ ಜವಾಬ್ದಾರರು' ತ್ತಾರೆ. ಆ ಮೂಲಕ ಕಾರ್ಯಕರ್ತರ ನ್ನು ಎದುರಿಗಿಟ್ಟು ಆ ನಾವೇ ಪ್ರಶ್ನೆ ಮಾಡಿಕೊಳ್ಳುವಂತೆಯೂ, ಆತ್ಮಾವಲೋಕನ ಕೊಳ್ಳುವಂತೆಯೂ ನಿರೂಪಿಸುತ್ತಾ ಹೋಗುತ್ತಾರೆ. ದಂಬರಿ ಓದುತ್ತಾಹೋದಂತೆ 'ಸಲಾಂ ಬಾಂಬೆ' ತರಹದ ನೆನಪಾಗುತ್ತವೆ. ವೇಶ್ಯಾಜಗತ್ತಿನ ದಿನ ನ ತವಕ ತಲ್ಲಣ, ಒಳ ಬಂಡಾಯ ನ್ನೂ ತುಂಬಾ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ತ್ತಾಯದ ಹೋರಾಟವನ್ನು ಮಾಡುವ ಲೈಂಗಿಕ ಕಾರ್ಯಕರ್ತರು ಪ್ರೆಸ್‌ಮೀಟ್ ನ್ನು ಕರೆದಿರುತ್ತಾರೆ. ಅಲ್ಲಿನ ಪತ್ರಕರ್ತರ ಮುತ್ತು ವೇಶ್ಯೆಯರ ಉತ್ತರ ವ್ಯವಸ್ಥೆಯ ಮುಖಗಳನ್ನು ಕಾಣಿಸುವಂತಿವೆ. ಲೈಂಗಿಕ ಕರ್ತೆಯೊಬ್ಬಳು ಹೇಳುವ ಮಾತು ವೆ: "ನಾನು ಕಣ್ಣೀರು ಹಾಕಲ್ಲ, ಯಾಕೆ ಲ್ಲ ಅಂತ ಕೇಳಿದ್ರೆ ಅತ್ತುಅತ್ತು ಕಣ್ಣೀರು ಯಾಗಿವೆ. ಅತ್ತರೂ ಕೂಡ ನಮ್ಮ ಬದುಕು ಗಾಗೋದು ಎಲ್ಲಿ?" ಎಂದು ವಿಷಾದ ವ್ಯಕ್ತಪಡಿಸುತ್ತಾಳೆ.


ಹನುಮಂತ್ ಹಲಗೇರಿ

ವೇಶ್ಯಾವಾಟಿಕೆಯ ಬಗ್ಗೆ ಸಾಮಾನ್ಯವಾಗಿ ಎತ್ತುವ ಸುಧಾರಣಾವಾದಿ ಗಳನ್ನು ಕಠೋರ ಪರೀಕ್ಷೆಗೆ ಒಳಪಡಿಸಿದಂತಿದೆ ಇಲ್ಲಿನ ಕಥನ. ಮಲ್ಲೇಶಿ ಹಳ್ಳಿಯೊಂದರಲ್ಲಿ ಎನ್.ಜಿ.ಓ ಕಾರ್ಯಕರ್ತನಾಗಿ ಕೆಲಸ ಮಾಡುವಾಗ ಳೊಂದಿಗೆ ಪ್ರೇಮಾಂಕುರವಾಗುತ್ತದೆ. ಆ ಶಾರಿ ಮತ್ತೆ ಸಿಗುವುದು ವಾಟಿಕೆಯಲ್ಲಿ ತೊಡಗಿಕೊಂಡಾಗ. ಆಗ ತನ್ನ ದುರಂತದ ಬದುಕನ್ನು ಬಿಚ್ಚಿಡುತ್ತಾಳೆ. ಹರೆಯದಲ್ಲಿ ಪ್ರೀತಿಸಿದ ಶಾರಿ ವೇಶ್ಯೆಯಾಗಿ ಸಿಕ್ಕಾಗ ಮಲ್ಲೇಶಿಗೆ ಹೇಳುವ ಮಾತುಗಳು ಮಾರ್ಮಿಕವಾಗಿವೆ "..ನನಗ ಮನಸ್ಸ ಇಲ್ಲ ಮೈ ಮಾತ್ರ ಐತಿ. ಇಲ್ಲಿ ಯಾರ ಜತೆನೂ ಮನಸ್ಸು ಬಳಸುವ ಸಂದರ್ಭ ಬರಲೇ ಇಲ್ಲ, ಬಳಸಲಾರದ ಮನಸ್ಸು ಜಂಗು ತಿಂದು ಹಾಳಾಗಿ ಹೋತು, ಆದ್ರ ಮೈ ಇಡೀ ದಿನವೆಲ್ಲಾ ಬಳಕೆ ಆಗಿ ಆಗಿ ಸವೆದು ಹೋಗಿ ಇದಿಷ್ಟು ಉಳದೈತಿ. ಇದು ಯಾವತ್ತು ಕೆಟ್ಟು ಬಂದ್ ಅಕ್ಕೈತೋ ಅವತ್ತು ನನ್ನ ಪುಟ ಮುಗದ್ಹಂಗ" ಎನ್ನುವ ಮಾತು ಇಡೀ ವೇಶ್ಯಾ ಜಗತ್ತಿನ ಒಳನುಡಿಯಂತೆ ಪ್ರತಿಧ್ವನಿಸುತ್ತದೆ. ಲೈಂಗಿಕ ಕಾರ್ಯಕರ್ತರ ವಾಸಸ್ಥಳದ ಚಿತ್ರಣ, ಪೊಲೀಸರು, ವಕೀಲರು, ಡಾಕ್ಟರುಗಳು, ಘರವಾಲಿಗಳು, ಮಧ್ಯವರ್ತಿಗಳು, ರೌಡಿಗಳು, ಪಿಂಪ್‌ಗಳು, ಬಾಡಿಗೆ ಗಂಡಂದಿರು ಇವರೆಲ್ಲರೊಂದಿಗೆ ಹೆಣಗುವ ವೇಶ್ಯೆಯರ ಬದುಕಿನ ನಾನಾ ಮುಖಗಳು ಇಲ್ಲಿ ಎದುರಾಗುತ್ತವೆ.

ಈಚಿನ ದಿನಗಳಲ್ಲಿ ವೇಶ್ಯೆಯರ ಬದುಕನ್ನು ವಸ್ತುವಾಗಿಸಿಕೊಂಡ ಬಂದ ಕಾದಂಬರಿಗಳು ಕಡಿಮೆ. ನಳಿನಿ ಜಮಿಲಾ ಅವರ ಸೆಕ್ಸ ವರ್ಕರ್ ಒಬ್ಬಳ ಆತ್ಮ ಕಥನ, ರೇವತಿ, ಲಿವಿಂಗ್ ಸ್ಮೈಲ್ ವಿದ್ಯಾ ಅವರ ಹಿಜಡಾಗಳ ಬದುಕಿನ ಆತ್ಮಕಥನಗಳು ಕನ್ನಡಕ್ಕೆ ಬಂದಿವೆ. ಇವು ಸದ್ಯದ ಲೈಂಗಿಕ ಕಾರ್ಯಕರ್ತರ ದಾರುಣ ಬದುಕಿನ ಅನುಭವವನ್ನು ಕನ್ನಡಕ್ಕೆ ದಾಟಿಸಿವೆ. 'ಕೆಂಗುಲಾಬಿ' ಕಾದಂಬರಿಯ ನಿರೂಪಣೆಯ ಶೈಲಿ ಕೂಡ ಆತ್ಮಕಥಾನಕದ ಮಾದರಿಯದು. ಇಲ್ಲಿನ ಅನುಭವಲೋಕ ಕರ್ನಾಟಕದ ಒಳನಾಡಿನದು. ನಮ್ಮ ಕಾಲವನ್ನು ಲೈಂಗಿಕ ಕಾರ್ಯಕರ್ತರ ಬದುಕಿನ ಕಣ್ಣೋಟದ ಮೂಲಕ ನೋಡುವ ಕಾರಣಕ್ಕೆ ಈ ಕಾದಂಬರಿ ಮುಖ್ಯವಾಗುತ್ತದೆ. ಅ.ನ.ಕೃ ಮೊದಲಾದವರು ಕಾಣಿಸಿದ ವೇಶ್ಯೆಯರ ಬದುಕಿನ ಲೋಕ ಈಗ ಮತ್ತಷ್ಟು ಸಂಕೀರ್ಣತೆಯ, ಅಮಾನವೀಯತೆಯ ಮೈ ಪಡೆದಿದೆ. ಇದೂ ಕೂಡ ಜಾಗತೀಕರಣದ ಮಹಿಮೆಯೆ.

ಆಳದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಎಳೆಯಿರುವ, ಮೇಲುನೋಟಕ್ಕೆ ಸಾಮಾಜಿಕ ಕಾಳಜಿಯ ಮುಖಹೊತ್ತ ಎನ್.ಜಿ.ಓಗಳನ್ನು ಅವಿಮರ್ಶಾತ್ಮಕವಾಗಿ ನೋಡಿರುವುದು ಈ ಕಾದಂಬರಿಯ ದೊಡ್ಡ ಮಿತಿಯಾಗಿದೆ. ಇಲ್ಲಿ ವೇಶ್ಯಾಜಗತ್ತಿನ ಬಗ್ಗೆ ತನಗೆ ತಿಳಿದ ಎಲ್ಲಾ ಸಂಗತಿಗಳನ್ನು ಹೇಳಲೇಬೇಕೆಂಬ ಹಟಕ್ಕೆ ಬಿದ್ದಂತೆ ಕೆಲವೆಡೆ ಕಾದಂಬರಿ ಕೃತಕವಾಗಿಯೂ ವಿಸ್ತರಿಸಿಕೊಂಡಂತಿದೆ. ಕಾದಂಬರಿಯ ಮುಖಪುಟದಲ್ಲಿ ವೇಶ್ಯಾಜಗತ್ತಿನ ಅನಾವರಣ ಎನ್ನುವ ಉಪ ಶೀರ್ಷಿಕೆಯ ಅಗತ್ಯವೂ ಇರಲಿಲ್ಲ. ಮುಖ್ಯವಾಗಿ ಇಲ್ಲಿನ ವಿವರಗಳನ್ನೆಲ್ಲ ನೇಯ್ದು ಕಲಾಕೃತಿಯನ್ನಾಗಿಸುವಲ್ಲಿ ಕಾದಂಬರಿಕಾರರು ಸೋತಿದ್ದಾರೆ.


ಇಂತಹ ಮಿತಿಗಳಾಚೆಯೂ, ನಮ್ಮ ಕಾಲದ ನೋವಿನ ಜಗತ್ತನ್ನು ಮಾನವೀಯವಾಗಿ ಕಾಣಿಸಿದ ಕಾರಣಕ್ಕೆ 'ಕೆಂಗುಲಾಬಿ' ಮುಖ್ಯವಾಗುತ್ತದೆ. ಹಾಗಾಗಿ ಹನುಮಂತ ಹಾಲಿಗೇರಿಯವರು ಅಭಿನಂದನಾರ್ಹರು. ಲೈಂಗಿಕ ಕಾರ್ಯಕರ್ತರಲ್ಲಾದ ಬದಲಾವಣೆ, ಹಕ್ಕೊತ್ತಾಯಕ್ಕಾಗಿ ಹೋರಾಡುವ ಮನೋಭಾವ, ತನ್ನತನವನ್ನೂ, ತನ್ನನ್ನು ವೇಶ್ಯಾವೃತ್ತಿಗೆ ದೂಡಿದ ವ್ಯವಸ್ಥೆಯ ಬಗೆಗಿನ ಆಕ್ರೋಶಕ್ಕೆ ರಾಜಕೀಯ ಶಕ್ತಿ ಬರುತ್ತಿರುವ ಸೂಕ್ಷ್ಮತೆಯನ್ನು ಗ್ರಹಿಸಲು ಒಮ್ಮೆ ಓದಬಹುದಾದ ಕಾದಂಬರಿ 'ಕೆಂಗುಲಾಬಿ'.

ಕೆಂಗುಲಾಬಿ
(ಕಾದಂಬರಿ)
ಹನುಮಂತ ಹಾಲಿಗೇರಿ
ಪುಟ: XV+122, 60.00
ಚೇ ಪುಸ್ತಕ, ವೆಂಕಟಾಲ, ಯಲಹಂಕ, ಬೆಂ. 64

▸ಪಾರ್ವತವ್ವ-ರಾಜೇಸಾಬರ ಪ್ರೇಮಕತೆ

ಪಾರ್ವತವ್ವನ ಸೋದರರು ಆವೇಶದಿಂದ ವಿವೇಚನೆ ಕಳೆದುಕೊಂಡು ರಾಜೇಸಾಬ್‌ನನ್ನು ಬಡಿದು ನೆಲಕ್ಕೆ ಕೆಡವಿದವರೆ ಅವನ ಎರಡು ಕಣ್ಣುಗಳನ್ನು ಕಿತ್ತು ಹಾಕಿಬಿಟ್ಟರು. ದಾಳಿ ನಡೆಸಿದ ಐವರ ಪೈಕಿ ಇಬ್ಬರು ರಾಜೇಸಾಬ್‌ನ ತಲಾ ಒಂದೊಂದು ಕಣ್ಣು ಗುಡ್ಡೆಗಳನ್ನು ಬಾಯಿಗೆಸೆದುಕೊಂಡು ನುಂಗಿಯೂ ಬಿಟ್ಟರು. ರಕ್ತ ಹರಿದು ಹೋಗುತ್ತಾ ನಿತ್ರಾಣಗೊಂಡು ಬಿದ್ದಿದ್ದ ರಾಜೇಸಾಬ್‌ನನ್ನು ಅಲ್ಲೇ ಬಿಸುಟು ಆ ಗುಂಪು ಓಡಿಹೋಯಿತು. ಆದರೆ ಪಾರ್ವತವ್ವನಿಗೆ ತನ್ನಣ್ಣಂದಿರ ಕ್ರೌರ್ಯದ ಬಗ್ಗೆ ಗೊತ್ತಿದ್ದರೂ ಹೆದರದೆ ರಾಜೇಸಾಬ್‌ನನ್ನು ಬೆಳಗಾಂನ ಆಸ್ಪತ್ರೆಗೆ ಕರೆದುಕೊಂಡು ಹೋದಳು.

ಆಗ ಪಾರ್ವತವ್ವ ಅದೆಷ್ಟು ಮುಗ್ಧೆ ಹಾಗೂ ಪ್ರೀತಿ ತುಂಬಿದ



ಹುಡುಗಿಯಾಗಿದ್ದಳೆಂದರೆ ಬೆಳಗಾಂನ ಸಿವಿಲ್ ಆಸ್ಪತ್ರೆಯ ಡಾಕ್ಟರ್‌ಗೆ ಕೈ ಮುಗಿದು ಅಳುತ್ತಾ "ನನ್ ಕಣ್ಣು ಕಿತ್ತು ಅವರಿಗೆ ಹಾಕ್ರಿ, ರಾಜೇಸಾಬ್‌ಗೆ ಮತ್ತ ಕಣ್ ಬರೋಂಗ್ ಮಾಡ್ರಿ" ಎಂದೆಲ್ಲಾ ಬೇಡಿಕೊಂಡಳು.

ಆದರೆ ಅದೆಲ್ಲಾ ಎಲ್ಲಿ ಸಾಧ್ಯವಿತ್ತು

ಬೆಳಗಾವಿ ಆಸ್ಪತ್ರೆಯಿಂದ ವಾಪಸ್ ಹೊರಟಾಗ ರಾಜೇಸಾಬ್ ಆ ಹಿಂದಿನ, ಚಿಂದನೆಯ, ಆರೋಗ್ಯವಂತ ಸ್ವಾವಲಂಬಿ ರಾಜೇಸಾಬ್ ಆಗಿ ಉಳಿದಿರಲಿಲ್ಲ. ಅವನ ಕಣ್ಣುಗಳೇ ಇಲ್ಲದಂತಾಗಿದ್ದವು.

ಇದು ಈ ದಾರುಣ ಕತೆಯ ಮೊದಲರ್ಧದ ಭಾಗ. ಅಲ್ಲಿಂದಾಚೆಗೆ ಪಾರ್ವತವ್ವ ತನ್ನಿಡೀ ಪರಿವಾರಕ್ಕೇ ಸವಾಲೆಸೆಯುವಂತೆ ತನ್ನ ಜೀವದ ಗೆಳೆಯ ರಾಜೇಸಾಬ್‌ನೊಂದಿಗೆ ರಾಮದುರ್ಗಕ್ಕೇ ಹಿಂತಿರುಗಿ ಬಂದಳು. ಟೌನ್ ಪೊಲೀಸ್ ಸ್ಟೇಷನ್ ಪಕ್ಕದಲ್ಲೇ ಇದ್ದ ಸರ್ಕಾರಿ ಶಾಲೆಯೊಂದಕ್ಕೆ ಆತುಕೊಂಡಂತೆ ತಮಗೊಂದು ಗುಡಿಸಲು ಹಾಕಿಕೊಂಡಳು. ಅಲ್ಲೇ ಪಾರ್ವತವ್ವ-ರಾಜೇಸಾಬರ ಪ್ರೀತಿ ತುಂಬಿದ ಬಡತನದ ಜೀವನ ಆರಂಭವಾಯಿತು. ರಾಜೇಸಾಬ್ ತನ್ನ ಗುಡಿಸಲಿನ ಹೊರಭಾಗದಲ್ಲೇ ಚಿಕ್ಕದೊಂದು ಅಂಗಡಿ ತೆರೆದ. ಹಣ್ಣು, ಬಿಸ್ಕತ್ತು, ಮಿಠಾಯಿ ತರದ ಮಕ್ಕಳಿಗಿಷ್ಟವಾದ ತಿನಿಸಿನ ಗೂಡಂಗಡಿ ಅದು. ಅಷ್ಟರಲ್ಲಿ ರಾಮದುರ್ಗದ ಪೂರಾ ರಾಜೇಸಾಬನಿಗಾದ ಅನ್ಯಾಯದ ಸುದ್ದಿ ಹಬ್ಬಿತ್ತು. ಜನ ಆತನ ಸ್ಥಿತಿ ನೆನೆದು ವ್ಯಥೆ ಪಡುತ್ತಿದ್ದರು. ಅದೀಗ ಬೇರೊಂದು ರೀತಿಯ ಕಾಳಜಿಯಾಗಿ ವ್ಯಕ್ತವಾಗತೊಡಗಿತು. ಕಣ್ಣಿರದ ರಾಜೇಸಾಬರ ಗೂಡಂಗಡಿಗೆ ಬರುತ್ತಿದ್ದ ದೊಡ್ಡವರಾಗಲಿ, ಚಿಕ್ಕವರಿರಲಿ ತಮಗೆ ಬೇಕಾದ್ದನ್ನು ಕೊಂಡು ಅವರೇ ಹಣ ಲೆಕ್ಕ ಮಾಡಿ ಕೊಟ್ಟು ಹೋಗುತ್ತಿದ್ದರು. ಕುರುಡನೆಂದು ಯಾರೂ ಸುಳ್ಳು ಹೇಳಲಿಲ್ಲ, ಹಣ ಕೊಡದೆ ಮೋಸ ಮಾಡಲಿಲ್ಲ. ಮತ್ತೊಂದೆಡೆ ಪಾರ್ವತವ್ವ ತಲೆ ಮೇಲೆ ದ್ರಾಕ್ಷಿ ಹಣ್ಣಿನ ಬುಟ್ಟಿ ಹೊತ್ತು ಟೌನಿನ ಮನೆಮನೆಗೂ ಹೋಗಿ ಮಾರಾಟ ಮಾಡುತ್ತಿದ್ದಳು. ಈಕೆ ರಾಜೇಸಾಬರನ್ನು ಬಹು ಕಾಳಜಿ ಪ್ರೀತಿಯಿಂದ ಕಾಪಾಡಿಕೊಂಡಳು. ರಾಮದುರ್ಗದ ಜನರು ಈ ದಂಪತಿಗಳನ್ನು ರಕ್ಷಿಸಿ ಸಲುಹಿದರೆಂದೇ ಹೇಳಬೇಕು. ಹೀಗಿರುತ್ತಾ ಒಮ್ಮೆ ಪಾರ್ವತವ್ವಳ ಸೋದರರು ಮತ್ತೆ ಕಾಣಿಸಿಕೊಂಡರು. ಆದರೆ ಅವರ್‍ಯಾರಲ್ಲೂ ಮೊದಲಿನ ಸಿಟ್ಟು ಅಸಹನೆಗಳಿರಲಿಲ್ಲ. ರಾಜೇಸಾಬನ ಮೇಲಿನ ದಾಳಿ ಪ್ರಕರಣವು ಕೋರ್ಟ್‌ನಲ್ಲಿ ನಡೆಯಿತಾದರೂ ಅವರ ಮೇಲಿನ ಆರೋಪಗಳು ಸಾಬೀತಾಗಲಿಲ್ಲ. ಜನರ ನಿಂದನೆ, ಪಶ್ಚಾತ್ತಾಪಗಳು ಅವರನ್ನು ಬಾಧಿಸಿದ್ದವು. ಅವರು ನುಂಗಿದ ರಾಜೇಸಾಬನ ಎರಡು ಕಣ್ಣುಗಳೇ ಅವರ ಅಂತಃ ಸಾಕ್ಷಿಯನ್ನು ಎಚ್ಚರಿಸಿದವೋ ಎನ್ನುವಂತೆ ಅವರ ಬದುಕಿನ ಬಗ್ಗೆ ಹೊಸ ದೃಷ್ಟಿಕೋನ ಬೆಳೆಸಿಕೊಂಡಿದ್ದರು. ಇದೆಲ್ಲಾ ನಡೆದು ಸರಿಸುಮಾರು ಮೂರು ದಶಕಗಳಾಗಿರಬೇಕು. ರಾಜೇಸಾಬ್ ಈಗಲೂ ರಾಮದುರ್ಗದಲ್ಲಿದ್ದಾರೆ. ಮನೆ, ಮಸೀದಿ, ಮಕ್ಕಳ ಜಗತ್ತು ಅವರಿಗಿದೆ. ಈ ದಂಪತಿಗಳ ನಾಲ್ವರು ಮಕ್ಕಳಲ್ಲಿ ಒಬ್ಬಾತನಿಗೆ ಏರ್‌ಟೆಲ್‌ನಲ್ಲಿ ಕೆಲಸ. ಇನ್ನೊಬ್ಬರು ಲಾಯರ್. ಇಬ್ಬರು ಹೆಣ್ಣು ಮಕ್ಕಳು ನೆಮ್ಮದಿಯಿಂದಿದ್ದಾರೆ. ತಕ್ಕ ಮಟ್ಟಿಗೆ ಹಣ, ಮನೆ, ಆಸ್ತಿಯನ್ನು ಈ ದಂಪತಿ ಗಳಿಸಿದ್ದಾರೆ. ಆಶ್ಚರ್ಯ ಅಂದರೆ ಪಾರ್ವತವ್ವ ಇವತ್ತಿಗೂ ರಾಮದುರ್ಗ ಬಸ್‌ಸ್ಟಾಂಡ್‌ನಲ್ಲಿ ಕುಳಿತು ಬಜ್ಜಿ ಬೋಂಡ ಮಾಡಿ ಮಾರುತ್ತಾರೆ. ಅದುಇದೂ ಮಾತಾಡುತ್ತಾ ಕೊಂಚ ಕೆಣಕಿದರೆ ಗಂಡ ರಾಜೇಸಾಬ್ ಬಗ್ಗೆ ಪ್ರೀತಿಯ, ತಮಾಷೆಯ ಮಾತುಗಳನ್ನು ಆಡುತ್ತಾರೆ. ಆಕೆಯ ಮಾತುಗಳಲ್ಲಿನ ಅಕ್ಕರೆಯ ಸವಿ ಆಕೆಯೊಂದಿಗೆ ಮಾತಿಗಿಳಿಯುವ ಪ್ರತಿಯೊಬ್ಬರ ಅನುಭವಕ್ಕೂ ಬರುತ್ತದೆ.

"ಈಗೇನ್ ಅನಿಸ್ತದೆ?" ಅಂತ ಅವತ್ತಿನ ದುರ್ಘಟನೆಯ ಬಗ್ಗೆ ಕೇಳಿದವರಿಗೆ ರಾಜೇಸಾಬ್

"ನಾನವರನ್ನು ಕ್ಷಮಿಸಿಬಿಟ್ಟಿದ್ದೇನೆ" ಎಂದು ಉತ್ತರಿಸುತ್ತಾರೆ.

ತಾನು ಮೆಚ್ಚಿದ ರಾಜೇಸಾಬ್‌ನನ್ನು ಪ್ರಾಣದ ಹಂಗು ತೊರೆದು ರಕ್ಷಿಸಿಕೊಂಡು ನಂತರದ ಕಷ್ಟಕಾಲದಲ್ಲಿ ಜೊತೆ ನಿಂತು ಆತನನ್ನು ಸಲುಹಿ, ಕಾಪಾಡಿಕೊಂಡ ಪಾರ್ವತವ್ವನಿಗೆ ತಾನೇನು ಸಾಧಿಸಿದೆನೆಂಬುದರ ಅರಿವೂ ಇಲ್ಲ, ಹೆಮ್ಮೆಯ ಭಾವವೂ ಇಲ್ಲ. ಆ ತಾಯಿಗೊಂದು ಸಲಾಂ.


ಯುಗೋಸ್ಲಾವಿಯಾದ ಪ್ರಧಾನಿ ಕಮ್ಯೂನಿಸ್ಟ್ ನಾಯಕ ಮಾರ್ಷಲ್ ಟಿಟೊ ಬೆಂಗಳೂರಿಗೆ ಬಂದಿದ್ದಾಗ ತೆಗೆದ ಚಿತ್ರ ಇದು. ಟಿಟೊ ಪಕ್ಕದಲ್ಲಿರುವವರು ಆಗಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ


ಹುಳಿಮಾವು ಮತ್ತು ನಾನು 36



• ಇಂದಿರಾ ಲಂಕೇಶ್

ಲಂಕೇಶರಿಗೆ ಲಿವರ್ ಟ್ರಾನ್ಸ್‌ಪ್ಲಾಂಟ್ ಮಾಡಬೇಕೆಂದಾಗ

ಲಂಕೇಶರು ಮೊದಮೊದಲು ದಿನಕ್ಕೆ ಒಂದು ಪ್ಯಾಕ್ ಸಿಗರೇಟು ಸೇದುತ್ತಿದ್ದರು. ಆದರೆ ಸಿನಿಮಾ, ಪತ್ರಿಕೆ ಅಂತೆಲ್ಲ ಪ್ರಾರಂಭವಾದ ನಂತರ ಅದು ಹಲವಾರು ಪ್ಯಾಕೆಟ್‌ಗಳಿಗೆ ಏರಿತ್ತು. ಅವರು ಸಿಗರೇಟ್ ಸೇದುತ್ತಿದ್ದ ಶೈಲಿಯೂ ಇತರರಿಗಿಂತ ಭಿನ್ನ. ಸಿಗರೇಟನ್ನು ಎಲ್ಲರಂತೆ ಲಂಕೇಶರು ಎರಡು ಬೆರಳುಗಳ ನಡುವೆ ಇಟ್ಟು ಸೇದುತ್ತಿರಲಿಲ್ಲ, ಬದಲಾಗಿ ಅದರ ಸುತ್ತ ಮುಷ್ಟಿಯನ್ನು ಬಿಗಿದು ಸೇದುತ್ತಿದ್ದರು. ಹೀಗೆ ಸೇದುವುದರಿಂದ ಸಿಗರೇಟಿನ ಸಂಪೂರ್ಣ 'ಧಂ' ಅವರ ಶ್ವಾಸಕೋಶದೊಳಗೆ ಹೋಗಿ ಹೊರಗೆ ಹೆಚ್ಚು ಹೊಗೆಯೇ ಬರುತ್ತಿರಲಿಲ್ಲ. ಹೀಗೆ ಸೇದುವುದರಿಂದ ಲಂಕೇಶರ ಬಲಗೈ ಮುಷ್ಟಿಯಲ್ಲಿ ಹಳದಿ ಕಲೆಗಳು ಕಾಣಿಸುತ್ತಿದ್ದವು.



ಹಲವಾರು ವರ್ಷಗಳ ಕಾಲ ಸಿಗರೇಟ್ ಸೇದುವ ಚಟವನ್ನು ಹೊಂದಿದ್ದ ಲಂಕೇಶರು ತಮ್ಮ ಆರೋಗ್ಯ ಕೈಕೊಡಲಾರಂಭಿಸಿದಾಗ ಒಂದುದಿನ ಇದ್ದಕ್ಕಿದ್ದಂತೆ ಸಿಗರೇಟು ಸೇದುವುದನ್ನೇ ಸಂಪೂರ್ಣವಾಗಿ ನಿಲ್ಲಿಸಿಬಿಟ್ಟರು. ಅವರು ಮೊದಲ ಪ್ರಯತ್ನದಲ್ಲೇ ಯಶಸ್ವಿ ಆಗಿರುತ್ತಾರೆಂಬ ನಂಬಿಕೆ ನನಗಿರಲಿಲ್ಲ. ಆದರೆ ಅವರದ್ದು ಗಟ್ಟಿ ಮನಸ್ಸು. ಹಾಗೆ ಬಿಟ್ಟವರು ಎಂದೂ ಮತ್ತೆ ಒಂದೇ ಒಂದು ಸಿಗರೇಟನ್ನು ಹಚ್ಚಲಿಲ್ಲ.

ಓದುತ್ತಲೋ, ಬರೆಯುತ್ತಲೋ ಸಿಗರೇಟ್ ಸೇದುತ್ತಿದ್ದ ಲಂಕೇಶರು ಬೂದಿಯನ್ನು ಆಶ್‌ಟ್ರೇಗೆ ಹಾಕುವುದಿರಲಿ, ಇನ್ನೂ ಉರಿಯುತ್ತಿದ್ದ ಸಿಗರೇಟನ್ನು ಸರಿಯಾಗಿ ಆರಿಸುವಷ್ಟು ತಾಳ್ಮೆಯನ್ನೂ ಹೊಂದಿರಲಿಲ್ಲ. ಒಂದೆರಡು ಬಾರಿ ಅವರ ಆರಿಸದೇ ಬಿಸಾಡಿದ್ದ ಸಿಗರೇಟಿನಿಂದಾಗಿ ವೇಸ್ಟ್ ಪೇಪರ್ ಬಾಸ್ಕೆಟ್‌ನಲ್ಲಿದ್ದ ಹಾಳೆಗಳು ಬೆಂಕಿಹತ್ತಿಕೊಂಡಿದ್ದವು. ಆಗ ಅದಕ್ಕೆ ಲಂಕೇಶರು ಕಂಡುಕೊಂಡ ಪರಿಹಾರ ಪ್ಲಾಸ್ಟಿಕ್ ವೇಸ್ಟ್ ಪೇಪರ್ ಬಾಸ್ಕೆಟ್‌ಗಳ ಬದಲಾಗಿ ಕಬ್ಬಿಣದ ವೇಸ್ಟ್ ಪೇಪರ್ ಡಬ್ಬಿಗಳನ್ನು ಬಳಸುವುದು. ಅವುಗಳಲ್ಲಿ ಬೆಂಕಿ ಹತ್ತಿಕೊಂಡರೂ ಹೆಚ್ಚು ಅನಾಹುತ ಆಗಲ್ಲ ಎಂಬುದು ಅವರ ನಂಬಿಕೆ!

ಇನ್ನು ಅವರ ಸಿಗರೇಟ್ ಸೇದುವ ಚಟದಿಂದಾಗಿ ಹಾಳಾದ ಹಾಸಿಗೆಗಳೆಷ್ಟೋ. ಒಮ್ಮೆ ಲಂಕೇಶರು ಹಾಸಿಗೆಯ ಮೇಲೆ ಕೂತು ಸಿಗರೇಟು ಸೇದುತ್ತಾ ಅದೇನನ್ನೋ ಓದುತ್ತಿದ್ದರು. ಹಾಗೆ ಓದುವಾಗ ಸಿಗರೇಟಿನಿಂದ ಹಾಸಿಗೆಯನ್ನು ಸುಟ್ಟಿದ್ದರು. ಹಾಸಿಗೆಯಿಂದ ಸಣ್ಣದಾಗಿ ಹೊಗೆ ಬರಲಾರಂಭಿಸಿದಾಗ ಅವರು ಬಚ್ಚಲುಮನೆಯಿಂದ ಒಂದು ಚೊಂಬು ನೀರು ತಂದು, ಹಾಸಿಗೆಯ ಮೇಲೆ ಸುರಿದು ಸುಮ್ಮನಾದರು. ಸ್ವಲ್ಪ ಹೊತ್ತಿನ ನಂತರ ಅವರು ಎಲ್ಲಿಗೋ ಹೊರಟು ಹೋದರು. ಅರ್ಧ ಗಂಟೆ ನಂತರ ನಾನು ನೋಡುತ್ತೇನೆ ಅವರ ರೂಮಿನಿಂದ ಹತ್ತಿ ಸುಡುವ ವಾಸನೆ ದಟ್ಟವಾಗಿ ಬರುತ್ತಿತ್ತು. ಏನಾಗಿತ್ತೆಂದರೆ ಹಾಸಿಗೆಯೊಳಗಿದ್ದ ಹತ್ತಿ ಕಣ್ಣಿಗೆ ಕಾಣದಂತೆ ಹತ್ತಿಕೊಂಡು ಉರಿಯುತ್ತಿತ್ತು. ಆ ಹಾಸಿಗೆಯ ಮೇಲೆ ಹಲವಾರು ಬಕೀಟುಗಳಷ್ಟು ನೀರು ಸುರಿದ ನಾನು ಅದನ್ನು ಆರಿಸುವಲ್ಲಿ ಯಶಸ್ವಿಯಾದೆ.

* * * * * * * *

ಹಲವಾರು ವರ್ಷಗಳ ಕಾಲ ಸಿಗರೇಟ್ ಸೇದುವ ಚಟವನ್ನು ಹೊಂದಿದ್ದ ಲಂಕೇಶರು ತಮ್ಮ ಆರೋಗ್ಯ ಕೈಕೊಡಲಾರಂಭಿಸಿದಾಗ ಒಂದುದಿನ ಇದ್ದಕ್ಕಿದ್ದಂತೆ ಸಿಗರೇಟು ಸೇದುವುದನ್ನೇ ಸಂಪೂರ್ಣವಾಗಿ ನಿಲ್ಲಿಸಿಬಿಟ್ಟರು. ಅವರು ಮೊದಲ ಪ್ರಯತ್ನದಲ್ಲೇ ಯಶಸ್ವಿ ಆಗಿರುತ್ತಾರೆಂಬ ನಂಬಿಕೆ ನನಗಿರಲಿಲ್ಲ. ಆದರೆ ಅವರದ್ದು ಗಟ್ಟಿ ಮನಸ್ಸು. ಹಾಗೆ ಬಿಟ್ಟವರು ಎಂದೂ ಮತ್ತೆ ಒಂದೇ ಒಂದು ಸಿಗರೇಟನ್ನು ಹಚ್ಚಲಿಲ್ಲ.

ಅವರು ಕುಡಿಯುವುದನ್ನೂ ಕಡಿಮೆ ಮಾಡಿದರು. ಹಿಂದಿನಂತೆ ಪಾರ್ಟಿಗಳಿಗೆ ಹೆಚ್ಚು ಹೋಗುತ್ತಿರಲಿಲ್ಲ, ಹೋದರೂ ಹೆಚ್ಚು ಕುಡಿಯುತ್ತಿರಲಿಲ್ಲ, ಮನೆಗೆ ಬಂದ ನಂತರವೂ ಕುಡಿಯುತ್ತಿದ್ದವರು ಅದನ್ನೂ ನಿಲ್ಲಿಸಿಬಿಟ್ಟರು. ಡಯಾಬಿಟಿಸ್‌ನಿಂದಾಗಿ ಆಗಲೇ ಒಂದು ಕಣ್ಣು ಕಳೆದುಕೊಂಡಿದ್ದ ಲಂಕೇಶರ ದೇಹದಲ್ಲಿ ಲಿವರ್ ಸಮಸ್ಯೆ ಕೂಡ ಕಾಣಿಸಿಕೊಂಡಿತು. ಶಾಲೆ ಮತ್ತು ಕಾಲೇಜು ದಿನಗಳಲ್ಲಿ ಫುಟ್‌ಬಾಲ್ ಆಡುತ್ತಿದ್ದ ಲಂಕೇಶರ ಕಾಲುಗಳು ಮೊದಲೇ ದಪ್ಪವಾಗಿದ್ದವು ಮತ್ತು ಗಟ್ಟಿಮುಟ್ಟಾಗಿದ್ದವು. ಅಂತಹ ಕಾಲುಗಳು ಬಾತುಕೊಳ್ಳಲಾರಂಭಿಸಿದವು. ಮೊದಮೊದಲು ಲಿವರ್ ಸಮಸ್ಯೆಯಿಂದಾಗಿ ಅವರ ಕಾಲುಗಳು ಬಾತುಕೊಳ್ಳುತ್ತಿವೆ ಎಂದು ಯಾರಿಗೂ ಗೊತ್ತಾಗಲಿಲ್ಲ.

ಒಂದು ದಿನ ಲಂಕೇಶರಿಗೆ ಜ್ವರ ಬಂತು. ಡಾಕ್ಟರ್ ಹತ್ತಿರ ಹೋಗೋಣ ಎಂದು ಗೌರಿ ಮತ್ತು ಬೇಬಿ ಎಷ್ಟು ಹೇಳಿದರೂ ಲಂಕೇಶರು ಒಪ್ಪಲಿಲ್ಲ, ಬದಲಾಗಿ ಹತ್ತಿರದ ಔಷಧಿ ಅಂಗಡಿಯಿಂದ ಹಲವು ಮಾತ್ರೆಗಳನ್ನು ತರಿಸಿಕೊಂಡು ಸುಮ್ಮನಾದರು. ಗೌರಿಗೆ ಅವಳ ಅಪ್ಪನ ಸ್ಥಿತಿ ಕಂಡು ಯೋಚನೆ ಆಗಿತ್ತು. ಪತ್ರಿಕೆ ಆಫೀಸು ಮತ್ತು ಆಕೆ ಕೆಲಸ ಮಾಡುತ್ತಿದ್ದ ಆಫೀಸಿನ ಮಧ್ಯೆಯೇ ಆಗ ಜಯದೇವ ಹೃದ್ರೋಗ ಆಸ್ಪತ್ರೆ ಇದ್ದದ್ದು. ಆಗ ಆ ಆಸ್ಪತ್ರೆಯ ನಿರ್ದೇಶಕರಾಗಿದ್ದ ಡಾ. ಪ್ರಭುದೇವ್ ಅವರ ಪರಿಚಯ ಆಕೆಗಿತ್ತು ಮತ್ತು ಅವರು ಲಂಕೇಶರ ಅಭಿಮಾನಿ ಕೂಡ ಆಗಿದ್ದರು. ಹಿಂದೊಮ್ಮೆ ತಮ್ಮ ಹಾರ್ಟ್ ಟೆಸ್ಟ್ ಮಾಡಿಸಿಕೊಳ್ಳಲು ಲಂಕೇಶರು ಡಾ. ಪ್ರಭುದೇವರನ್ನು ಭೇಟಿ ಆಗಿದ್ದರು.

ಅವತ್ತು ಗೌರಿ ಆಫೀಸಿಗೆ ಹೋಗುವ ಮುನ್ನ ಜಯದೇವ ಆಸ್ಪತ್ರೆಗೆ ಹೋಗಿ ಡಾ. ಪ್ರಭುದೇವ್ ಅವರನ್ನು ಭೇಟಿ ಆಗಲು ಪ್ರಯತ್ನಿಸಿದಳು. ಆದರೆ ಆ ಹೊತ್ತಿನಲ್ಲಿ ಪ್ರಭುದೇವ್ ಅವರು ಆಪರೇಶನ್ ಥಿಯೇಟರ್‌ನಲ್ಲಿ ಬಿಸಿ ಇದ್ದರಂತೆ. ಆಗ ಗೌರಿ ತನ್ನ ಆಫೀಸಿಗೆ ಹೋಗಿ ಲಂಕೇಶರ ಆರೋಗ್ಯ ಸ್ಥಿತಿಯ ಬಗ್ಗೆ ಪ್ರಭುದೇವರಿಗೆ ಒಂದು ಪತ್ರವನ್ನು ಫ್ಯಾಕ್ಸ್ ಮಾಡಿದಳಂತೆ.

ಆಪರೇಶನ್ ಥಿಯೇಟರ್‌ನಿಂದ ಹೊರಬಂದ ಕೂಡಲೇ ಆ ಫ್ಯಾಕ್ಸ್ ಅನ್ನು ನೋಡಿದ ಡಾ. ಪ್ರಭುದೇವ್ ಅವರು ಲಂಕೇಶರ ಆಫೀಸಿಗೆ ಒಂದು ಆಂಬ್ಯುಲೆನ್ಸ್‌ನಲ್ಲಿ ಇಬ್ಬರು ವೈದ್ಯರನ್ನು ಕಳುಹಿಸಿ, ಕೂಡಲೇ ಲಂಕೇಶರು ಆಸ್ಪತ್ರೆಗೆ ಬರಬೇಕೆಂದು ಹೇಳಿದರು. ಆ ವೈದ್ಯರೊಂದಿಗೆ ಆಸ್ಪತ್ರೆಗೆ ಹೋಗಲು ಲಂಕೇಶರು ನಿರಾಕರಿಸಿದಾಗ ಪ್ರಭುದೇವ್ ಅವರೇ ಪತ್ರಿಕೆ ಆಫೀಸಿಗೆ ಫೋನ್ ಮಾಡಿ "ನೀವು ಬರಲ್ಲ ಎನ್ನುವ ಹಾಗಿಲ್ಲ, ನಿಮ್ಮನ್ನ ಬಲವಂತವಾಗಿಯಾದರೂ ಆಸ್ಪತ್ರೆಗೆ ಕರೆಸಿಕೊಳ್ಳುತ್ತೇನೆ. ನಿಮ್ಮ ಆರೋಗ್ಯವನ್ನು ಟೆಸ್ಟ್ ಮಾಡಿ ಕಳುಹಿಸುತ್ತೇನೆ" ಎಂದು ದಬಾಯಿಸಿದರು. ಆದರೆ ವಿಧಿ ಇಲ್ಲದೆ ಲಂಕೇಶರು "ನಾನು ಆಂಬ್ಯುಲೆನ್ಸ್‌ನಲ್ಲಿ ಬರಲ್ಲ, ನನ್ನ ಕಾರಿನಲ್ಲೇ ಬರುತ್ತೇನೆ" ಎಂದು ಹೇಳಿ ಡ್ರೈ[ವರ್] ರೇವಣ್ಣನ ಜೊತೆ ಹೊರಟರು.

ಲಂಕೇಶರು ಆಸ್ಪತ್ರೆಗೆ ಹೆಜ್ಜೆ ಇಡುತ್ತಿದ್ದಂತೆ ಪ್ರಭುದೇ[ವ್] ಅವರು ಲಂಕೇಶರನ್ನು ಅಡ್ಮಿಟ್ ಮಾಡಿಕೊಂಡೇ ಬಿಟ್ಟ[ರು]. ಅಲ್ಲಿಯೇ ಹಲವಾರು ಟೆಸ್ಟ್‌ಗಳನ್ನು ಮಾಡಿಸಿದರು. ... ಲಂಕೇಶರನ್ನು ಲಿವರ್ ಸಮಸ್ಯೆ ಕಾಡುತ್ತಿರುವು[ದು] ಸ್ಪಷ್ಟವಾಯಿತು. ಅದೇ ಹೊತ್ತಿಗೆ ಅಮೆರಿಕದಿಂದ ಬಂದಿ[ದ್ದ] ಇಬ್ಬರು ಲಿವರ್ ಸ್ಪೆಷಲಿಸ್ಟರನ್ನೂ ಆಸ್ಪತ್ರೆಗೆ ಕರೆಸಿಕೊಂ[ಡು] ಲಂಕೇಶರಿಗೆ ಎಂತಹ ಚಿಕಿತ್ಸೆ ಅಗತ್ಯ ಎಂದು ಪ್ರಭುದೇವ್... ಚರ್ಚಿಸಲಾರಂಭಿಸಿದರು.


ಅವತ್ತು ಆಸ್ಪತ್ರೆಯಲ್ಲಿ ಲಂಕೇಶರೊಂದಿಗೆ ಇದ್ದ... ಗೌರಿ. ಗೌರಿಯನ್ನು ಪ್ರಭುದೇವರ ಚೇಂಬರ್‌ಗೆ ಕರೆಸಿಕೊಂ[ಡು]... ಲಿವರ್ ಸ್ಪೆಷಲಿಸ್ಟರು ಲಂಕೇಶರನ್ನು ಅಮೆರಿಕಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಲಿವರ್ ಟ್ರಾನ್ಸ್‌ಪ್ಲಾಂಟ್ ಆಪರೇಷನ್ ಮಾಡಿಸಿದರೆ ಸೂಕ್ತ ಎಂದೂ, ಅವರ ಮಕ್ಕಳ[ಲ್ಲಿ] ಯಾರಾದರೊಬ್ಬರು ತಮ್ಮ ಲಿವರ್‌ನ ಒಂದು ಭಾ[ಗ] ಕೊಡಲು ಸಿದ್ಧರಿದ್ದರೆ ಒಳ್ಳೆಯದೆಂದೂ ಗೌರಿಗೆ ಸೂಚಿಸಿದರು. ಆಗ ಗೌರಿ ಹಿಂದೂ ಮುಂದೂ ನೋಡದೆ "ಲಿವರ್ ಭಾಗವನ್ನು ಅಪ್ಪನಿಗೆ ಕೊಡುವುದಕ್ಕೆ ನಾನು ಮತ್ತು ನ[ನ್ನ] ತಂಗಿ ಬೇಬಿ ರೆಡಿ ಇದ್ದೇವೆ" ಎಂದಳಂತೆ. ಅದಕ್ಕೆ ... ವೈದ್ಯರು "ಮೊದಲು ನಿಮ್ಮಿಬ್ಬರನ್ನು ಹಲವಾರು ಟೆಸ್ಟ್‌ಗಳ[ಗೆ] ಒಳಪಡಿಸಬೇಕಾಗುತ್ತದೆ. ಯಾರ ರಕ್ತ ಇತ್ಯಾದಿಗಳ[ು] ಸೂಕ್ತವಾಗುತ್ತವೋ ಅವರೇ ತಮ್ಮ ಲಿವರ್‌ಅನ್[ನು] ಕೊಡಬಹುದು" ಎಂದರಂತೆ.

ಇದಾದ ಕೆಲ ಹೊತ್ತಿನ ನಂತರ ನಾನು ಮತ್ತು ಬೇ[ಬಿ] ಆಸ್ಪತ್ರೆಗೆ ಹೋದೆವು. ಆಸ್ಪತ್ರೆಯ ಹೊರಗೇ ನಮ್ಮನ್ನ[ು] ಭೇಟಿ ಆದ ಗೌರಿ ವೈದ್ಯರು ಹೇಳಿದ್ದನ್ನೆಲ್ಲ ನಮ್ಮಿಬ್ಬರಿ[ಗೆ] ವಿವರಿಸಿದಳು. ಆಗ ನಾನು "ನನ್ನನ್ನೂ ಟೆಸ್ಟ್ ಮಾಡಲಿ, ನಾನೇ ಸೂಕ್ತವಾಗಿ ಕಂಡುಬಂದರೆ ನಾನೂ ನನ್ನ ಲಿವರ್‌ಅನ್[ನು] ಕೊಡಲು ರೆಡಿ" ಅಂದೆ. ಇದೆಲ್ಲ ನಡೆಯುವ ಹೊತ್ತಿ[ಗೆ] ಲಂಕೇಶರು ಒಬ್ಬರೇ ಆಸ್ಪತ್ರೆಯ ರೂಮಿನಲ್ಲಿದ್ದರು. ಅವರಿ[ಗೆ] ಯಾರಾದರೊಬ್ಬರು ಈ ಲಿವರ್ ಟ್ರಾನ್ಸ್‌ಪ್ಲಾಂಟ[್] ವಿಷಯವನ್ನು ಹೇಳಬೇಕಿತ್ತು. ಮೊದಲೇ ಅವರಿಗೆ ಆಸ್ಪತ್ರೆ, ಆಪರೇಷನ್, ಇಂಜೆಕ್ಷನ್ ಇತ್ಯಾದಿಗಳನ್ನು ಕಂಡ[ರೆ] ಆಗುತ್ತಿರಲಿಲ್ಲ, ಇನ್ನು ದೂರದ ಅಮೆರಿಕಕ್ಕೆ ಹೋ[ಗಿ] ಟ್ರಾನ್ಸ್‌ಪ್ಲಾಂಟ್ ಮಾಡಿಸುವ ಬಗ್ಗೆ ಹೇಳಿದರೆ ಅವರ[ು] ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದೇ ನಮಗೆ ಗೊತ್ತಿರಲಿಲ್ಲ. ನಾನು ಮತ್ತು ಬೇಬಿ ಲಂಕೇಶರಿದ್ದ ರೂಮಿನ ಹೊರಗೆ ನಿಂತುಕೊಂಡೆವು. ಗೌರಿ ಒಳಗೆ ಹೋಗಿ ಅಂತಹ ದೊಡ್ಡ ಆಪರೇಷನ್ ಬಗ್ಗೆ ಸಾಧ್ಯವಾದಷ್ಟು ಸಹಜವಾಗಿ ಲಂಕೇಶರಿ[ಗೆ] ಹೇಳಲು ಪ್ರಯತ್ನಿಸಿದಳು. "ಏನೂ ಯೋಚನೆ ಮಾಡಬೇಡ, ನಾನು, ಬೇಬಿ, ಅಮ್ಮ ಮೂವರೂ ನಮ್ಮ ಲಿವರ್‌ನ ಭಾಗವನ್ನು ಕೊಡಲು ರೆಡಿ ಇದ್ದೇವೆ" ಎಂದಳು. ಆ[ಗ] ಲಂಕೇಶರು ಒಂದು ಕ್ಷಣವೂ ಯೋಚಿಸದೆ "ಅಮ್ಮ ಬೇಡ, ಆಕೆಯಿಂದ ನಾನು ಇಲ್ಲಿಯತನಕ ಪಡೆದಿರುವುದೇ ಹೆಚ್ಚು, ಈಗ ಆಕೆಯ ದೇಹದ ಭಾಗವನ್ನೂ ನಾನು ಪಡೆಯಲಾರೆ" ಎಂದು ಖಡಾಖಂಡಿತವಾಗಿ ಹೇಳಿಬಿಟ್ಟರು.

(ಮುಂದುವರೆಯುತ್ತದೆ)

ಭೀಮ

ಬಾಯ್ದೆರೆದರೇ
ಕೊರಳ ಗೂಡಿಂದ
ಸಮರಸದ ಹಕ್ಕಿ ಹಾರಿಬಂದು,
ಸಾಮರಸ್ಯದ ದೀಪಕೆ ತೈಲವನಿಕ್ಕಿ,
ಆರದಂತೆ ರೆಕ್ಕೆಯನು ಪ್ರಣತಿಗೆ ಹಿಡಿಯುತ್ತದೆ,
ಕೊಡೆಯ ಹಾಗೆ.
ಬೀಸುವಗಾಳಿ ಬಲಾಢ್ಯವಿದ್ದರೂ ಎದೆಗುಂದದೆ.
ಮುಟ್ಟಿಸಿಕೊಳ್ಳದವರ ದಿಟ್ಟಿಸುತ್ತ
ಒಮ್ಮೊಮ್ಮೆ ಬಾಯಿ ಎಂಬುದು
ಬಂದೂಕಿನ ನಳಿಕೆಗಿಂತ ಭಯಾನಕ.
ಮಾಸಿಸ ಸಿಡಿಮದ್ದಿನ ಏಟಿಗೆ
ಕಲ್ಮಷ ಮನಗಳ ಕಲ್ಲು ಬಂಡೆಯಂಥ ಕೊಳಕು,
ಛಿದ್ರ ಛಿದ್ರ.
ಮೇಲು-ಕೀಳು ಸಾರಿದ
ಧರ್ಮ ಶಾಸ್ತ್ರಗಳೆಲ್ಲ ಕಂಗೆಟ್ಟು
ಡೇರೆ ಹುಡುಕಿದರೂ
ಅಟ್ಟಾಡಿಸಿ ನೆಲಸಮ ಮಾಡಿ,
ಅಹಂಕಾರದ ಸಮಾಧಿಯ ಮೇಲೆ
ಐಕ್ಯತೆಯ ಬಾವುಟಕೆ ಬುನಾದಿ ಹಾಕಿ
ನೆಟ್ಟಗೆ ನಿಲ್ಲುವವರೆಗು
ಘರ್ಜಿಸುವುದನ್ನು ನಿಲ್ಲಿಸದ
ಯುದ್ಧ ಟ್ಯಾಂಕರು.
ಎದ್ದವರ ಕೈಗೆ ಬಿದ್ದವರ ಹೊಂದಿಸುತ್ತ
ಎದ್ದು ನಡೆದ ಬಡವನ ಬೀದಿಯಲಿ.
ತಿರುಗುವುದನ್ನು ನಿಲ್ಲಿಸದ
ಬುದ್ಧನ ಚಕ್ರಕ್ಕೆ ಜಂಗಮ ಪಾದವಾದೆ.
ಕಲ್ಲು ಮನಗಳನು ಕರಗಿಸಿ,
ಮೆತ್ತಗೆ ಮಾಡದೇ
ಅವುಗಳನು ಗಟ್ಟಿ ಮಾಡಿದೆ.
ಚಿಮಣಿಯ ಬುಡ್ಡಿಯ ಬೆಳಕಿನಲಿ
ಅಸ್ಪಷ್ಟ ಅಕ್ಷರಗಳನೋದಿ
ಜಗಕೆ ಜ್ಯೋತಿಯಾದೆ.
ಪುನರ್‌ಜನ್ಮ ಬೇಡವಾದರೂ
ಬುದ್ಧನ ಮುದ್ದೆ.
ಬಸವನ ಅಪರಾವತಾರ



• ಜೆ.ವಿ. ಶಿವಕುಮಾರ ಅಮ್ಮಾಪುರ



...ಂತೂ ಜುಮ್ಮಿನು ದಿಲ್ಲಿ ನೋಡಿ ಬಂದ್ಲಪ್ಪ

...ಮ್ಮಿಯು ದಿಲ್ಲಿ ಟೂರಿನ ಬಗ್ಗೆ ಕೇಳಲು ...ದಿಂದ ಕುಳಿತಿದ್ದ ಕಾಳಮಾವ ಆವಳು ಬಂದಕೂಡಲೇ ...ಮುನುಗಿಸಿ,

"...ಂತು ದಿಲ್ಲಿ ನೋಡಿಕಂಡು ಬಂದ್ಯಲ್ಲ ಬುಡು"

...ಬರದೆ ಇನ್ನೇನು ಅಲ್ಲೆ ಇರಕ್ಕಾದತೇ. ಆ ಹಾಳು ... ಮನುಸ್ರು ಇರಕ್ಕಾದತೆ ಮಾವ."

"...ಅದ್ಯಾಕ್ಲೆ ಅಂಗಂತೀ?"

...ಮುರದು ದಿನ ರೈಲಲ್ಲಿ ಕುಂತಗಂಡು ಹೋಗೋವತ್ತಿಗೆ ...ದ್ಲು ಕಣಮಾವ. ಅಲ್ಲಿ ಇವುಳ ಬೆರಗು ಮಾಡೋ ...ನೂ ಕಾಣಲಿಲ್ಲ, ಆದ್ರೆ ನಮ್ಮ ಕಡೆಲೆ ಚಂದ ...ದು ಬಂದ್ಲು" ಎಂದ ಉಗ್ರಿ.

"...ಜವಾಗ್ಲು ಮಾವ ನಮ್ಮ ದೇಸನೆ ಚಂದ ಕಣಮಾವ."

"...ಲ್ಲಿ ಪಾರ್ಲಿಮೆಂಟ್ ಭವನ ನೋಡಿದೇನ್ಲೆ?"

"...ೋಡಿದೆ. ರಾಗಿ ಕಲ್ಲಿಗೆ ಕಂಬ ಕೊಟ್ಟು ನಿಲ್ಲಿಸಿದಂಗೆ ... ಅದಕಂತ ನಮ್ಮ ಇದಾನಸೌಧನೆ ಚನ್ನಾಗ್ಯದೆ ...ಾವ."

"...ನ್ನೇನೇನು ನೋಡಿದೆ?"

"...ಾಷ್ಟ್ರಪತಿ ಉಳಕಂಡಿರೊ ಮನೆ ನೋಡಿದೆ. ...ೋದಾಗ ನೀರಕಡಿಕೆ ಹೋಗಂಗಾಯ್ತು, ಈ ಉಗ್ರಿ ...ೋಗಿ ತೋರಿದ. ಹೋಗಿಬುಟ್ಟು ಬಂದ ಮ್ಯಾಲೆ ...ಾಯ್ತು."

"ಇಂದ್ರಾಗಾಂಧಿ ಮನೆ ನೋಡಿ ಬೇಜಾರಾಯ್ತು ಕಣಮಾವ."

"ಆದ್ಯಾಕ್ ಬೇಜಾರಾಯ್ತಲೆ?"

"ಇವುಳೂ ಇಂದ್ರಾಗಾಂಧಿ ಮನೆ ಮೈಸೂರು ಅರಮನೆಯಂಗೊ, ಇಲ್ಲ ಲಲಿತಮಹಲ್ ನಂಗೊ ಇರತದೆ ಅನ್ನಕೊಂಡಿದ್ಲು ಕಣಮಾವ. ಅಲ್ಲಿಗೋಗಿ ನೋಡಿದಾಗ ಸಾಧಾರಣವಾದ ಮನೆ ಅದು. ಮಹಡಿನೂ ಇರಲಿಲ್ಲ, ಮನೆಸುತ್ತ ವಳ್ಳೆ ಪಾರ್ಕಿತ್ತು ಅಷ್ಟೆಯಾ. ಅದ್ಕೆ ಇವುಳು ಅಯ್ಯೋ ಇಂಗಿತ್ತೆ ಇಂದ್ರಾಗಾಂಧಿ ಮನೆ ಅಂದ್ಲು."

"ದ್ಯಾವೇಗೌಡನ ಮನಿಗೋಗಲಿಲ್ವೆ?"


"ಹೋಗಿದ್ವೊ, ಅವುರಿಲ್ಲ ಅಂದ್ರು."

"ಅದ್ಯಂಗಿತ್ತೂ?"

"ಅದು ಯಲ್ಲ ಎಂ.ಪಿ.ಗಳ ಮನೆ ತರನೆ ಇತ್ತು, ಆ ಇಡೀ ಬೀದಿಲಿ ನೀನೆ ಅನ್ನೋರು ಇಲ್ಲ, ಕ್ವಲೆ ಮಾಡಿದ್ರೂ ಕೇಳೋರಿಲ್ಲ, ಅದ್ಕೆ ಅಲವೆ ದ್ಯಾವೇಗೌಡ ಯಾವಾಗ್ಲು ಇಲ್ಲೆ ಇರದು."

"ಇನ್ಯಾರ್ ಮನಿಗೋಗಿದ್ರಿ?"

"ಯಸ್ಸೆಂ ಕಿಸ್ಣನ ಮನೆತಕ್ಕೋದೊ. ವಳಿಕೆ ಬುಡ್ಳಿಲ್ಲ, ಅವ್ಮ್ಯಾಲೆ ವಿಶ್ವನಾಥನ ಮನಿಗೋಗಿದ್ವೊ. ಅಲ್ಲಿ



ಕೆ.ಆರ್. ನಗರದ ಕಡೆ ಕುರುಬ್ರು ಬಾಡಿನೆಸರು ಮಾಡ್ತ ಕುಂತಿದ್ರು."

"ಆದು ಕಣಯ್ಯ ಕಸುಬುದಾರ್ರು ಕ್ಯಲಸ ಅಂದ್ರೆ" ಎಂದ ಸೀರ.

"ನಾಗ್ತಳ್ಳಿ ಚಂದ್ರನಿಗೆ ಉಸಾರಿಲ್ದೆ ಅವುನ ಮನೇಲೆ ಉಳಕಂಡ. ನಾವು ಹೋಗಿ ದಿಲ್ಲಿ ನೋಡಿ ಬಂದೊ ಕಣಮಾವ."

"ಏನೇನ್ ನೋಡಿದ್ರಿ?"

"ದೇವೇಗೌಡ ಬಾವುಟ ಹಾರಿಸಿ ಬಾಸಣ ಮಾಡಿದ್ನಲ್ಲ ಕೆಂಪುಕೋಟೆ ಅದ ನೋಡಿದೊ ಕಣಮಾವ. ಆಮ್ಯಾಲೆ ಕುತುಬ್ ಮಿನಾರ್ ನೋಡಿದೊ. ಸಾಬರ ಮ್ಯಾಲೆ ಈಟೊಂತರ ಮಾತಾಡ್ತರಲ್ಲಾ ಇವುರೂ, ಅವುರು ಮಾಡಿರೊ ಕ್ಯಲಸವೆಯ ನೋಡಂಗಿರದು" ಎಂದ ಉಗ್ರಿ.

"ಅದೇನು ಮಾಡಿದ್ದರ್ಲ?" ಎಂದ ಸೀರ.

"ಕೆಂಪುಕೋಟೆ ಅವುರದೆಯ. ಕುತುಬ್ ಮಿನಾರು, ಜುಮ್ಮಾ ಮಸೀದಿ, ತಾಜಮಹಲ್ಲು ಇವಿಲ್ದೆಯಿದ್ರೆ ಡೆಲ್ಲಿಲೇನದಷ್ಟ ನೋಡಕ್ಕೆ?"

"ತಾಜಮಹಲ್ಲು ಯಂಗಿತ್ತೊ ಉಗ್ರಿ?" ಎಂದುಕೊಂಡು ವಾಟಿಸ್ಸೆ ಬಂದ.

"ಚನ್ನಾಗಿತ್ತು ಕಣೊ ವಾಟಿಸ್ಸೆ. ನೀನೂ ಬರಬೇಕಿತ್ತು."

"ಬರಬೇಕಿತ್ತು. ಏನು ಮಾಡ್ತಿಯಪ್ಪ, ನಾಗ್ತಳ್ಳಿ ಚಂದ್ರು ನಮ್ಮಂಥೋರನ ಅವಾಯ್ದು ಮಾಡ್ತನೆ. ಅದಕಿಂತ್ಲು ನನಿಗೆ ಎಲ್ಲಾರ ಊರೋಗಬೇಕು ಅಂತ ಅನ್ನಸದೇಯಿಲ್ಲ."

"ನಮಿಗೂ ಅನ್ನಸ್ತಿರಲಿಲ್ಲ, ದಿಲ್ಲಿಗೋಗಿ ಬಂದಮ್ಯಾಲೆ ವರುಸಕ್ಕೊಂದು ಸತಿ ಎಲ್ಯಾರ ಹೋಗಿ ಬರನಾ ಅನ್ನುಸ್ತಾ ಅದೆ."

"ಒಳ್ಳೆ ಅನ್ನಿಸಿಕೆ. ಈಗ ದಿಲ್ಲಿಯಿಂದ ನನಿಗೇನು ತಂದ್ರಿ?"

"ಕಾಳಮಾವನಿಗೂ, ಸೀರ ಮಾವನಿಗೂ ಒಂದೊಂದು ಸ್ವೆಟರ್ ತಂದವುಳೆ."

"ಬೇಸಿಗೆ ಆದ್ರಿಂದ ರೇಟ್ ಕಡಿಮೆಯಾಗಿತ್ತೇನೊ ತಂದವುಳೆ. ಅವ ಯೂಸ್ ಮಾಡಕ್ಕೆ ಮುಂದಿನ ಚಳಿಗಾಲದವರಿಗೂ ಕಾಯಬೇಕು. ನನಿಗೇನು ತಂದದ್ದಿರಿ ಹೇಳಿ."

"ನಿನಿಗೆ ಬ್ರಾಂಡಿ ತಗಳಕ್ಕೆ ಅಂತ ಹೋಗಿದ್ಲು, ನಾನೆ ಬ್ಯಾಡ ಅಂತ ಒಂದು ಸಿಗ್ನೇಚರ್ ಬಾಟ್ಲಿ ತಂದೆ."

"ಡಿಲ್ಲಿಗೋಗಿ ಸಿಗ್ನೇಚರ್ ಬಾಟ್ಲಿ ತಂದಿದ್ದಿರಲ್ಲೋ ಉಗ್ರಿ. ಅವು ಇಲ್ಲೆ ಸಿಗತವೆ. ಅದೇನಂಥ ಕಿಕ್ ಕೊಡದಿಲ್ಲ, ಒಂಥರಾ ಸಿಟ್ರಾ ಕುಡದಂಗಾಯ್ತದೆ. ಇರ್ಲಿ, ಅಭಿಮಾನದಿಂದ ತಂದ ಗಿಪ್ಟ ಬ್ಯಾಡ ಅನ್ನದಿಲ್ಲ, ಸಿಗ್ನೆಚರ್‌ಗೆ ನಾಟಿಕೋಳಿ ಮಟನ್ನು ಮ್ಯಾಚಾಯ್ತದೆ. ಯಾವಾಗ ಮಾಡ್ತಿಯಕ್ಕ?"

"ಮಾಡ್ತಿನಿರ್ಲಿ. ನಾನಿನ್ನೂ ಸುಧಾರಿಸಿಗತ್ತಾಯಿದ್ದಿನಿ."

"ಸುಧಾರಾಯಿಸಿಗಳಕ್ಕ, ಅಮ್ಯಾಲೆ ಮರೆಯಲಾಗದ್ದ ಏನಾರ ನೋಡಿದ್ರೆ ಹೇಳಕ್ಕ."

"ಮರಿಲಾಗದ್ದ ನೋಡಿದ್ಲು ಕಣೊ ಪಾಟಿಸ್ಸೆ. ರೈಲು ಕಾನ್ಪುರದತ್ರ ಹೋಗುವಾಗ ಬೆಳಕರಿತು."

"ಕಾನ್ಪುರ ಅಂದ್ರೆ ನಮ್ಮ ಚೆಡ್ಡಿಗಳ ಕೇಂದ್ರಸ್ಥಾನ ಅಲವೇನೊ."

"ಊಕಣೊ. ಅಲ್ಲಿ ಕಿಟಕಿಯಿಂದ ವರಿಕೆ ನೋಡಿದ್ಲು, ರೈಲ್ವೆ ಹಳಿ ಪಕ್ಕದಲ್ಲಿ ಜನ ಮೈಲಿಗಟ್ಲೆ ಕುಂತಿದ್ರು."

"ಯಾಕೇ?"

"ಬೆಳಕರಿತು ಅಂದ್ರೆ ಇನ್ನೇನು ಕ್ಯಲಸ ಹೇಳವುರಿಗೆ. ಕಕ್ಕಸ್ ಮಾಡ್ತ ಕುಂತಿದ್ರು. ಆಶ್ಚರ್ಯ ಅಂದ್ರೆ ಹೆಂಗಸರೂ ಕುಂತಿದ್ರು. ಜುಮ್ಮಿಗೆ ಅದೇನು ಕುತೂಹಲ ಆಯ್ತೋ ನೋಡೆಬುಟ್ಲು."

"ಅದ್ಯಾಕಕ್ಕ ಅಂಗೆ ನೋಡಿದೆ?"

"ಪಾಪ ತುಂಬಾ ಬಡುವುರು ಕಂಡ್ಯ. ಅವುರು ರೈಲಿ ಮಗ್ಲಲ್ಲಿ ಗುಡ್ಲಾಯ್ಕಂಡವ್ರುರೆ. ಅಲ್ಲಿ ಮನಿಕಳ್ಕೆ ಜಾಗಿಲವೇನೊ, ಇನ್ನೆಲ್ಲಿಗೋದರು ಅಂತ ಯೋಚನೆ ಮಾಡತಿದ್ದೆ ನಾನೇನು ನೋಡಕ್ಕೋಗಿರಲಿಲ್ಲ."

"ಅಂತೂ ಆರೆಸೆಸ್ಸಿನ ಕೇಂದ್ರ ಸ್ಥಾನನೆ ಕಕ್ಕಸಿನ ಕೋಟೆಯಂಗಿತ್ತು ಅನ್ನಿ."

"ಊ ಕಣೊ. ಯತ್ತಮುಂದಾಗಿ ನೋಡಿದ್ರು ನಾವೆ ಚನ್ನಾಗಿರೋರು. ಬೆಂಗಳೂರಿಂದ ಮಂಗಳೂರಿಗೆ, ಬೆಂಗಳೂ...

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

...ರಿಂದ ಮೈಸೂರು, ಮಡಿಕೇರಿ, ಶಿವಮೊಗ್ಗ ನೀನು ಯಾವ ದಿಕ್ಕಿಗೇ ಹೋಗು ನಮ್ಮ ಕರ್ನಾಟಕದಂತ ಜಾಗವ ಎಲ್ಲೂ ನೋಡ ಲಿಲ್ಲ, ಯಲ್ಲಾ ಕಡೆಲೂ ಬ್ಯಂಗಾಡು ಬಿಸ್ಲು ಬಟ್ಬಂ ಬಯಲು."

"ಆ ಕಡೆಯಲ್ಲ ಗೋದುವೆ ಬ್ಯಳೆ ಅಲವೇನ್ಲ" ಎಂದ ಕಾಳಮಾವ.

"ಬತ್ತನು ಬ್ಯಳಿತರೆ ಕಣಮಾವ. ಆದ್ರೆ ನಮ್ಮಷ್ಟು ಬ್ಯಳಿಯದಿಲ್ಲ."

"ಬತ್ತ ಅಂದೇಟಿಗೆ ಗೆಪ್ತಿಗೆ ಬತ್ತು ಕಣಮಾವ. ನ್ಯನಿಸಿಗಂಡ್ರೇ ನಗು ಬತ್ತದೆ."

"ಅಂತದೇನಾಯ್ತೂ?"

"ನಮ್ಮ ಜೊತೆ ಎಡೂರಪ್ಪನ ಅಭಿಮಾನಿವಬ್ಬ ಬಂದಿದ್ದ. ಎಡೂರಪ್ಪನ ಸುದ್ದಿ ತಗುದ್ರು ಸಾಕು, ದಿನವೆಲ್ಲ ಹೊಗಳೋನು. ನಾವು ಇಂಡಿಯಾ ಪಾಕಿಸ್ತಾನದ ಗಡಿ ಅತ್ಯಕೋದಾಗ ಯಾರೊ ಬಾಸುಮತಿ ಅಕ್ಕಿ ಕೊಡ್ತರೆ ತಗಳನ ಬರಿ ಇಪ್ಪತ್ತು ರೂಪಾಯಿ ಕೆ.ಜಿ. ಅಂತ ಅವುನು ಬಂದ. ನಾವ್ಯಾರು ತಗಳ್ಳಿಲ್ಲ, ಅವು ನಂಥೋರೆ ಒಂದಿಬ್ರು ಸೇರಿಕಂಡು ಒಂದು ಕುಂಟಾಲಕ್ಕಿ ತಗಂಡ್ರು. ಲಗೇಜು ಮಾಡಿಸಿ ರೈಲಿಗಾಕಿಸಿಗಂಡ್ರು. ಅತ್ಲಿಂದ ಬತ್ತ ಹೈದರಾಬಾದಿಗೆ ಬಂದು ತಿಂಡಿ ತಿನ್ನುವಾಗ, ಎಲ್ಲಾ ಅಕ್ಕಿಯಂಗವೆ ನೋಡನಾ ಅಂತ ಚೀಲ ತೂತು ಮಾಡಿಸಿ ನೋಡಿದೆ ಕಣಮಾವ. ಅವುನ ಮನಿಯಾಳಾಗ. ಬಾಸುಮತಿ ಅಕ್ಕಿ ಅಂತ ಸೊಸೈಟಿ ಅಕ್ಕಿ ಮಾರಿದ್ದ."

"ಇಸಿಸಿ, ತಗಳವಾಗ ನೋಡಲಿಲ್ಲವೇನ್ಲೆ?"

"ತಗಳವಾಗ ತೋರಿದವು ಬಾಸುಮತಿ ಅಕ್ಕಿ ಕಣಮಾವ. ಗಾಡಿಗೆ ಹಾಕಿದಾಗ ಪಾಲೀಸಾಕಿರೊ ಸೊಸೈಟಿ ಅಕ್ಕಿ ಹಾಕಿ ಬುಟ್ಟವ್ರನೆ. ಮದ್ಲೆ ಅವ್ರನ್ನ ಕಂಡ್ರೆ ಒಂಥರಾ ನೆಗುಬುರದು. ಯಾವಾಗ ಸೊಸೈಟಿ ಅಕ್ಕಿ ತಗಂಡನೊ ಆಗ್ಲಿಂದ ಯಲ್ಲಾರು ನಗಾಡಿದ್ದೆ ನಗಾಡಿದ್ದು. ಪಾಪ ಅವುನ ಮಕನೋಡಕ್ಕಾಯ್ತಿರಲಿಲ್ಲ."

"ಹ್ಯರಗಡಿಕೋದಾಗ ಉಸಾರಾಗಿರಬೇಕು ಕಂಡ್ಯ. ಜನ ಮೋಸ ಮಾಡಕ್ಕೆ ಕಾಯ್ತಾಯಿರತರೆ" ಎಂದ ಕಾಳಮಾವ.

"ಅದರಲ್ಲೂ ಹಳ್ಳಿಯೋರು ದಿಲ್ಲಿಲಿದ್ರೆ ಗೊತ್ತಾಯ್ತದೆ ಕಣಕ್ಕ, ಇನ್ನೇನಾಯ್ತು ಹೇಳಕ್ಕ" ಎಂದ ವಾಟಿಸ್ಸೆ.


"ಇರ್ಲ ಹೇಳ್ತೀನಿ ಇನ್ನೂ ಅಂದೆ." ❦

...ೋಡುವುದು ತಿಳಿಯುವುದು ▶▶▶

...ಂಲಿಗೆ ಹುಟ್ಟುಹಬ್ಬ ಎಂಬ ವಿಚಿತ್ರ ಗುರುತುಕಲ್ಲಿನ ಬಗ್ಗೆ ಮಾತನಾಡುತ್ತಾ 'ಇನ್ನೊಬ್ಬರನ್ನು ನೋಡುವುದು, ...ಸುವುದು' ಎಂಬುದನ್ನು ಕುರಿತು ಬರೆಯುತ್ತಿರುವಾಗಲೇ ಇದೇ ವಸ್ತುವನ್ನುಳ್ಳ 'ಹಿರೋಷಿಮಾ, ನಿನ್ನನ್ನು ... ಪ್ರೀತಿಸುವೆ' ಎಂಬ ಚಿತ್ರ ನೆನಪಾಗುತ್ತಿದೆ. ಹಿಂದೊಮ್ಮೆ ಈ ಬಗ್ಗೆ ಬರೆದಿದ್ದೆ; ಈಗ ಆ ಚಿತ್ರದಲ್ಲಿರುವ ಒಂದು ...ಹೊಸ ಅರ್ಥದೊಂದಿಗೆ ಹೊಳೆಯುತ್ತಿದೆ. 'ನೀನು ನೋಡುತ್ತಾ ಹೋದರೆ, ನಿಜಕ್ಕೂ ವಿವರಗಳನ್ನೆಲ್ಲ ಗಮನಿಸುತ್ತಾ ...ದರೆ ಹೊಸ ಹೊಸ ವಿಷಯಗಳು ತಿಳಿಯುತ್ತದೆ' ಎಂಬ ಮಾತು ಆ ಚಿತ್ರದಲ್ಲಿ ಬರುತ್ತದೆ. ಒಂದು ಸ್ತರದಲ್ಲಿ ...ತ್ರದ ವಸ್ತು 'ನೋಡುವುದು'. ಹಿರೋಷಿಮಾ ದ್ವೀಪದ ಮೇಲೆ ಅಣುಬಾಂಬ್ ಸ್ಫೋಟವಾಗಿ ಒಂದು ದಶಕವಾಗಿದೆ; ...ದುರಂತಮಯ ಸ್ಫೋಟದ ನೆನಪಿಗಾಗಿ ಚಿತ್ರ ತೆಗೆಯುತ್ತಿದ್ದಾರೆ; ಅಣುಸ್ಫೋಟ ವಿರೋಧಿ ಪ್ರದರ್ಶನ, ಮೆರವಣಿಗೆ ...ತ್ತಿವೆ. ದೇಶ ದೇಶಗಳ ನಡುವಿನ ಭ್ರಾತೃತ್ವ ಕುರಿತು ಚಿತ್ರ, ಕತೆ, ಭಾಷಣ ಮುಂತಾದವೆಲ್ಲ ಆಗುತ್ತಿದೆ. ಅಂಥ ಚಲನಚಿತ್ರವೊಂದರಲ್ಲಿ ಅಭಿನಯಿಸಲು ಬಂದಿರುವ ಫ್ರೆಂಚ್ ನಟಿಯೊಬ್ಬಳು ನಿಜಕ್ಕೂ ಹಿರೋಷಿಮಾವನ್ನು 'ನೋಡುತ್ತಿದ್ದಾಳೆ!' ತನ್ನ ಬದುಕಿನಲ್ಲಿ ಆದ ಸ್ಫೋಟ ಕೂಡ ಹಿರೋಷಿಮಾದ ದುರಂತದಂತೆಯೇ ವಿಸ್ಮೃತಿ ಸೇರಿರುವುದು, ಪ್ರಚಂಡ ವಿನಾಶದಿಂದಲೂ ಹೊಸ ಜೀವ, ಚೈತನ್ಯ ಉಕ್ಕುವುದು... ಇವತ್ತಿನ ಪ್ರೇಮ, ಆವತ್ತಿನ ನೋವಿನಂತೆಯೇ ವಿಸ್ಮೃತಿ ಸೇರುತ್ತಾ ಹೋಗುವುದು... ಆಕೆಗೆ 'ಕಾಣಿಸುತ್ತಿದೆ'. ಹಳಸಲು ಮಾತುಗಳಲ್ಲಿ ಹಿರೋಷಿಮಾದ ವಿನಾಶವನ್ನು ನೆನೆಯುವವರು ಏನನ್ನೂ ನೋಡುತ್ತಿಲ್ಲ, ಮೆರವಣಿಗೆ, ಪ್ರತಿಭಟನೆ ನಡೆಸುತ್ತಿರುವವರು ನೋಡುತ್ತಿಲ್ಲ, ಈ ನಟಿ ನೋಡುತ್ತಿದ್ದಾಳೆ– ಕಾಲದ ಪ್ರವಾಹವನ್ನು, ...ದಿಯು ಸಕ್ತಿಯನ್ನು, ವಿನಾಶದ ಗರ್ಭದಿಂದಲೇ ಚಿಗುರೊಡೆಯುವ ಹೊಸ ಜೀವ, ಹೊಸ ಪ್ರೇಮವನ್ನು, ಈ ... ಕೂಡ ಕಾಲಕ್ಕೆ, ಮರೆವಿಗೆ, ಶೂನ್ಯಕ್ಕೆ ಬಂಧಿ...



ಸುಂದರಿ ▶▶▶



ಈ ಚಿತ್ರವನ್ನು ನೋಡುತ್ತಿದ್ದಂತೆ ನನಗೆ ಆ ಫ್ರೆಂಚ್ ನಟಿಯ ಅದ್ಭುತ ಸೌಂದರ್ಯ, ಆಕರ್ಷಣೆ, ಕುತೂಹಲ ಹುಟ್ಟಿಸಿದವು. ನಾನೀಗ ಹೇಳುತ್ತಿರುವುದು ಸೌಂದರ್ಯದ ಅರೆಕೊರೆಯಾದ ವಿವರಣೆ ಇರಬಹುದು. ಆ ನಟಿ ನನಗೆ ಪಾರದರ್ಶಕ ನೀರಿನಂತೆ, ಅನೇಕ ಭಾವನೆಗಳ ಸಾರದಂತೆ ಕಾಣಿಸಿದಳು. ಅವಳ ಕಣ್ಣಿನಲ್ಲಿ ಅವಳ ನೆನಪು, ಪ್ರೇಮ, ಹತಾಶೆ ಎಲ್ಲವೂ ಇವೆ; ಆಕೆಯ ಸ್ವಾಭಿಮಾನ, ದಿಟ್ಟತನ ಇವೆ. ಇಷ್ಟೇ ಮುಖ್ಯವಾಗಿ ಹೊಸ, ಹೊಸ ಅನುಭವಗಳಿಗಾಗಿ ಅವಳ ಕಾತುರ, ದುರಾಶೆ ಇವೆ. ಅದು ಆಕೆಯ ಕಣ್ಣು, ತುಟಿ, ಮುಖದ ಒಟ್ಟಾರೆ ಅಂದದಲ್ಲಿ, ನಡಿಗೆಯಲ್ಲಿ, ಧ್ವನಿಯ ಅನುರಣನದಲ್ಲಿ ನಿಮ್ಮನ್ನು ಮುಟ್ಟುತ್ತವೆ.




ಒಂದುಕ್ಷಣ ತೀರಾ ಸೊರಗಿದವಳಂತೆ, ಇನ್ನೊಂದು ಕ್ಷಣ ಎರಡನೆಯ ಜಾಗತಿಕ ಯುದ್ಧದ ದ್ವಂದ್ವಗಳನ್ನು ಎದೆಯಲ್ಲಿ ಇಟ್ಟುಕೊಂಡು ಸ್ಪಂದಿಸುತ್ತಿರುವವಳಂತೆ, ಮತ್ತೊಂದು ಕ್ಷಣ ಮಹಾ ವ್ಯಾಮೋಹಿಯಾದ, ಚಂಚಲೆಯಾದ ಹೆಣ್ಣಿನಂತೆ ಕಾಣುವ ಈ ಫ್ರೆಂಚ್ ನಟಿಯ ಮುಖದಿಂದ ಕಣ್ಣು ಕದಲಿಸಲಾಗಲಿಲ್ಲ, ಇಂಥವಳೆದುರು ನಿಂತಾಗ ಸೌಂದರ್ಯ ಅಂದರೆ ಏನು ಅರ್ಥ? ಪಾಂಚಾಲಿ ಹೀಗಿದ್ದಳೆ? ಸೀತೆ?... ಎಂದು ಕೇಳಿಕೊಳ್ಳುತ್ತಾ ಆ ಚಿತ್ರದ ಜುಳುಜುಳು ಪ್ರವಾಹದಲ್ಲಿ ಅರ್ಥ ಮುಳುಗಿ ಚಿಂತಿಸಿದ್ದಂತೆ ಕಲ್ಪಿಸಿಕೊಂಡೆ.

–ಏಪ್ರಿಲ್ 16, 1997

'ಗಿಳಿಯು ಪಂಜರದೊಳಿಲ್ಲ'

ಸಹೃದಯರನ್ನು ತಟ್ಟಿದ ರಂಗಪ್ರಯೋಗ


ಪ್ರವೀಣ್ ಹಾಲ್ಕೂತ್ತೂರು

'ಗಿಳಿಯು ಪಂಜರದೊಳಿಲ್ಲ' ಲಂಕೇಶರು ಎಪ್ಪತ್ತರ ದಶಕದಲ್ಲಿ ರಚಿಸಿದ ನೂರಾರು ವಿಭಿನ್ನ ಪ್ರಯೋಗಗಳನ್ನು ಕಂಡ ರಂಗಕೃತಿ. ಲಂಕೇಶರ ಈ ನಾಟಕವನ್ನು ಅಸಂಗತ ನಾಟಕನೆಂದು ವಿಮರ್ಶಕರು ಹೇಳುವ ಮೂಲಕ ಈ ಕೃತಿಗೆ ಮಿತಿಯನ್ನು ಹೇರಿದ್ದಾರೆ ಎನಿಸುತ್ತದೆ. ಏಕೆಂದರೆ ಈ ನಾಟಕ ಅಸಂಗತತೆಯನ್ನು ಮೀರಿದ ಮನುಷ್ಯನ ಆಳದ ಸಂವೇದನೆಗಳನ್ನು ರಂಗಕ್ಕೆ ತಂದ ಕೃತಿ. ಈ ನಾಟಕವನ್ನು ಯುವ ನಿರ್ದೇಶಕ ಪ್ರವೀಣ್ ಹಾಲ್ಕೂತ್ತೂರು ನಿರ್ದೇಶನದಲ್ಲಿ ತೀರ್ಥಹಳ್ಳಿಯ 'ನಟಮಿತ್ರರು' ರಂಗತಂಡವು ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಂದ ರಂಗಕ್ಕೆ ತಂದಿತು.

ಶಿವಮೊಗ್ಗದಲ್ಲಿ ಲಂಕೇಶ್ ನಾಟಕೋತ್ಸವ ನಡೆದ ೬' ಗ್ಗೆ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಈ ನಾಟಕ ಎರಡು ೭ ಗಳ ಕಾಲ ಪ್ರದರ್ಶಿತಗೊಂಡಿತು.

ನಾಟಕದ ಮೊದಲ ಪ್ರದರ್ಶನ ತೀರ್ಥಹಳ್ಳಿಯ ಹೃದಯಭಾಗದಲ್ಲಿರುವ ರಾಮಮಂದಿರದ ಆಪ್ತರಂಗಮಂದಿರದಲ್ಲಿ ಹಾಗು ಎರಡನೆ ಪ್ರದರ್ಶನ ಕಾಲೇಜಿನಲ್ಲಿ ಪ್ರಯೋಗಿಸಲ್ಪಟ್ಟಿತು.

ಗುಮಾಸ್ತ ಆತನ ಹೆಂಡತಿ, ಇವರ ಮಗಳು ಮತ್ತು ಗುಮಾಸ್ತನ ಪರಿಚಿತನಾದ ಕಾರಣದಿಂದ ತನ್ನ ತಂದೆಯ ಶವಸಂಸ್ಕಾರಕ್ಕೆ ಆತನಿಂದ ನೆರವು ಬಯಸಿ ಬರುವ ಕ್ಷೌರಿಕ, ಇವೇ ನಾಟಕದ ನಾಲ್ಕು ಪಾತ್ರಗಳು. ಲಂಕೇಶರೇ ಹೇಳಿದಂತೆ ಮಧ್ಯಮವರ್ಗದ ಗೋಳನ್ನು ಈ ನಾಟಕ ಹೇಳುತ್ತದೆ. ಅಷ್ಟೇ ಅಲ್ಲ, ಮನುಷ್ಯನ ಸಣ್ಣತನ, ಮಧ್ಯಮವರ್ಗದ ಆತ್ಮವಂಚನೆಗೂ ಇದು ಕನ್ನಡಿ ಹಿಡಿಯುತ್ತದೆ.

ಗುಮಾಸ್ತನಿಗೆ ಕ್ಷೌರಿಕ ತನ್ನ ತಂದೆಯ ಶವ ಸಂಸ್ಕಾರಕ್ಕೆ ದುಡ್ಡು ಬೇಕು ಎಂದು ಸುಳ್ಳು ಹೇಳುತ್ತಿದ್ದಾನೆ ಎನ್ನುವ ಅನುಮಾನ. ಹೆಂಡತಿಗೆ ಇಂತಹ ಅನುಮಾನ ವಿಲ್ಲದಿದ್ದರೂ 'ನಮ್ಮ ಸಮಸ್ಯೆಗಳೇ ಹಾಸಿ ಹೊದೆಯುವಷ್ಟಿದೆ, ಬೇರೆಯವರಿಗೆ ಯಾಕೆ ಹಣದ ಸಹಾಯ ಮಾಡಬೇಕು' ಎಂಬ ತರ್ಕ. ಇವರಿಬ್ಬರಿಗೆ ಭಿನ್ನವಾಗಿ ತನ್ನ ಮುಗ್ಧತೆಯಿಂದ ತನ್ನ ಅಪ್ಪ ಅಮ್ಮರ ಆತ್ಮಸಾಕ್ಷಿಯನ್ನು ಚುಚ್ಚುವ ಮಗಳು.

ಲಂಕೇಶರ ಈ ನಾಟಕವನ್ನು ರಂಗಕ್ಕೆ ತರುವುದು ಹೊರನೋಟಕ್ಕೆ ಸುಲಭ ಎನಿಸಿದರೂ ಅದು ನಿಜವಲ್ಲ. ಲಂಕೇಶರನ್ನು ಸರಿಯಾಗಿ ಗ್ರಹಿಸಿದವರಷ್ಟೇ ಇದರಲ್ಲಿ ಯಶಸ್ವಿಯಾಗುತ್ತಾರೆ. "ಸರಳವಾಗಿ, ವೇಗವಾಗಿ, 'ಮೌನ'ಗಳ ಪೂರ್ಣ ಉಪಯೋಗದೊಂದಿಗೆ ನಾಟಕ ನಡೆದರೆ ಒಳ್ಳೆಯದು" ಎಂಬ ಲಂಕೇಶರ ಸೂಚನೆಯನ್ನು ನಿರ್ದೇಶಕರು ಸೂಕ್ತವಾಗಿ ಪಾಲಿಸಿದ್ದು ಈ ಪ್ರದರ್ಶನದಲ್ಲಿ ಗೋಚರಿಸುತ್ತಿತ್ತು.

ಶಿವಮೊಗ್ಗದಲ್ಲಿ ಲಂಕೇಶರ 'ಕಲ್ಲು ಕರಗುವ ಸಮಯ' ನಾಟಕ ಅಭಿನಯಿಸಿದ ಚರಕದ ನೌಕರರಂತೆ 'ಗಿಳಿಯು ಪಂಜರದೊಳಿಲ್ಲ' ನಾಟಕದ ಪಾತ್ರಧಾರಿಗಳೂ ಕಲಾವಿದರಲ್ಲ. ಆದರೆ ಈ ವಿದ್ಯಾರ್ಥಿ-ವಿದ್ಯಾರ್ಥಿನಿಯರ ರಂಗಸೂಕ್ಷ್ಮತೆ, ಅಭಿನಯ ವೃತ್ತಿಪರ ಕಲಾವಿದರಿಗೆ ಸರಿಸಮನಾಗಿತ್ತು, ಅಲ್ಲದೆ ಉತ್ಸಾಹ ಮತ್ತು ತಾಜಾತನಗಳಿಂದಾಗಿ ವಿದ್ಯಾರ್ಥಿಗಳ ನಟನೆ ವಿಶೇಷ ಮೆರಗನ್ನು ಪಡೆದಿತ್ತು.



ನಿರ್ದೇಶಕ ಕೊಂಚ ಎಡವಿದರೆ ಈ ನಾಟಕ ಒಂದು ಗೋಳಿನ ಕಥೆಯಾಗಿ ಪರಿವರ್ತಿತವಾಗಿ ನೇತ್ಯಾತ್ಮಕ ಪರಿಣಾಮ ಬೀರುವ ಅಪಾಯವೂ ಇದೆ. ಆದರೆ ಇಲ್ಲಿ ನಿರ್ದೇಶಕರು ವಿದ್ಯಾರ್ಥಿಗಳ ಎನರ್ಜಿಯನ್ನು ಬಳಸಿಕೊಂಡು ಪ್ರತಿಯೊಂದು ದೃಶ್ಯವನ್ನೂ ಎಚ್ಚರದಿಂದ ರೂಪಿಸಿದ್ದಾರೆ. ಕೊನೆಯ ದೃಶ್ಯವಂತೂ ನೋಡುಗರ ಎದೆಯನ್ನು ಮುಷ್ಟಿಯಲ್ಲಿ ಹಿಡಿದು ಅಲ್ಲಾಡಿಸಿದಂತಿತ್ತು.


'ಅಪ್ಪ ಸತ್ತವರ ಮುಖ ಹೇಗಿರುತಪ್ಪೆ' ಎಂದು ಆಳದಲ್ಲಿ ಸತ್ತೇಹೋದ ಮತ್ತು ಕುರ್ಚಿಯಲ್ಲಿ ಸತ್ತಂತೆ ಕುಳಿತ ಅಪ್ಪನಿಗೆ ಮಗಳು ಕೇಳುವ ದೃಶ್ಯವನ್ನು ಪ್ರೇಕ್ಷಕರು ಉಸಿರು ಬಿಗಿಹಿಡಿದು ನೋಡಿದ್ದು ಇಡೀ ನಾಟಕದ ಯಶಸ್ಸನ್ನು ಸ್ಪಷ್ಟವಾಗಿ ದಾಖಲಿಸಿತ್ತು.

ಗುರುರಾಜ ಅವರ ರಂಗಸಜ್ಜಿಕೆ, ಮಹೇಶ್ ಅವರ ಸಂಗೀತ, ನಾಗಶಯನ ಅವರ ಬೆಳಕು ನಾಟಕದ ಯಶಸ್ಸಿಗೆ ಪೂರಕವಾಗಿದ್ದವು. ಪ್ರಸ್ತುತ ದಿನಗಳಲ್ಲಿ ಕಾಲೇಜು ವಿದ್ಯಾರ್ಥಿಗಳು ಸಾಂಸ್ಕೃತಿಕ ಜಗತ್ತಿನಿಂದ ಸಂಪರ್ಕ ಕಳೆದುಕೊಂಡು ಜಡವಾಗುತ್ತಿರುವ ಸಂದರ್ಭದಲ್ಲಿ ಈ ನಾಟಕದಲ್ಲಿ ತೊಡಗಿಸಿಕೊಂಡು ನಾಟಕವನ್ನು ಸರಿಯಾಗಿ ಗ್ರಹಿಸಿ ಅಭಿನಯಿಸಿದ ಪದವಿ ವಿದ್ಯಾರ್ಥಿಗಳಾದ ಕಾವ್ಯ, ದಿವ್ಯ, ಕಲ್ಪನ, ಪೂರ್ಣಿಮ, ಗೀತಾ, ಅಭಿಜಿತ್, ಸಚಿನ್, ಆಲ್ವಿನ್ ನಿಜವಾಗಿಯೂ ಅಭಿನಂದನೆಗೆ ಅರ್ಹರು.

ಪ್ರತಿಭಾವಂತ ಯುವ ನಿರ್ದೇಶಕ ಪ್ರವೀಣ್ ಹಾಲ್ಕೂತ್ತೂರು ಇವರ ಮುಂದಿನ ಪ್ರಯೋಗಗಳ ಕುರಿತು ಈ ನಾಟಕ ಹೊಸ ನಿರೀಕ್ಷೆಗಳನ್ನು ಹುಟ್ಟಿಸಿದೆ.

• ಪ್ರೊ.ಡಿ.ಎಸ್.ಸೋಮಶೇಖರ್

ತುಮಕೂರು ವಿವಿ: ವರದಿ ಸತ್ಯ



'ಗೌರಿ ಲಂಕೇಶ್ ಪತ್ರಿಕೆ'ಯ ಏಪ್ರಿಲ್ 11ರ ಸಂಚಿಕೆಯಲ್ಲಿ ರೀಟಾ ರೀನಿಯವರು ಬರೆದಿರುವ 'ಭೂಗಳ್ಳ ಬಿಷಪ್' ಎಂಬ ಲೇಖನದ ಶಬ್ದಭಂಡಾರವೂ ನಿರೂಪಣಾ ಶೈಲಿಯೂ ಚೆನ್ನಾಗಿದೆ. ಆದರೆ ಯಾಕೋ ರೀಟಾ ಅವರು ತಮ್ಮ ಭಾಷಾಪ್ರೌಢಿಮೆಯನ್ನು ತೆಗಳುವುದಕ್ಕೋಸ್ಕರವೇ ಬಳಸಿಕೊಂಡಂತಿದೆ.

ಹಾಗೆಂದು ನಾನು ಬಿಷಪರ ಪರವಾಗಿ ಮಾತಾಡುತ್ತಿದ್ದೇನೆಂದಲ್ಲ, ನಾನವರ ಅಭಿಮಾನಿಯೂ ಅಲ್ಲ, ಆರಾಧಕನೂ ಅಲ್ಲ, ಅವರ ದಾರ್ಷ್ಟ್ಯ ಮತ್ತು ವ್ಯಂಗ್ಯ ನನಗೆ ಹಿಡಿಸದ ಗುಣಗಳು. ಚರ್ಚಿನ ಆಡಳಿತದ ವಿಷಯದಲ್ಲಿ ಹಾಗೂ ಎಲ್ಲರನ್ನೂ ಒಳಗೊಳ್ಳುವ ವಿಷಯದಲ್ಲಿ ಅವರು ಪರವಾಗಿಲ್ಲ ಎನ್ನಬಹುದು.

ಇವರ ಪ್ರಯತ್ನದಿಂದಾಗಿ ಇಂದು ಕ್ರೈಸ್ತ ಶಿಕ್ಷಣ ಸಂಸ್ಥೆಗಳಲ್ಲಿ ಕ್ರೈಸ್ತ ಮಕ್ಕಳಿಗೆ ಖಾತರಿ ಪ್ರವೇಶವಿದೆ, ಬಡ ಮಕ್ಕಳಿಗೆ ಶಾಲಾಶುಲ್ಕದ ಸಹಾಯವಿದೆ, ಹೊಸ ಶಾಲೆಗಳು ಕಾಲೇಜುಗಳು ತಲೆಯೆತ್ತುತ್ತಿವೆ, ಹೊಸ ಚರ್ಚ್ ಕಟ್ಟಡಗಳು ನಿರ್ಮಾಣವಾಗುತ್ತಿವೆ, ಎಲ್ಲ ಬಾಲಕರಿಗೂ ಗುರುಮಠಗಳಿಗೆ ಮುಕ್ತ ಅವಕಾಶವಿದೆ, ಎಲ್ಲರಿಗೂ ಬಿಷಪರ ನಿವಾಸಕ್ಕೆ ಮುಕ್ತ ಪ್ರವೇಶವಿದೆ.

ಅವರೇನೂ ಚರ್ಚಿನ ಭೂಮಿಗಳನ್ನು ಮಾರಿಲ್ಲ, ಚರ್ಚ್ ಭೂಮಿಯ ಹೆಚ್ಚುವರಿ ನೆಲವನ್ನು ನಲವತ್ತು ವರ್ಷಗಳ ಅವಧಿಗೆ ಗುತ್ತಿಗೆ ನೀಡಿದ್ದಾರೆ. ಈ ಗುತ್ತಿಗೆಯಿಂದ ಇಂದು ಲಭ್ಯವಾಗಿರುವ ಕೋಟ್ಯಂತರ ದುಡ್ಡು ಧರ್ಮಸಭೆಯ ಇತರ ಯೋಜನೆಗಳಿಗೆ ವಿನಿಯೋಗ ವಾಗುತ್ತದೆ. ಪಾರದರ್ಶಕವಾಗಿರುವ ಈ ವಿನಿಯೋಜನೆ ಹೇಗಿರಬೇಕೆಂದು ಕನ್ನಡಿಗರು, ತಮಿಳರು ಎಲ್ಲರನ್ನೊಳಗೊಂಡ ಸಮಿತಿ ನಿರ್ಧರಿಸುತ್ತದೆ. ಇದಕ್ಕಿಂತ ಇನ್ನೇನು ಬೇಕು? ನಮ್ಮ ಸಮಾಜದ ಅಭಿವೃದ್ಧಿಗೆ ಸಂಪತ್ತು ಕ್ರೋಢೀಕರಿಸು ವುದರಲ್ಲಿ ತಪ್ಪೇನಿದೆ? ಇದರಲ್ಲಿ ವಾಮಮಾರ್ಗವೇನೂ ಇಲ್ಲವಲ್ಲ.

ಬಿಷಪರು ಮೆಡಿಕಲ್ ಕಮ್ಮನಹಳ್ಳಿಯ ಜನರ ಹೊಟ್ಟೆಯ ಮೇಲೆ ಹೊಡೆದಿಲ್ಲ. ಮೂರು ದಶಕಗಳ ಕಾಲ ಕನ್ನಡ ಕ್ರೈಸ್ತರ ಸಂಘಟನೆಯಲ್ಲಿರುವ ನನಗೆ ಕಮ್ಮನಹಳ್ಳಿಯ ಜನರ ಸಮಯಸಾಧಕತನದ ಅರಿವಿದೆ. ತಮ್ಮ ಚರ್ಚಿನ ದುಡ್ಡು ತಮ್ಮ ಊರಿಗೇ ಸಲ್ಲಬೇಕೆನ್ನುವ ಅವರ ವಾದ ಕ್ರೈಸ್ತ ತತ್ವಕ್ಕೆ ವಿರುದ್ಧವಾದುದು. ಅವರು ರೀಟಾ ಅವರನ್ನು ಹೈಜಾಕ್ ಮಾಡಿದ್ದಾರೇನೋ ಅನ್ನುವ ಅನುಮಾನ ನನ್ನದು.

- ಸಿ. ಮರಿಜೋಸೆಫ್, ಬೆಂಗಳೂರು

ಕರ್ನಾಟಕ ಮೂಲದ ಬ್ಯಾರಿ ಭಾಷೆಯ 'ಬ್ಯಾರಿ' ಎಂಬ ಚಲನಚಿತ್ರಕ್ಕೆ ಸ್ವರ್ಣಕಮಲ ಪ್ರಶಸ್ತಿ ದೊರಕಿದ ಮೇಲೆ ಅದರ ಕಥೆಯ ಮೂಲ ಲೇಖಕರ ಬಗ್ಗೆ ಎದ್ದಿರುವ ವಿವಾದ ವಿಷಾದಕರವಾದರೂ, ಒಂದು ಸಮಾಧಾನದ ವಿಷಯವೆಂದರೆ ಇದು ಕರ್ನಾಟಕ ಮೂಲದ ಮುಸ್ಲಿಂ ಸಾಹಿತಿಗಳ ಬಗ್ಗೆ ಎಲ್ಲಾ ಕನ್ನಡಿಗರಲ್ಲಿ ಬಹಳ ಆಸಕ್ತಿ ಹುಟ್ಟಿಸಿರುವುದು. ಬ್ಯಾರಿ ಭಾಷೆ - ಇದು ಮಲೆಯಾಳಿ, ಕನ್ನಡ, ತುಳು ಹಾಗೂ ಕೊಡವ ಭಾಷಿಗಳ ಮಿಶ್ರಣದ - ಒಂದು ಶುದ್ಧ ದ್ರಾವಿಡ ಭಾಷೆಯೆಂಬುದು ಒಳನಾಡ ಕನ್ನಡಿಗರಿಗೆ ಗೊತ್ತಿಲ್ಲ.

ಬ್ಯಾರಿ ಭಾಷೆ ಮಾತನಾಡುವವರಲ್ಲಿ ಸಣ್ಣ ಸಂಖ್ಯೆಯಲ್ಲಿ ಹಿಂದೂಗಳೂ ಇದ್ದಾರೆ. ಕರ್ನಾಟಕದಲ್ಲಿ 60 ಲಕ್ಷಕ್ಕೂ ಮಿಕ್ಕಿ ಇರುವ ಮುಸ್ಲಿಮರಲ್ಲಿ 90% ಜನರು 'ದಕ್ಷಿನಿ' (ಉರ್ದು) ಭಾಷಿಕರಾಗಿದ್ದು ಉಳಿದ 10% ರಷ್ಟು ಮುಸ್ಲಿಮರು ಮಾತ್ರ ಬ್ಯಾರಿ, ಕೊಂಕಣಿ (ನವಾಯತೀ) ಹಾಗೂ ಕೊಡವ ಭಾಷೆಗಳನ್ನು ಮನೆಮಾತಾಗಿ ಆಡುತ್ತಾರೆ. (ಕನ್ನಡ ಮಾತೃಭಾಷೆಯುಳ್ಳ ಮುಸ್ಲಿಮರು ವಿಜಾಪುರ ಜಿಲ್ಲೆಯಲ್ಲಿ ಹಿಂದೆ ಇದ್ದು ದುರದೃಷ್ಟವಶಾತ್ ಇತ್ತೀಚಿನ 50 ವರ್ಷಗಳಲ್ಲಿ ಇವರೆಲ್ಲಾ ಉರ್ದು ಭಾಷೆಗೆ ಪರಿವರ್ತಿತರಾಗಿದ್ದಾರೆ ಎಂದು ವಿಜಾಪುರದ ನನ್ನ ಮಿತ್ರನೊಬ್ಬ ವಿಷಾದಿಸುತ್ತಾನೆ).

ಎರಡು ಶತಮಾನಗಳ ಹಿಂದೆ ಇಸ್ಲಾಂಗೆ ಮತಾಂತರವಾದ ಕೊಡವರು ಇಂದಿಗೂ ತಮ್ಮ ಮೂಲ ಕುಲನಾಮ ಹಾಗೂ ಕೊಡವ ಮಾತೃಭಾಷೆ ಉಳಿಸಿಕೊಂಡಿರುವರಾದರೂ, ಅದೇ ಸಮಯಕ್ಕೆ ಮಂಗಳೂರಿನಲ್ಲಿ 16 ಪ್ರತಿಷ್ಠಿತ ತುಳುಜೈನ ವ್ಯಾಪಾರಿ ಕುಟುಂಬಗಳು ಸ್ವಇಚ್ಛೆಯಿಂದ ಇಸ್ಲಾಂಗೆ ಮತಾಂತರಗೊಂಡರೆಂದು ಮಂಗಳೂರಿನ ಸ್ಥಳೀಯ ಇತಿಹಾಸದಲ್ಲಿ ಉಲ್ಲೇಖಿತವಾಗಿದ್ದರೂ, ಇವರೇಕೆ ತಮ್ಮ ತುಳು ಅಥವಾ ಕನ್ನಡ ಮಾತೃಭಾಷೆ ಉಳಿಸಿಕೊಳ್ಳದೇ ಬ್ಯಾರಿ ಭಾಷಿಕರಾದರು ಎಂಬುದು ತುಳು ಅಭಿಮಾನಿಗಳಿಗೆ ಕೌತುಕದ ವಿಷಯವಾಗಿದೆ.

ಕರ್ನಾಟಕದ ಒಟ್ಟು ಮುಸ್ಲಿಮರಲ್ಲಿ ಬ್ಯಾರಿ ಭಾಷಿಕರು 10%ಗೂ ಕಡಿಮೆ ಇದ್ದರೂ, ಕನ್ನಡ ಸಾಹಿತ್ಯಕ್ಕೆ ಕಾಣಿಕೆ ಕೊಟ್ಟ ಮುಸ್ಲಿಮರಲ್ಲಿ ಪ್ರತಿ ಹತ್ತರಲ್ಲಿ ಒಂಭತ್ತು ಜನರು ಕರಾವಳಿಯ ಮುಸ್ಲಿಮರೆಂಬುದು ಗಮನೀಯ. ಕರಾವಳಿಯ ಮುಸ್ಲಿಮರು ಒಂದು ಜನಪ್ರಿಯ ಕನ್ನಡ ದಿನಪತ್ರಿಕೆ ಪ್ರಕಟಿಸುತ್ತಿರುವುದು ಮಾತ್ರವಲ್ಲ ಹಲವಾರು ಕನ್ನಡ ನಿಯತಕಾಲಿಕೆಗಳನ್ನೂ ಹೊರತರುತ್ತಿದ್ದು, ಇಂತಹ ಕೆಲವು ಮಾಸಿಕಗಳಲ್ಲಿ ಪವಿತ್ರ ಕುರಾನ್‌ನನ್ನು ವಿವರಿಸುವ ಲೇಖನಗಳೂ ಇರುತ್ತವೆ. ಈ ಕನ್ನಡ ಪತ್ರಿಕೆಗಳು ಗಲ್ಫ್ ರಾಷ್ಟ್ರಗಳಲ್ಲೂ ಪ್ರಸಾರ ಹೊಂದಿರುವುದು ಹೆಮ್ಮೆಯ ವಿಷಯ. ಜೊತೆಗೆ, ಮಂಗಳೂರಿನ ಸ್ಥಳೀಯ ಟಿವಿ ಚಾನೆಲ್‌ಗಳಲ್ಲಿ ದಿನಾಲೂ ಅರ್ಧ ಗಂಟೆ ಪವಿತ್ರ ಕುರಾನ್‌ನ ಪ್ರವಚನಗಳೂ ಶುದ್ಧ ಕನ್ನಡದಲ್ಲಿ ಪ್ರಸಾರವಾಗುವುದರಿಂದ ಹಿಂದೂ ಹಾಗೂ ಕ್ರೈಸ್ತ ಬಾಂಧವರೂ ಕುರಾನ್‌ನ ತಿರುಳನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳುವುದು ಸಾಧ್ಯವಾಗಿದೆ. ಈ ಸೌಲಭ್ಯದಿಂದ ಒಳನಾಡಿನ ಕನ್ನಡಿಗರು ವಂಚಿತರಾಗಿದ್ದಾರೆ. ಕಾರಣ ಕನ್ನಡದ ಮುಖ್ಯವಾಹಿನಿಗೆ ಒಳನಾಡಿನ ಉರ್ದು ಮುಸ್ಲಿಮರು ಇನ್ನೂ ಪೂರ್ಣವಾಗಿ ಸಮ್ಮಿಳಿತವಾಗದಿರುವುದರಿಂದ ಕನ್ನಡ ಸಾರಸ್ವತಲೋಕಕ್ಕೆ ದೊಡ್ಡ ನಷ್ಟವಾಗಿರುವುದು ಮಾತ್ರವಲ್ಲ, 'ಪ್ಯಾರ್‌ಗೆ ಆಗ್ಬುಟ್ಟೈತೆ' ಅಂತಹ ಅಪಹಾಸ್ಯದ ಬಾಲಿಶ ಸಿನಿಮಾ ಹಾಡು ಹುಟ್ಟಿಕೊಳ್ಳುವಂತಾಗಿರುವುದು ನಿಜ. ಕರಾವಳಿ ಮುಸ್ಲಿಮರಿಂದ ಒಳನಾಡಿನ ಮುಸ್ಲಿಮರು ಕಲಿಯುವುದು ಬಹಳಷ್ಟಿದೆ.

- ಪ್ರವೀಮ್ ಎಸ್. ಶೆಟ್ಟಿ, ಮಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

ಹೊಗಳಿಕೆ ತೆಗಳಿಕೆ

ತುಮಕೂರು ವಿಶ್ವವಿದ್ಯಾಲಯ ಕುರಿತು ದೊಡ್ಡಿಪಾಳ್ಯ ನರಸಿಂಹಮೂರ್ತಿ ಅವರು ಏಪ್ರಿಲ್ 18, 2012ರ ಸಂಚಿಕೆಯಲ್ಲಿ ಬರೆದ 'ಶರ್ಮ ಎಂಬ ಶನಿ' ಲೇಖನವನ್ನು ಇದೀಗ ಓದಿದೆ. ಲೇಖನದಲ್ಲಿನ ಒಂದಕ್ಷರವೂ ಸುಳ್ಳಲ್ಲ

ತಂದೆಗೆ ಸೂಕ್ತ ಶ್ರದ್ಧಾಂಜಲಿ

ಪ್ರಿಯರಾದ ಗೌರಿ ಅವರಿಗೆ,

ಈ ಪತ್ರವನ್ನು ಅನೇಕ ವಾರಗಳ ಹಿಂದೆಯೇ ಬರೆಯಬೇಕಾಗಿತ್ತು. ಪತ್ರಿಕೆಯಲ್ಲಿ ನಿಮ್ಮ ತಾಯಿಯವರು ಬರೆಯುತ್ತಿರುವ ನೆನಪುಗಳನ್ನು ಓದುವಾಗಲೆಲ್ಲ ಈ ಬಾರಿಯಾದರೂ ಪತ್ರವನ್ನು ಬರೆದು ನನ್ನ ಮೆಚ್ಚುಗೆಯನ್ನು ತಿಳಿಸಬೇಕೆಂದುಕೊಳ್ಳುತ್ತಿದ್ದರೂ, ಬರೆಯಲು ಸಾಧ್ಯವಾದದ್ದು ಮಾತ್ರ ಇದೀಗ. ತಡಮಾಡಿದ್ದಕ್ಕೆ ವಿಷಾದ ಎನ್ನಿಸುತ್ತಿದೆ.

ಇಂದಿರಾ ಅವರದು ಬಹಳ ದಿಟ್ಟವಾದ, ಪ್ರಾಮಾಣಿಕವಾದ, ನೇರವಾದ, ಸರಳವಾದ ಬರವಣಿಗೆ. ಎಲ್ಲಿಯೂ ತೋರುಗಾಣಿಕೆಯಿಲ್ಲ, ಅವರ ನೆನಪುಗಳೂ ಬಹಳ ಚೂಪಾಗಿವೆ. ಎಲ್ಲಿಯೂ ಭಾವೋದ್ವೇಗಕ್ಕೆ ಒಳಗಾಗದೆ, ತಾವು ಹೇಳುವುದನ್ನು ಅಚ್ಚುಕಟ್ಟಾಗಿ, ನಿರುದ್ವಿಗ್ನತೆಯಿಂದ ಹೇಳುತ್ತಾರೆ. ಬದುಕಿನ ಬಗೆಗೆ ಅವರು ಇಟ್ಟುಕೊಂಡಿರುವ ಗಾಢ ಪ್ರೀತಿ ಮತ್ತು ವಿಶ್ವಾಸಗಳು ಅವರ ಬರವಣಿಗೆಗೆ ವಿಚಿತ್ರವಾದ ಕಾಂತಿಯನ್ನು ತಂದುಕೊಟ್ಟಿವೆ. ತಾವು ಕಂಡದ್ದನ್ನು, ತಮ್ಮ ಮಿತಿಯೊಳಗೇ ಗ್ರಹಿಸಿ ಅದನ್ನು ಚೊಕ್ಕವಾಗಿ ಮುಂದಿಸುವ ಇಂದಿರಾ ಅವರ ಕ್ರಮ ಮೆಚ್ಚುವಂತಿದೆ.

ಈ ಬಾರಿಯ ಅವರ ಬರಹ ತಮ್ಮ ತಂದೆಯವರಿಗೆ ನೀಡಿದ ಬಹುದೊಡ್ಡ ಶ್ರದ್ಧಾಂಜಲಿ. ಈ ಶ್ರದ್ಧಾಂಜಲಿಯ ಭಾವವೂ ಸುಳಿಯದಂತೆ, ತಮ್ಮ ತಂದೆಯವರ ಚಿತ್ರವನ್ನು, ಘನತೆಯ ವ್ಯಕ್ತಿತ್ವವನ್ನು, ಮೌಲ್ಯಗಳನ್ನು ತಮ್ಮ ನೆನಪುಗಳ ಮೂಲಕವೇ ಅವರು ಕಟ್ಟಿಕೊಟ್ಟಿದ್ದಾರೆ. ಜೀವವಿಮಾ ನಿಗಮದ ಒಬ್ಬ ಸಾಮಾನ್ಯ ಏಜೆಂಟ್ ಎಷ್ಟು ಅಪರೂಪದ ಕೌಟುಂಬಿಕ ಮೌಲ್ಯಗಳನ್ನು ಪ್ರತಿಪಾದಿಸಬಲ್ಲರು; ತನ್ನ ಮಕ್ಕಳನ್ನು ಎಷ್ಟು ಹೊಣೆಗಾರಿಕೆಯಿಂದ ಬೆಳೆಸಬಲ್ಲರು; ಅವರಿಗಾಗಿ ಎಂಥ ತ್ಯಾಗಕ್ಕೂ ಸಿದ್ಧವಾಗಬಲ್ಲರು; ಕೊನೆಗೆ ತಾನು ತನ್ನ ಮಕ್ಕಳಿಗೂ ಹೊರೆಯಾಗುತ್ತಿದ್ದೇನೆ ಎನ್ನಿಸಿದಾಗ, ಬದುಕುವ ಆಸೆಯನ್ನೇ ತ್ಯಜಿಸಿ ಸಾವನ್ನೂ ಸ್ವಾಗತಿಸುವ ಧೈರ್ಯವನ್ನು ಸದ್ದಿಲ್ಲದೆ ಪ್ರಕಟಿಸಬಲ್ಲರು ಇತ್ಯಾದಿ ಹಲವು ಮುಖಗಳನ್ನು ಇಂದಿರಾ ಅವರು ಹೇಗೆ ತಣ್ಣಗೆ ನಿರೂಪಿಸಿದ್ದಾರೆ. ತಂದೆಯ ಬಗೆಗಿನ ಅಪಾರ ಪ್ರೀತಿ, ಗೌರವ, ಕಳಕಳಿಯನ್ನು ತುಂಬಿಕೊಂಡಿರುವ ಈ ಬರಹ ಎಲ್ಲಿಯೂ ಉತ್ಪ್ರೇಕ್ಷಿತವಾಗಿಲ್ಲ, ಇಂಥ ತಂದೆ ಯಾರಿಗೆ ಬೇಡ? - ಇಂದಿರಾ ಲಂಕೇಶ್ ಅವರ ಬರಹದ ಶಕ್ತಿಯೇ ಇದು.

ನಾನು ಈ ಸೋಮಸುಂದರ್ ಅವರನ್ನು ನೋಡಿದ್ದೆ. ಲಂಕೇಶ್ ಅವರು ಶಿವಮೊಗ್ಗಕ್ಕೆ ಬಂದಾಗಲೆಲ್ಲ ಶಿವಕುಮಾರ್ ಅವರು ಬರುತ್ತಿದ್ದರು. ಆಗ ಲಂಕೇಶರು, 'ನಮ್ಮ ಮಾವ ಕರೀತಾರೆ ಬನ್ನಿ ಹೋಗೋಣ' ಎಂದು ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಆಗ ಮನೆಯಲ್ಲಿ ಮೊದಲು ನನ್ನನ್ನು ಸ್ವಾಗತಿಸುತ್ತಿದ್ದವರು ಸೋಮಸುಂದರ್. ಅವರ ನಗುಮುಖ, ವಿಶ್ವಾಸದ ಮಾತುಗಳು ಈಗಲೂ ನನ್ನ ಕಣ್ಣು-ಕಿವಿಗಳನ್ನು ತುಂಬುತ್ತಿವೆ. ಇಂದಿರಾ ಅವರ ಈ ಪುಟ್ಟ ಬರಹ ನನ್ನನ್ನು ಕಲಕಿದ್ದರಿಂದ ಈ ಪತ್ರ ಬರೆದಿರುವೆ.

ಇಂದಿರಾ ಅವರಿಗೆ ಮತ್ತು ಅವರ ಬರಹದ ಪ್ರೇರಕರಾಗಿರುವ ನಿಮಗೆ ವಂದನೆಗಳು.

- ಜೆ.ಪಿ.ಬಸವರಾಜು, ಮೈಸೂರು

ಣ್ಣಾಬಾಂಡ್ ಿದರಿದನಾ?



ಮುನಿರತ್ನ ನಿರ್ಮಾಣದ ಕಠಾರಿ ವೀರ ಸುರಸುಂದರಾಂಗಿ ಚಿತ್ರ ಇದೇ 27ರಂದು ಬಿಡುಗಡೆ ಮಾಡಲು ಸಿದ್ಧರಾಗುತ್ತಿದ್ದಾರೆ. ಮೊದಲು ನನ್ನ ಚಿತ್ರ ಪ್ರಾರಂಭವಾಗಿರುವುದರಿಂದ ಮತ್ತು ಅತ್ಯಂತ ದುಬಾರಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ನನ್ನ ಚಿತ್ರ ಮೊದಲು ಬಿಡುಗಡೆಯಾಗಲೇಬೇಕು. ನಂತರ ಮುನಿತ್ನ ನಿರ್ಮಿಸಿರುವ ಕಠಾರಿವೀರ ಮತ್ತು ಕಲ್ಪನಾ ಚಿತ್ರಗಳು ಬಿಡುಗಡೆಯಾಗಬೇಕು. ವಾಣಿಜ್ಯ ಮಂಡಳಿ ಕಠಾರಿವೀರ ಚಿತ್ರಕ್ಕೆ 100% ಟ್ಯಾಕ್ಸ್ ಫ್ರೀ ಮತ್ತು ಜಾಹೀರಾತು ನೀಡುವುದನ್ನು ತಡೆಯಬೇಕು ಮತ್ತು ನನಗೆ ನ್ಯಾಯ ಒದಗಿಸಬೇಕು" ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಪತ್ರ ಬರೆದು ಮುನಿರತ್ನರ ವಿರುದ್ಧ ಸಮರ ಸಾರಿದ್ದಾರೆ.

ಅಸಲಿಯತ್ತೆಂದರೆ ಕೊಬ್ರಿ ಮಂಜು ನಿರ್ಮಿಸುತ್ತಿರುವ 'ಗಾಡ್ ಫಾದರ್' ಚಿತ್ರ ಇನ್ನೂ ಸಂಪೂರ್ಣಗೊಂಡಿಲ್ಲ, ಆಡಿಯೋ ಕೂಡಾ ರಿಲೀಸ್ ಆಗಿಲ್ಲ. ಹೀಗಿರುವಾಗ 'ಗಾಡ್ ಫಾದರ್' ಬಿಡುಗಡೆ ಈ ತಿಂಗಳಂತೂ ಸಾಧ್ಯವಿಲ್ಲ. ಹಾಗಿದ್ದಮೇಲೆ ಕೊಬ್ರಿ ಮಂಜಣ್ಣ ಯಾಕೆ ಕಠಾರಿವೀರನಿಗೆ ಅಡ್ಡಗಾಲು ಹಾಕುತ್ತಿದ್ದಾರೆ? ಎಂದು ಪ್ರಶ್ನೆ ಹಾಕಿಕೊಂಡರೆ ಅಲ್ಲಿಗೆ ಸತ್ಯ ಬಿಚ್ಚಿಕೊಳ್ಳುತ್ತದೆ.


ಮಂಜು ಅವರ 'ಗಾಡ್ ಫಾದರ್' ಮತ್ತು 'ರಜನಿ ಕಾಂತ' ಚಿತ್ರವನ್ನು ಈಗಾಗಲೇ ಪ್ರಸಾದ್ ಪರ್ಚೇಸ್ ಮಾಡಿಬಿಟ್ಟಿದ್ದಾರೆ. ಈಗ ಅಣ್ಣಾಬಾಂಡ್‌ಅನ್ನು ಖರೀದಿಸಿರುವುದು ಕೂಡಾ ಅದೇ ಪ್ರಸಾದ್. ಹೀಗಾಗಿ ನೇರವಾಗಿ ಮುನಿರತ್ನ ಜೊತೆ ಸೆಣಸಾಟಕ್ಕೆ ನಿಲ್ಲುವ ಬದಲು ಪ್ರಸಾದ್ ಮತ್ತು ರಾಘವೇಂದ್ರ ರಾಜ್ ಕುಮಾರ್ ಇಬ್ಬರೂ ಸೇರಿ ಮಂಜು ಹೆಗಲ ಮೇಲೆ ಬಂದೂಕಿಟ್ಟು ಟ್ರಿಗರ್ ಒತ್ತುತ್ತಿದ್ದಾರೆ.

ಇವ್ಯಾವುದಕ್ಕೂ ಜಗ್ಗದ ಮುನಿರತ್ನ "ಮಂಜು ಒನ್ ವೇ ರೋಡಲ್ಲಿ ಬರ್‍ತಾನೆ, ಒಂದು ವರ್ಷದಿಂದ ಸಿನಿಮಾ ಮಾಡ್ತನೇ ಇದ್ದ. ಈಗ ಇದ್ದಕ್ಕಿದ್ದ ಹಾಗೆ ನನ್ನ ಸಿನಿಮಾದ ವಿರುದ್ಧ ತಕರಾರು ಮಾಡ್ತಿದಾನೆ" ಎಂದು ಕೊಬ್ರಿ ಮಂಜು ವಿರುದ್ಧ ಓಪನ್ ಸ್ಟೇಟ್‌ಮೆಂಟ್ ಕೊಟ್ಟು ಸುಮ್ಮನಾಗಿದ್ದಾರೆ.

ಇಷ್ಟೆಲ್ಲದರ ನಡುವೆ ಎದುರಾಳಿಗಳಾಗಿರುವ ಸುದೀಪ್‌ನ 'ಈಗ' ಮತ್ತು ಹತ್ತು ಕೋಟಿಯ 'ಕಠಾರಿವೀರ'ರನ್ನು 'ಅಣ್ಣಾಬಾಂಡ್' ನಿಭಾಯಿಸುತ್ತಾನಾ? ಅನ್ನೋದಷ್ಟೇ ಪ್ರಶ್ನೆ!

▶9

...ಾಕನಟರಾಗಿ ನಟಿಸುತ್ತಿದ್ದಾರೆ. ಈ ಚಿತ್ರದಲ್ಲಿ ...ಂದ್ರ ಮೂರು ವಿಭಿನ್ನ ಪಾತ್ರಗಳಲ್ಲಿ ...ಯಿಸುತ್ತಿದ್ದಾರೆ. ಅಂತಾರಾಷ್ಟ್ರೀಯ ಖ್ಯಾತಿಯ ...್. ರೆಹಮಾನ್ ಮೊದಲ ಬಾರಿಗೆ ಕನ್ನಡ ..., ಸಂಗೀತ ನೀಡುತ್ತಿದ್ದಾರೆ. ಈ ಹಂತದಲ್ಲಿ



ಅಬ್ಬರಿಸದ ಬಾಂಡ್ ಹಾಡುಗಳು

ಅಣ್ಣಾಬಾಂಡ್ ಅಂದುಕೊಂಡಷ್ಟು ಅಬ್ಬರಿಸುತ್ತಿಲ್ಲ. ಮೊದಲ ವಿಟಿಂಬಂತೆ ಆಡಿಯೋ ನಿರೀಕ್ಷಿಸಿದಷ್ಟು ವರ್ಕ್‌ಔಟ್ ಆಗಿಲ್ಲ. ಜಾಕಿ ಚಿತ್ರದ ಆಡಿಯೋ ಹಕ್ಕನ್ನು ಆನಂದ್ ಆಡಿಯೋದವರು 73 ಲಕ್ಷಕ್ಕೆ ಪಡೆದಿದ್ದರು. ಆದರೆ ಅದೇ ಆನಂದ್



ಆಡಿಯೋದವರು 'ಅಣ್ಣಾಬಾಂಡ್'ಗೆ ಕೊಟ್ಟಿರುವ ಮೊತ್ತ 54 ಲಕ್ಷ. ಹರಿಕೃಷ್ಣ, ಸೂರಿ, ಭಟ್ರು ಮತ್ತು ಪುನೀತ್ ಕಾಂಬಿನೇಷನ್‌ನ ಅಣ್ಣಾಬಾಂಡ್ ಸಿನಿಮಾದಲ್ಲಿ ಹೊಸ ಕ್ರೇಜ್ ಹುಟ್ಟಿಸುವ ಹಾಡುಗಳಿರುತ್ತವೆ ಎಂದು ಬಹುತೇಕರು ನಂಬಿದ್ದರು. ಆದರೆ 'ತುಂಬಾ ನೋಡಬೇಡಿ ಲವ್ವಾಯ್ತದೆ...' ಅನ್ನೋದೊಂದು ಹಾಡನ್ನು ಬಿಟ್ಟರೆ ಮಿಕ್ಕ ನಾಲ್ಕು ಹಾಡುಗಳು ಕೇಳುಗರಿಗೆ ಅಷ್ಟಾಗಿ ರುಚಿಸಿಲ್ಲ.

...ಕೂರು ವಿ.ವಿ.ಯ ಲಾಂಛನವು - ವಿಖ್ಯಾತ ...ತ್ತರದ, ಜಗತ್ತಿನ ಎರಡನೆ ಅತಿಎತ್ತರದ ಮಧುಗಿರಿಯ ...ಲಾಬೆಟ್ಟ, 'ಕಲ್ಪತರು ಜಿಲ್ಲೆ' ಎಂಬ ಖ್ಯಾತಿಯ ತೆಂಗು, '...ಕೂರು' ಎಂಬ ಹೆಸರಿಗೆ ಕಾರಣವಾದ ತುಂಬೆ ...ಮತ್ತು ಟುಮುಕಿ ವಾದ್ಯ, ಜ್ಞಾನದ ಸಂಕೇತ ಜ್ಯೋತಿ, ...ಣು ಶಕ್ತಿಯ ಸಂಕೇತ, ಕನ್ನಡ ಭಾಷೆಯಲ್ಲಿನ 'ಜ್ಞಾನಪೆ...ಕ' ಎಂಬ ಧ್ಯೇಯವಾಕ್ಯ, ಅಖಂಡ ವಿಶ್ವ ಸಂಕೇತದ - ಇವೆಲ್ಲವನ್ನೂ ಒಳಗೊಂಡು ವಿ.ವಿ. ಸ್ಥಾಪನೆಯಾದ ...೨೦೦೪ರಲ್ಲಿ ಮೂಡಿಬಂದಿತ್ತು. ಅಂತಹ ಲಾಂಛನವು ...ಜಸವಾಗಿತ್ತು ಮತ್ತು ಆಕರ್ಷಕವಾಗಿತ್ತು.

...ಜ್ಞಾನಪಿ ಅನಂತ'ದಲ್ಲಿನ 'ಅನಂತ' ಶಬ್ದದ ವಿಶ್ವವಿಶಾಲ ...ವನ್ನು ಅರ್ಥೈಸುವ ಯೋಗ್ಯತೆ ಇಲ್ಲದೆ, ಪರದೇಶಿ ...ಫಿ ಚಿಹ್ನೆ (ಮಮ್ಮಿ-ಪಿರಮಿಡ್)ಯನ್ನು ಮತ್ತು ಕನ್ನಡೇತರ ...ಯ ಧ್ಯೇಯವಾಕ್ಯವನ್ನು ಏಕಾಗಿ ತಂದರು ತಿಳಿಯದು. ...ದಲಾವಣೆಗೆ ಅವರು ಹೇಳುವ ಕಾರಣಗಳೆಲ್ಲ ಕೇವಲ ...ನೆಪ ಮತ್ತು ಕಣ್ಣೊರೆಸುವ ತಂತ್ರವೆಂಬುದು ...ಾಗಿದೆ. ವಿ.ವಿ.ಯಲ್ಲಿ ಪ್ರಜಾಸತ್ತಾತ್ಮಕ ಗಾಳಿಯೇ ...ಾಗಿದೆ. ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದಕ್ಕೆ ಕಾರಣ ... ನೋಟಿಸ್ ಜಾರಿ ಮಾಡಿದ ಮಹಾನುಭವ ಈ ...ಕುಲಪತಿ!

...ುಮಕೂರಿನ ಪ್ರಗತಿಪರರೆನಿಸಿದ ದೊರೈರಾಜ್, ...ಬರಯ್ಯ, ಪ್ರೊ. ಶ್ರೀನಿವಾಸಯ್ಯ, ಕೆ.ಬಿ. ಸಿದ್ಧಯ್ಯ, ...ಾರು ವೆಂಕಟೇಶ್, ಅನ್ನಪೂರ್ಣ ವೆಂಕಟನಂಜಪ್ಪ, ... ನಟರಾಜ್, ಡಾ. ಜಿ.ವಿ. ಆನಂದಮೂರ್ತಿ, ...ಕೂರು ಗ್ರಾಮಾಂತರ ಶಾಸಕ ಸುರೇಶ್ ಗೌಡರು, ...ಚವಾಡಿ ನಾಗರಾಜ್, ಕೆ.ಪಿ.ಸಿ.ಸಿ ಅಧ್ಯಕ್ಷರಾದ ಡಾ. ...ೇಶ್ವರ್ ಆದಿಯಾಗಿ ಎಲ್ಲಾ ಪ್ರಜ್ಞಾವಂತರೂ ಈ ...ಾ ಲಾಂಛನವನ್ನು ಒಕ್ಕೊರಲಿನಿಂದ ವಿರೋಧಿಸಿದರೂ ...ೊಂಡನಾಗಿ ತನ್ನ ಹಠಕ್ಕೆ ಜೋತಿದ್ದಾರೆ.

ಈ ಕುರಿತು ಸುದ್ದಿ ಪ್ರಕಟಿಸಿ ಹಳೆಯ ಲಾಂಛನ ಪರ ... ಶಕ್ತಿ ತುಂಬಿದ್ದಕ್ಕೆ ಧನ್ಯವಾದಗಳು!

- ನಾಗಾರ್ಜುನ ಸಾಗ್ಗೆರೆ, ತುಮಕೂರು

...ರಿಯ ನಟಿ ಲೀಲಾವತಿ ಹಾಗೂ ಅವರ ಮಗ ...ೋದ್ ರಾಜ್ ಬಗ್ಗೆ ಪ್ರಕಟಿಸಿರುವುದನ್ನು ಓದಿ ...ಾ ಖುಷಿಯಾಯಿತು. ಆದರೆ ನನ್ನಲ್ಲಿ ಆತಂಕ, ತಳಮಳ ...ಾ ಹೋಗಿಲ್ಲ. ಡಾ. ರಾಜ್ ತೀರಿಕೊಂಡಾಗ ಇವರಿಬ್ಬರು ...ಭವಿಸಿದ ಮಾನಸಿಕ ಯಾತನೆಯ ಬಗ್ಗೆ ಪತ್ರಿಕೆ ...ೊಮ್ಮೆ ಪ್ರಕಟಿಸಿತ್ತು.

...ಚಿತ್ರರಂಗದ ಬಗ್ಗೆ ಬೇಸತ್ತು, ಅವಕಾಶಗಳಿಂದ ...ತರಾಗಿ, ಸಿನಿಮಾ ಜಗತ್ತಿನ ಹಿರಿಯರ ಷಡ್ಯಂತ್ರಗಳನ್ನು ... ಈ ತಾಯಿ-ಮಗ ವ್ಯವಸಾಯ, ತೋಟಗಾರಿಕೆ ... ಜೀವಿಸುತ್ತಿರುವುದು ಅಭಿನಂದನಾರ್ಹ. ಬದುಕು ...ಲು ನೂರಾರು ನ್ಯಾಯಸಮ್ಮತ ದಾರಿಗಳಿವೆ. ಆದರೂ ...ಬ್ಬರು ನಮ್ಮ ದೇಶದ ಬೆನ್ನಲುಬಾದ ವ್ಯವಸಾಯವನ್ನೇ ...ಂಬಿ, ಸ್ವಾಭಿಮಾನ ಮತ್ತು ಆತ್ಮಾಭಿಮಾನದಿಂದ ...ಕುತ್ತಿರುವುದ ಬಗ್ಗೆ ಓದಿ ಸಂತೋಷವಾಯಿತು.

- ಡಿ.ಎಲ್. ನಾಗರಾಜ್, ಚನ್ನಗಿರಿ

ಅಶೋಕ್ ಕಶ್ಯಪ್ ಅಸಹ್ಯ ಪ್ರಲಾಪ

ಈ ಬಾರಿಯ ರಾಜ್ಯ ಚಲನಚಿತ್ರ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಹಿರಿಯ ಛಾಯಾಗ್ರಾಹಕ, ನಿರ್ದೇಶಕ ಅಶೋಕ್ ಕಶ್ಯಪ್ ಕೂಡಾ ಇದ್ದರು. ಅವರು ಛಾಯಾಗ್ರಹಣ ಮಾಡಿದ್ದ 'ಸೂಪರ್' ಚಿತ್ರ ಅತ್ಯುತ್ತಮ ಚಿತ್ರವಾಗಿ ಆಯ್ಕೆಯಾಗಿದೆ. 'ಸೂಪರ್' ಚಿತ್ರಕ್ಕೆ ಪ್ರಶಸ್ತಿ ಬರಲು ಕಶ್ಯಪ್ ಮಾಡಿದ ಲಾಬಿಯೇ ಕಾರಣ ಎಂದು ಹಲವು ಪತ್ರಿಕೆಗಳು ವರದಿ ಮಾಡುತ್ತಿವೆ. ಇದರಿಂದ ಕಶ್ಯಪ್ ಭೀಕರ ಸಿಟ್ಟಿಗೊಳಗಾಗಿದ್ದಾರೆ. ಶ್ರೀಯುತ ಅಶೋಕ್ ಕಶ್ಯಪ್‌ರವರು ತಮಗಾದ ಬೇಸರಗಳನ್ನು ಒರ್ವ ಪತ್ರಕರ್ತರೊಂದಿಗೆ ಸವಿವರವಾಗಿ ಹಂಚಿಕೊಂಡಿದ್ದಾರೆ. ಅದರ ಪೂರ್ಣ ವಿವರ ಇಲ್ಲಿದೆ.

ಒಂದೇ ಒಂದು ಬಾರಿ ಓದಿ. ಸಾಧ್ಯವಾದರೆ, ಕಶ್ಯಪರ ಕೋಪವನ್ನು ಶಮನ ಮಾಡಿ...!

* * *

ನಾನು ಆಯ್ಕೆ ಸಮಿತಿಯಲ್ಲಿದ್ದೆ. ಆಯ್ಕೆ ಸಮಿತಿಯಲ್ಲಿ ಇರುವ ಸದಸ್ಯರ ಯಾವ ಸಿನಿಮಾನೂ ಸ್ಪರ್ಧೆಯಲ್ಲಿರುವಂತಿಲ್ಲ. ಅದು ಸಮಿತಿಯ ಕಂಡಿಷನ್. ಒಂದು ವೇಳೆ ಅವರ ಚಿತ್ರ ಸ್ಪರ್ಧೆಯಲ್ಲಿದ್ದರೆ, ನಾವು ಅದರ ಡಿಸ್‌ಕಷನ್‌ನಲ್ಲಿ ಪಾಲ್ಗೊಳ್ಳುವಂತಿಲ್ಲ ಮತ್ತು ಆ ಚಿತ್ರಕ್ಕೆ ವೋಟ್ ಮಾಡುವಂತಿಲ್ಲ. ನಾನು ಕೆಲಸ ಮಾಡಿದ ಚಿತ್ರವೊಂದು ಪ್ರಶಸ್ತಿಗೆ ಸ್ಪರ್ಧಿಸಿರುವ ವಿಚಾರವನ್ನು ಮೊದಲೇ ನಮ್ಮ ವಾರ್ತಾ ಇಲಾಖೆಯ ನಿರ್ದೇಶಕ ಬೇವಿನಮರದ ಅವರಿಗೆ ತಿಳಿಸಿದ್ದೆ.



ಭಾರತಿ ವಿಷ್ಣುವರ್ಧನ್‌ರವರು ನಮ್ಮ ಆಯ್ಕೆ ಸಮಿತಿಯ ಅಧ್ಯಕ್ಷರಾಗಿದ್ದರು. ಅವರ ಜೊತೆಗೆ ಹೇಮಾ ಚೌಧರಿ, ಈಶ್ವರ್ ದೈತೋಟ, ಪಿಚ್ಚಳ್ಳಿ ಶ್ರೀನಿವಾಸ್, ಗೋಪಾಲ ಕೃಷ್ಣ ಕೋಟ, ಸುನಿಲ್ ಪುರಾಣಿಕ್, ಡೆಕ್ಕನ್ ಹೆರಾಲ್ಡ್ ಸಂಸ್ಥೆಯ 'ಸುಧಾ' ಬಿ.ಎಂ.ಹನೀಫ್ ಸದಸ್ಯರಾಗಿದ್ದೆವು. ಮೊದಲನೇ ದಿನವೇ ಎಲ್ಲರೂ ನನ್ನನ್ನು ಒಪ್ಪಿದರು. ಅದರಂತೆ ನಾನು ಕೂಡಾ 52 ಸಿನಿಮಾಗಳನ್ನು ನೋಡಿದೆ. ಕಡೆಯ ದಿನ ನಮ್ಮ ಸಮಿತಿಯ ಮುಖ್ಯಸ್ಥೆ ಭಾರತಿ ವಿಷ್ಣುವರ್ಧನ್ ಅವರ ಮನೆಯಲ್ಲಿ ವೋಟಿಂಗ್ ನಡೆಯಿತು. ಅವತ್ತು ಎಲ್ಲೂ ಸುದ್ದಿ ಹೊರಗೆ ಹೋಗಬಾರದು ಅಂತ ವಾರ್ತಾ ಇಲಾಖೆಯ ನಿರ್ದೇಶಕರು ಸೇರಿದಂತೆ ನಮ್ಮೆಲ್ಲರ ಮೊಬೈಲ್ ಫೋನ್‌ಗಳನ್ನು ಪಕ್ಕಕ್ಕಿಡಲಾಗಿತ್ತು. ಬೆಳಿಗ್ಗೆಯಿಂದ ಸಂಜೆ ನಾಲ್ಕು ಗಂಟೆ ತನಕ ವೋಟಿಂಗ್ ನಡೀತು. ನಾಲ್ಕೂವರೆ ಐದಕ್ಕೆ ಚೀಫ್ ಮಿನಿಸ್ಟರ್‌ಗೆ ಪ್ರಶಸ್ತಿ ವಿಜೇತ ಸಿನಿಮಾಗಳ ಪಟ್ಟಿ ನೀಡಿ ಅನೌನ್ಸ್ ಮಾಡಿಸಲಾಯಿತು.

ಈಗ ವಿಷಯ ಏನಂದ್ರೆ, 'ಸೂಪರ್' ಸಿನಿಮಾಗೆ ಮೊದಲನೇ ಅತ್ಯುತ್ತಮ ಚಿತ್ರ ಅಂತ ಅವಾರ್ಡ್ ಬಂದಿದೆ. ಎರಡನೆಯದು ಹಂಸಲೇಖಾ ಅವರ 'ಭಗವತಿ ಕಾಡು', ಮೂರನೆಯದು 'ಶಬ್ಧಮಣಿ' ಅಂತ. ಈಗ ಬಹಳಷ್ಟು ಜನ ಹೊಟ್ಟೆ ಉರಿದುಕೊಂಡಿದ್ದಾರೆ. ಏಕೆಂದರೆ, 'ಸೂಪರ್'ಗೆ ಅತ್ಯುತ್ತಮ ಚಿತ್ರ ಅಂತಾ ಅವಾರ್ಡ್ ಕೊಟ್ಟಿದಾರಲ್ಲ, ಅದು ಕ್ಯಾಮರಾಮನ್ ಆ ಕಮಿಟಿಯಲ್ಲಿ ಇರೋ ಕಾರಣಕ್ಕೆ ಕೊಟ್ಟಿದಾರೆ ಅಂತ ಪೇಪರ್‌ನಲ್ಲಿ ಬರೆದಿದ್ದಾರೆ. ಅದರ ಬಗ್ಗೆ 'ಬ್ಯಾಂಗಳೂರ್ ಮಿರರ್' ನವರು ನನ್ನನ್ನು ಇಂಟರ್‌ವ್ಯೂ ಮಾಡಿದ್ರು. "ನಾನು 'ಸೂಪರ್' ಸಿನಿಮಾ ಕುರಿತ ಡಿಸ್ಕಷನ್‌ನಲ್ಲಿ ಪಾಲ್ಗೊಂಡಿಲ್ಲ, ನಾನು ಆ ಚಿತ್ರಕ್ಕೆ ವೋಟ್ ಕೂಡಾ ಹಾಕಿಲ್ಲ' ಅಂತ ಹೇಳಿದೆ. ನಾನು ಜ್ಯೂರಿಯಲ್ಲಿ ಇರೋದ್ರಿಂದ ಆ ಸಿನಿಮಾದ ಚಿತ್ರೀಕರಣಕ್ಕೆ ನನಗೆ ಬರಬಹುದಾಗಿದ್ದ ಅವಾರ್ಡ್‌ಅನ್ನು ನಾನು ತ್ಯಜಿಸಿದ್ದೇನೆ. ಇದು ಪಾಯಿಂಟು. ಆದರೆ 'ವಿಜಯ ಕರ್ನಾಟಕ'ದ ಯಾವನೋ ರಿಪೋರ್ಟರ್ ಕೆಟ್ಟದಾಗಿ ಬರೆದಿದಾನೆ.

ನಮ್ಮ ಸಮಿತಿಯಲ್ಲಿ ಹನೀಫ್ ಅಂತ ಒಬ್ಬ ಇದ್ದ. ಆವನು ಮೊದಲೇ ಹೇಳಿ ಕೇಳಿ ಮುಸ್ಲಿಮ್. ಅವನು ಯಾವಾಗ್ಲೂ 'ಬ್ಯಾರಿ' ಸಿನಿಮಾ ಬಗ್ಗೆ ಮಾತಾಡ್ತಿದ್ದ. ನಾನ್‌ಸೆನ್ಸ್ ಮಾತಾಡ್ತಿದ್ದ. ಅವನಿಗೆ ಹೊಟ್ಟೆ ಉರಿ, ಅವನು ಹೇಳುತ್ತಿದ್ದದ್ದು ಏನೂ ಆಗ್ತಿಲ್ಲ ಅಂತ. ನಾವೆಲ್ಲ ಒಂದೆರೆಡು ಪಾಯಿಂಟ್ ಅವನ ವಿರುದ್ಧ ಮಾತಾಡಿದ್ವಿ. ಅದಕ್ಕೆ ಅವನು ಹೊರಗೆ ಬಂದು 'ಸೂಪರ್' ಸಿನಿಮಾಕ್ಕೆ ಅದರ ಕ್ಯಾಮೆರಾಮನ್ ಅವಾರ್ಡ್ ಕೊಡ್ಸಿದ್ರು ಅಂತ ಹೇಳ್ಕೊಂಡ. ಭಾರತಿ ವಿಷ್ಣುವರ್ಧನ್ ಅವರು "ಯಾವನು ಏನೇ ಬರ್ಕೊಕೊಳ್ಳಿ, ಇದು ನನ್ನ ನಿರ್ಧಾರ. ಬಿಟ್ಹಾಕಿ ತಲೆ ಕೆಡಿಸ್ಕೋಬೇಡಿ' ಅಂದರು.

ನಾವೆಲ್ಲ ಗುಪ್ತವಾಗಿ ಕೊಲ್ಲೂರಿನಲ್ಲಿ ಕೊನೆಯ ಮೀಟಿಂಗ್ ಮಾಡೋದು ಅಂತ ಮೊದಲು ನಿರ್ಧಾರ ಮಾಡಿದ್ವಿ. ಆದರೆ ಈ ಹನೀಫ್ ಅನ್ನೋ ಬೋಳೀಮಗ ಪೇಪರ್‌ನಲ್ಲಿ ಸುದ್ದಿ ಮಾಡಿಬಿಟ್ಟ. ಗುಪ್ತವಾಗಿದ್ದ ವಿಷಯ ಅದು ಹೇಗೆ ಪೇಪರ್‌ನಲ್ಲಿ ಬರುತ್ತೆ? ಸೋ ಅವಾಗ್ಲಿಂದ ನಾವು ಅವನ ಮೇಲೆ ಒಂದು ಕಣ್ಣಿಟ್ಟಿದ್ವಿ. ಅವಾರ್ಡ್ ಎಲ್ಲ ಮುಗಿದ ಮೇಲೆ ನಾವೆಲ್ಲ ಕೊಲ್ಲೂರಿಗೆ ಹೋದ್ವಿ. ಅಲ್ಲಿಂದ ನಾನು ತೀರ್ಥಹಳ್ಳಿಗೆ ಬಂದೆ.

ನಿಮ್ಮ ಕಡೆಯಿಂದ ನನಗೆ ಒಂದು ಹೆಲ್ಪ್ ಆಗಬೇಕು. ನನ್ನ ಪರ ನೀವು ಬರೀಬೇಕು. ನಿಮಗೆ ಬೇಕಾದರೆ ಭಾರತಿ ಅವರ ನಂಬರ್ ಕೊಡ್ತೀನಿ. ಅವಳು, ಯಾರವಳು, ಹ್ಲಾ... ಹೇಮಾ ಚೌಧರಿ ಇದಾಳಲ್ಲ ಅವಳ ನಂಬರ್ ಕೂಡ ಕೊಡ್ತೀನಿ. ಅವರಿಬ್ಬರ ಹತ್ತಿರ ಮಾತಾಡಿ. ನನ್ನ ಪ್ರತಿಕ್ರಿಯೆಯನ್ನೂ ತಗೊಳ್ಳಿ. ಆಮೇಲೆ ನೀವು "ಇವರೆಲ್ಲರೂ ಕಶ್ಯಪ್ 'ಸೂಪರ್'ಸಿನಿಮಾ ಕುರಿತ ಚರ್ಚೆಯಲ್ಲಿ ಭಾಗವಹಿಸಲಿಲ್ಲ, ಅದಕ್ಕೆ ಓಟು ಮಾಡಲಿಲ್ಲ ಅಂತ ಹೇಳಿದ್ರೂ' ಅಂತ ನೀವು ಬರೀಬೇಕು. ಎಲ್ಲರೂ ಈಗ ಸುಮ್ಮನೆ ಅಪಪ್ರಚಾರ ಮಾಡ್ತಿದಾರೆ ಅಂತಾ ನೀವು ಬರೀರಿ.

ಅಲ್ಲಾ, ಅವಾರ್ಡ್ ಪ್ರಕಟ ಆಗಿ ಇಷ್ಟು ದಿನ ಆದ್ರೂ ಒಂದು ಪತ್ರಿಕೆಯೂ ಅವಾರ್ಡ್ ತಗೊಂಡವರನ್ನು ಇಂಟರ್‌ವ್ಯೂ ಮಾಡಿಲ್ಲ. ಕಲ್ಯಾಣಿ ಅಂತ ಒಬ್ಳು ನಟಿ ಅವಾರ್ಡ್ ತಗೊಂಡಿದ್ದಾಳೆ. ಅವಳ ರಿಯಾಕ್ಷನ್ ಏನೂ ಅಂತ ಇವರ್‍ಯಾರೂ ಕೇಳಿಲ್ಲ. ಪುನೀತ್ ರಾಜ್‌ಕುಮಾರ್ ಅವರನ್ನ 'ನಿಮ್ಮ ಅನಿಸಿಕೆ ಏನು ಅಂತಾ ಕೇಳಿಲ್ಲ. ಯಾವ ತಂತ್ರಜ್ಞ ನಟನಟಿಯರ ರಿಯಾಕ್ಷನನ್ನೂ ತಗೊಂಡಿಲ್ಲ ಇವ್ರು. ಇವರೆಲ್ಲಾ ಬರೀ ವಿವಾದ ಹುಟ್ಟು ಹಾಕೋಕೆ ಕಾಯ್ತಾ ಇರ್ತಾರೆ.

ಯಾರಿಗೆ ಪ್ರಶಸ್ತಿ ಸಿಗಲಿಲ್ಲವೋ ಅವರು ಹೊಟ್ಟೆ ಉರ್‍ಕೊಂಡು ಮಾತಾಡ್ತಿದ್ದಾರೆ. ಕಮರ್ಷಿಯಲ್ ಸಿನಿಮಾಗೆ ಅವಾರ್ಡ್ ಕೊಟ್ರಲ್ಲ ಅಂತ ಗಿರೀಶ್ ಕಾಸರವಳ್ಳಿ ಗ್ರೂಪ್ ಹೊಟ್ಟೆ ಉರ್‍ಕೊತಾ ಇದೆ. ಆ ಹನೀಫ್ ಅಗ್ನಿ ಶ್ರೀಧರ್ ಪರ ಲಾಬಿ ಮಾಡಕ್ಕೆ ಬಂದಿದ್ದೋನು. ಅವನು ತನ್ನ ಕಡೆಯವರ ಸಿನಿಮಾಗಳಿಗೆ ಅವಾರ್ಡ್ ತಗೋಳೋಕೆ ಬಂದಿದ್ದ. ಸ್ಪರ್ಧೆಯಲ್ಲಿ 'ತಮಸ್ಸು' ಚಿತ್ರ ಇತ್ತು, ಆದರೆ 'ತಮಸ್ಸು' ಸಿನಿಮಾನ ಯಾರೂ ಇಷ್ಟ ಪಡಲಿಲ್ಲ. ಆದ್ರೂ ಅದಕ್ಕೆ ಬೆಸ್ಟ್ ಕಥೆ ಅಂತಾನೆ ಅವಾರ್ಡ್ ಕೊಟ್ಟಿದೀವಿ. ಆ ಸಿನಿಮಾಗೆ ಬೆಸ್ಟ್ ಸಿನಿಮಾಗೆ ಪ್ರಶಸ್ತಿ ಬರಬೇಕಿತ್ತು ಅನ್ನೋದು ಅವರ ವಾದ.

*****

ಚಿತ್ರರಂಗದಲ್ಲಿ ಹಿರಿಯ ಎನಿಸಿಕೊಂಡಿರುವ, ಸುಸಂಸ್ಕೃತ ಮನುಷ್ಯ ಎಂಬ ಆರೋಪ ಹೊತ್ತಿರುವ ಅಶೋಕ್ ಕಶ್ಯಪ್ ಮಹಿಳೆಯರ ಬಗ್ಗೆ, ಅಲ್ಪಸಂಖ್ಯಾತರ ಬಗ್ಗೆ, ಕಾಸರವಳ್ಳಿ ತರಹದ ಪ್ರತಿಭಾವಂತರ ಬಗ್ಗೆ ಮಾತನಾಡಿರುವ ಪರಿ ಇದು.

ವಾಸ್ತವವಾಗಿ ಯಾರೆ ಒಬ್ಬರು ಕೆಲಸ ಮಾಡಿರುವ ಸಿನಿಮಾ ಮಾತ್ರವಲ್ಲ, ಅವರ ಸಂಬಂಧಿಕರು ಕೆಲಸ ಮಾಡಿರುವ ಚಿತ್ರ ಕೂಡ ಪ್ರಶಸ್ತಿಗೆ ಸ್ಪರ್ಧೆಯಲ್ಲಿದ್ದರೆ ಅವರು ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಇರಲೇ ಕೂಡದು. ಅದು ನೈತಿಕತೆ. ಅದರ ಬದಲಾಗಿ ತಾನು ಓಟು ಹಾಕಲಿಲ್ಲ, ಚರ್ಚೆ ಮಾಡಲಿಲ್ಲ ಎಂದೆಲ್ಲ ಹೇಳುವುದು ಬರೀ ಢೋಂಗಿತನವಾಗುತ್ತದೆ.

ಆದರೆ ಈ ಮೇಲಿನ ಸಂಭಾಷಣೆಯಲ್ಲಿ ಕಶ್ಯಪ್ ಉಪಯೋಗಿಸಿರುವ ಪದಗಳನ್ನು ನೋಡಿದರೆ ಅವರಿಗೆ ಇಂತಹ ಸೂಕ್ಷ್ಮತೆಯಾಗಲಿ, ನೈತಿಕತೆ ಆಗಲಿ ಇಲ್ಲ ಎಂಬುದು ಸ್ಪಷ್ಟವಾಗುತ್ತದಲ್ಲವೇ?

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 25-04-2012 RNI No. KARKAN2005/1

ರಾಜ್ ಹಬ್ಬ!

ಮತ್ತೆ ಡಾ. ರಾಜ್‌ಕುಮಾರ್ ಅವರ ಹುಟ್ಟಿದ ಹಬ್ಬ ಎದುರಾಗಿದೆ. ಎಂದಿನಂತೆ ಈ ಬಾರಿಯೂ ಏಪ್ರಿಲ್ 24ರ ಸುತ್ತಮುತ್ತ ಅಣ್ಣಾವ್ರ ಅಭಿಮಾನಿಗಳು ಪುಳಕಗೊಳ್ಳುವಂತಹ ಅನೇಕ ಸಂಗತಿಗಳು ನಡೆಯಲಿವೆ.

ಅಣ್ಣಾವ್ರು ಹುಟ್ಟಿದ ಹಬ್ಬದ ದಿನದಂದು ಅವರ ಸ್ಮಾರಕದ ಬಳಿ ಹಾಗೂ ನಗರದ ಅನೇಕ ಕಡೆಗಳಲ್ಲಿ ಸಮಾರಂಭಗಳು ನಡೆಯಲಿವೆ. ಅದಾದ ಎರಡು ದಿನಕ್ಕೆ ಪುನೀತ್ ರಾಜ್‌ಕುಮಾರ್ ನಟಿಸಿರುವ 'ಅಣ್ಣಾ ಬಾಂಡ್' ಚಿತ್ರ ಬಿಡುಗಡೆಯಾಗಲಿದೆ. ಚಿತ್ರ ಬಿಡುಗಡೆಯಾದ ಮರುದಿನವೇ ಪುನೀತ್ ಮತ್ತು ರಾಘವೇಂದ್ರ ರಾಜ್‌ಕುಮಾರ್ ಅವರ ಸಂಸಾರಗಳು ಜೊತೆಯಾಗಿ ವಾಸವಾಗಲಿರುವ ಮನೆಯ ಗೃಹಪ್ರವೇಶ ಕಾರ್ಯಕ್ರಮವಿದೆ. ಅಣ್ಣಾವ್ರ ಹುಟ್ಟಿದ ಹಬ್ಬದ ದಿನಕ್ಕಿಂತ ಎರಡು ದಿನ ಮೊದಲು ತಮ್ಮ ತಂದೆಯನ್ನು ಕುರಿತು ಪುನೀತ್ ರಾಜ್‌ಕುಮಾರ್ ಬರೆದಿರುವ ಪುಸ್ತಕ ಬಿಡುಗಡೆಯಾಗಲಿದೆ.

ಇವೆಲ್ಲಕ್ಕಿಂತಲೂ ಮುಖ್ಯವಾಗಿ ಕಳೆದ ಹಲವಾರು ತಿಂಗಳುಗಳಿಂದ ಅನಾರೋಗ್ಯಪೀಡಿತರಾಗಿದ್ದ ಪಾರ್ವತಮ್ಮ ರಾಜ್‌ಕುಮಾರ್ ಈಗ ಸಂಪೂರ್ಣವಾಗಿ ಗುಣಮುಖರಾಗಿರುವುದು ಅಣ್ಣಾವ್ರ ಅಭಿಮಾನಿಗಳಿಗೆ ಸಂತೋಷ ತಂದುಕೊಟ್ಟಿದೆ. ಈ ಬಾರಿಯ ಬಹುತೇಕ ಸಮಾರಂಭಗಳಲ್ಲಿ ಪಾರ್ವತಮ್ಮನವರು ಸಕ್ರಿಯವಾಗಿ ಭಾಗವಹಿಸಲಿದ್ದಾರಂತೆ.

ಹೀಗೆ ಸುಮಾರು ಒಂದು ವಾರ ಗಾಂಧಿನಗರದಲ್ಲಿ ಎಲ್ಲೆಂದರಲ್ಲಿ ಅಣ್ಣಾವ್ರ ಹುಟ್ಟುಹಬ್ಬದ ಪ್ರಯುಕ್ತ ಅನೇಕ ಸಮಾರಂಭಗಳು ನಡೆಯಲಿವೆ. ಇಷ್ಟೆಲ್ಲಾ ಆದರೂ ಅಣ್ಣಾವ್ರ ಸಮಾಧಿಯ ಕೆಲಸವನ್ನು ಮಾತ್ರ ನಮ್ಮ ಘನ ಸರ್ಕಾರದಿಂದ ಇನ್ನೂ ಪೂರ್ಣಗೊಳಿಸಲು ಸಾಧ್ಯವಾಗಿಲ್ಲ ಎಂಬುದು ಅತ್ಯಂತ ಖೇದದ ಸಂಗತಿಯಾಗಿದೆ.

ರಾಜ್‌ಕುಮಾರ್ ಅವರ ಸಮಾಧಿಯ ನಿರ್ಮಾಣದ ವಿಷಯದಲ್ಲಿ ಬಿಜೆಪಿ ಸರ್ಕಾರ ತಾರತಮ್ಯದ ಮತ್ತು ವಿಳಂಬದ ನೀತಿಯನ್ನು ಅನುಸರಿಸುತ್ತಿದೆ ಎಂಬುದು ಅಭಿಮಾನಿಗಳ ಅನಿಸಿಕೆ. ಈ ಕಾರಣಕ್ಕಾಗಿ ಈ ವರ್ಷ ಸಾರಾ ಗೋವಿಂದು ಅವರ ನೇತೃತ್ವದಲ್ಲಿ 'ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘ' ಮತ್ತೊಮ್ಮೆ ಪುನಶ್ಚೇತನಗೊಳ್ಳುವ ಮಾತುಗಳು ಕೇಳಿಬರುತ್ತಿವೆ.

ಅಂದು ಡಾ|| ರಾಜ್‌ಕುಮಾರ್ ಅವರ ಸ್ಮಾರಕದ ಹತ್ತಿರ ಈ ಸಂಘದ ಆಶ್ರಯದಲ್ಲಿ ರಕ್ತದಾನ ಶಿಬಿರ, ಹೃದಯ ಪರೀಕ್ಷೆಯ ಜೊತೆಗೆ ಸುಮಾರು 25 ಸಾವಿರ ಅಭಿಮಾನಿಗಳಿಗೆ ಅನ್ನದಾನದ ಕಾರ್ಯಕ್ರಮವನ್ನು ಸಾರಾ ಗೋವಿಂದು ಹಮ್ಮಿಕೊಂಡಿದ್ದಾರೆ. ಅಷ್ಟೇ ಮುಖ್ಯವಾಗಿ ಇದೇ ಮೊದಲ ಬಾರಿಗೆ ಅಣ್ಣಾವ್ರ ಸಮಕಾಲೀನರಾಗಿದ್ದ ಐದು ಜನರಿಗೆ ಆರ್ಥಿಕ ಸಹಾಯ ನೀಡುವ ವಿಶೇಷ ಕಾರ್ಯಕ್ರಮವನ್ನೂ ಅವರು ಹಮ್ಮಿಕೊಂಡಿದ್ದಾರೆ. ಮುಖ್ಯಮಂತ್ರಿ ಸದಾನಂದ ಗೌಡರು ರಾಜ್ ಅವರ ಸಮಕಾಲೀನರಿಗೆ ಗೌರವ ಅರ್ಪಿಸಲು ಒಪ್ಪಿಕೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ಈ ಬಾರಿಯ ಅಣ್ಣಾವ್ರ ಹುಟ್ಟಿದ ಹಬ್ಬ ಅವರ ಮನೆಯವರಿಗೆ, ಅಭಿಮಾನಿಗಳಿಗೆ, ಉದ್ಯಮದವರಿಗೆ ಹೀಗೆ ಎಲ್ಲರ ಪಾಲಿಗೂ ಸ್ಮರಣೀಯವಾಗುವ ಸಾಧ್ಯತೆಯಿದೆ.



ಕೋಮಲ್‌ಗೆ ಡಬಲ್ ಧಮಾಕಾ



ಕೋಮಲ್ ನಟಿಸಿರುವ 'ಗೋವಿಂದಾಯ ನಮಃ' ಚಿತ್ರ ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯ ಅಬ್ಬರದ ನಡುವೆಯೂ ಸೂಪರ್ ಹಿಟ್ ಆಗಿದೆ. ಈ ಚಿತ್ರದಲ್ಲಿ ದೊಡ್ಡ ಹಿರೋಗಳಿಲ್ಲ, ದೊಡ್ಡ ಹಿರೋಯಿನ್‌ಗಳೂ ಇಲ್ಲ, ಹಾಡಿನ ಚಿತ್ರೀಕರಣಕ್ಕಾಗಿ ಈ ಸಿನಿಮಾದ ತಂಡ ವಿದೇಶಕ್ಕೂ ಹೋಗಲಿಲ್ಲ. ಒಂದು ಅಂದಾಜಿನ ಪ್ರಕಾರ ಈ ಚಿತ್ರ ಕೇವಲ 1 ಕೋಟಿ 70 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿದೆ. ಈಗಿನ ಇದರ ಯಶಸ್ಸಿನ ಭರಾಟೆಯನ್ನು ನೋಡಿದರೆ ಈ ಚಿತ್ರ ಏನಿಲ್ಲವೆಂದರೂ ಸುಮಾರು ಏಳು ಕೋಟಿ ರೂ.ಗಳ ನಿವ್ವಳ ಲಾಭವನ್ನು ಗಳಿಸುವ ಸಾಧ್ಯತೆ ಕಂಡುಬರುತ್ತಿದೆ.

ಅಂದಹಾಗೆ, ಈ ಲಾಭವೆಲ್ಲ ನಿರ್ಮಾಪಕ ಸುರೇಶ್ ಅವರ ಜೇಬು ಸೇರುತ್ತಿಲ್ಲ, ಅದರಲ್ಲಿ ಒಂದೆರಡು ಕೋಟಿ ರೂಪಾಯಿಗಳು ಕೋಮಲ್ ಅವರಿಗೂ ಸಿಗಲಿದೆ!

ಈ ಚಿತ್ರವನ್ನು ಮಾಡುವ ಸಂದರ್ಭದಲ್ಲಿ ಸುರೇಶ್ ಅವರು ಕೋಮಲ್ ಜೊತೆಗೆ ಒಂದು ಒಳಒಪ್ಪಂದ ಮಾಡಿಕೊಂಡಿದ್ದರು. ಅದೇನೆಂದರೆ "ಈ ಚಿತ್ರದ ಸಂಭಾವನೆಯನ್ನು ನಿಮಗೆ ಕೊಡಲು ನನ್ನಿಂದ ಸಾಧ್ಯವಾಗುತ್ತಿಲ್ಲ, ಅದರ ಬದಲಿಗೆ ಚಿತ್ರ ಸಂಪೂರ್ಣಗೊಂಡ ನಂತರ ಎರಡು ಏರಿಯಾದ ಹಂಚಿಕೆಯ ಹಕ್ಕನ್ನು ನಿಮಗೆ ಸಂಭಾವನೆಯ ರೂಪದಲ್ಲಿ ನೀಡುತ್ತೇನೆ" ಎಂದು ಸುರೇಶ್ ಹೇಳಿದ್ದರು. ಅದಕ್ಕೆ ಕೋಮಲ್ ಕೂಡ ಒಪ್ಪಿದ್ದರು.

ಸಾಧಾರಣವಾಗಿ ದೊಡ್ಡ ದೊಡ್ಡ ಹೀರೋಗಳಿಗೆ ಸಂಭಾವನೆ ಕೊಡಲು ಸಾಧ್ಯವಾಗದಿದ್ದ ಸಂದರ್ಭದಲ್ಲಿ ನಿರ್ಮಾಪಕರು ಅವರೊಂದಿಗೆ ಇಂತಹ ಒಪ್ಪಂದವನ್ನು ಮಾಡಿಕೊಳ್ಳುತ್ತಾರೆ. ಆದರೆ ಈಗ ಹೀರೋ ಆಗಿ ಬಡ್ತಿ ಪಡೆದಿರುವ ಕೋಮಲ್‌ನಂತಹ ಓರ್ವ ಪೋಷಕ ನಟನೊಂದಿಗೆ ಸುರೇಶ್ ಇಂತಹ ಒಪ್ಪಂದವನ್ನು ಮಾಡಿಕೊಂಡಿದ್ದರ ಹಿಂದೆ ಯಾವ ತಂತ್ರ ಅಡಗಿತ್ತೋ ಗೊತ್ತಿಲ್ಲ, ಯಾಕೆಂದರೆ ಇಂತಹ ಒಪ್ಪಂದಗಳು ಒಂದು ರೀತಿಯಲ್ಲಿ ಜೂಜು. ಸಿನಿಮಾ ಗೆದ್ದರೆ ನಟನಿಗೆ ಲಾಭ ಗ್ಯಾರಂಟಿ, ಸೋತರೆ ಸಂಭಾವನೆಯೂ ಖೋತಾ ಆಗುತ್ತದೆ. ಅದೇ ರೀತಿ ಗೆದ್ದರೆ ನಿರ್ಮಾಪಕನ ಲಾಭಕ್ಕೆ ಕತ್ತರಿ, ಸೋತರೆ ಆತನಿಗೆ ಒಂದಿಷ್ಟು ಉಳಿತಾಯ.

ಆದರೆ ಈ ಬಾರಿ ಈ ಜೂಜಿನಲ್ಲಿ ಕೋಮಲ್ ಗೆದ್ದಿದ್ದಾರೆ. ಹಾಗೆಯೇ, ನಿರ್ಮಾಪಕ ಸುರೇಶ್ 'ಸೋತಿದ್ದಾರೆ'. ಇವರಿಬ್ಬರ ನಡುವಿನ ಒಪ್ಪಂದದಂತೆ ಶಿವಮೊಗ್ಗ ಮತ್ತು ಹೈದರಾಬಾದ್-ಕರ್ನಾಟಕ ಪ್ರದೇಶದಿಂದ ಬರುವ ಒಂದು ಕೋಟಿಗೂ ಹೆಚ್ಚು ಹಣ ಕೋಮಲ್‌ಗೆ ಸಿಗಲಿದೆ. ಅದರರ್ಥ ಸಿನಿಮಾ ಒಂದಕ್ಕೆ ಕೋಮಲ್ ಪಡೆಯುವ ಸಂಭಾವನೆಗಿಂತ ಮೂರುಪಟ್ಟು ಹೆಚ್ಚು ಹಣ ಸಿಗಲಿದೆ. ನಿರ್ಮಾಪಕ ಸುರೇಶ್ ಈಗ ಅಷ್ಟು ದೊಡ್ಡ ಮೊತ್ತದ ಹಣಕ್ಕೆ ನಿಜವಾಗಲೂ "ಗೋವಿಂದಾಯ ನಮಃ" ಎನ್ನುವಂತಾಗಿರುವುದು ಸೋಜಿಗದ ಸಂಗತಿ, ಅಲ್ಲವೇ?

ಗುರು ದೆಸೆ!

ಸಂಗೀತ ನಿರ್ದೇಶಕ ಗುರುಕಿರಣ್ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟು ಹದಿನಾಲ್ಕು ವರ್ಷಗಳಾಗಿದ್ದರೂ ಇದೇ ಪ್ರಥಮ ಬಾರಿಗೆ ಅವರಿಗೆ ರಾಜ್ಯ ಪ್ರಶಸ್ತಿ ಸಂದಿದೆ. ಉಪೇಂದ್ರ ಅವರ 'ಎ' ಚಿತ್ರದ ಮೂಲಕ ಸಂಗೀತ ನಿರ್ದೇಶಕನಾಗಿ ಕನ್ನಡ ಚಿತ್ರರಂಗಕ್ಕೆ ಪರಿಚಯಗೊಂಡ ಗುರುಕಿರಣ್ ಮೊದಲ ಚಿತ್ರದಿಂದಲೇ ಕರ್ನಾಟಕದ ಮನೆಮಾತಾಗಿದ್ದರು. ಇಲ್ಲಿಯತನಕ ನೂರಕ್ಕಿಂತಲೂ ಹೆಚ್ಚು ಸಿನಿಮಾಗಳಿಗೆ ಸಂಗೀತ ನೀಡಿರುವ, ಹಾಡು ಬರೆದಿರುವ, ಸ್ವತಃ ಹಾಡಿರುವ ಗುರುಕಿರಣ್ ಪುನೀತ್ ರಾಜ್‌ಕುಮಾರರ 'ಅಪ್ಪು', ದರ್ಶನರ 'ಕರಿಯ', ವಿಷ್ಣುವರ್ಧನ್ ಅವರ 'ಆಪ್ತಮಿತ್ರ' ಮತ್ತು 'ಆಪ್ತರಕ್ಷಕ', ಶಿವರಾಜ್‌ಕುಮಾರರ 'ಜೋಗಿ' ಸೇರಿದಂತೆ ನಮ್ಮ ಚಿತ್ರರಂಗದ ಹಲವಾರು ನಾಯಕ ನಟರ ಚಿತ್ರಗಳಿಗೆ ಸಂಗೀತ ನಿರ್ದೇಶಕರಾಗಿ ದುಡಿದಿದ್ದಾರೆ. ಗುರು ಸಂಗೀತ ನೀಡಿದ ಅನೇಕ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಹಾಡಿನ ಕಾರಣಕ್ಕಾಗಿಯೇ ಹಿಟ್ ಆಗಿದ್ದೂ ಉಂಟು.

ಗುರುಕಿರಣ್ ಚಿತ್ರರಂಗದಲ್ಲಿ ಎಷ್ಟು ಜನಪ್ರಿಯರೆಂದರೆ, ಇತ್ತೀಚೆಗೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಅವರ ಮನೆ ಮೇಲೆ ದಾಳಿ ನಡೆಸಿದ್ದರು. ಆ ದಾಳಿಯ ನಂತರ ಗುರು ಹೇಳಿದ್ದೇನು ಗೊತ್ತೇ? "ಕರ್ನಾಟಕದಲ್ಲಿ ಸಂಗೀತ ನಿರ್ದೇಶಕನೊಬ್ಬನ ಮನೆಯ ಮೇಲೆ ತೆರಿಗೆ ಇಲಾಖೆ ಅಧಿಕಾರಿಗಳು ದಾಳಿ ಮಾಡಿದ್ದು ಇದೇ ಮೊದಲು. ಆ ಕೀರ್ತಿ ನನಗೆ ಸಲ್ಲುತ್ತದೆ" ಎಂದು ತಮಾಷೆ ಮಾಡಿದ್ದರು.

ಈ ರೀತಿ ಯಾವಾಗಲೂ ತಮಾಷೆಯಾಗಿ ಮಾತನಾಡುವ ಗುರುಕಿರಣ್ ಅವರು ಈಗ ರಾಜ್ಯ ಪ್ರಶಸ್ತಿ ಬಂದಿದ್ದರೂ ಅವರ ಮುಖದಲ್ಲಿ ಆನಂದವೇನೂ ಕಾಣಿಸುತ್ತಿಲ್ಲ, "ಇದೇ ಪ್ರಶಸ್ತಿ ಐದಾರು ವರ್ಷಗಳ ಹಿಂದೆ ದೊರೆತಿದ್ದರೆ ಬೇರೆ ತರಹದ ಥ್ರಿಲ್ ಆಗುತ್ತಿತ್ತು, ಆದರೆ ಈಗ ಏನೂ ಅನ್ನಿಸುತ್ತಿಲ್ಲ" ಎಂದು ಅವರು ಮೊನ್ನೆ ಹೇಳಿದರು. ಅಂದಹಾಗೆ ಗುರುಕಿರನ್ ಅವರಿಗೆ ಪ್ರಶಸ್ತಿ ತಂದುಕೊಟ್ಟ ಚಿತ್ರ 'ಮೈಲಾರಿ'.




ಕಿಟ್ಟಿಯ ಟೋನಿ

'ಟೋನಿ' ಎಂಬ ಹೊಸ ಚಿತ್ರ ಈ ವಾರ ಆರಂಭವಾಗಲಿದೆ. ಈ ಚಿತ್ರದ ನಾಯಕ-ನಾಯಕಿಯಾಗಿ ಶ್ರೀನಗರ ಕಿಟ್ಟಿ ಮತ್ತು ಐಂದ್ರಿತಾ ರೈ ಆಯ್ಕೆಯಾಗಿದ್ದಾರೆ. ಇದನ್ನು 'ಒಲವೇ ಮಂದಾರ' ಖ್ಯಾತಿಯ ಜಯತೀರ್ಥ ನಿರ್ದೇಶಿಸಲಿದ್ದಾರೆ.

ಹಿಂದೊಮ್ಮೆ 'ಟೋನಿ' ಎಂಬ ಕನ್ನಡ ಚಿತ್ರ ತೆರೆಕಂಡಿತ್ತು. ಅದರಲ್ಲಿ ಅಂಬರೀಷ್ ಮತ್ತು ಜೂಲಿ ಲಕ್ಷ್ಮಿ ನಟಿಸಿದ್ದರಲ್ಲದೆ ಅವರಿಬ್ಬರೂ ಪಾಲುದಾರಿಕೆಯಲ್ಲಿ ಆ ಚಿತ್ರವನ್ನು ನಿರ್ಮಿಸಿದ್ದರು. ಅಷ್ಟೇ ಅಲ್ಲ, ಅಲ್ಲಿಯತನಕ ಕನ್ನಡ ಸಿನಿಮಾಗಳಲ್ಲಿ ಸೀರೆಯುಟ್ಟು ಗೌರಮ್ಮನ ಪಾತ್ರಗಳಲ್ಲಿ ನಟಿಸುತ್ತಿದ್ದ ಲಕ್ಷ್ಮಿ ಆ ಚಿತ್ರದಲ್ಲಿ ಮೊದಲ ಬಾರಿಗೆ ಮಾಡ್ ಮತ್ತು ಬಿಂದಾಸ್ ಆಗಿ ನಟಿಸಿ ಪಡ್ಡೆ ಹುಡುಗರ ಹೃದಯಕ್ಕೆ ಕಿಚ್ಚು ಹತ್ತಿಸಿದ್ದರು. ಆ ಕಾರಣಕ್ಕೇ ಅಂದು ಆ ಚಿತ್ರ ದೊಡ್ಡ ಸುದ್ದಿಯೇ ಆಗಿತ್ತು.

ಇದು ಆ ಕಾಲದ 'ಟೋನಿ' ಸಿನಿಮಾದ ಬಗ್ಗೆ ಒಂದು ಸಣ್ಣ ಫ್ಲ್ಯಾಶ್‌ಬ್ಯಾಕ್.

ಆದರೆ ಆ ಹಳೆ 'ಟೋನಿ'ಗೂ, ಈ ಹೊಸ 'ಟೋನಿ'ಗೂ ಏನೇನೂ ಸಂಬಂಧವಿಲ್ಲ ಎಂದು ಜಯತೀರ್ಥ ಮೊದಲೇ ಸ್ಪಷ್ಟಪಡಿಸುತ್ತಿದ್ದಾರೆ. ಇವೆರಡರ ನಡುವಿನ ಒಂದೇ ಒಂದು ಸಾಮ್ಯತೆ ಯಾವುದೆಂದರೆ ಈ ಚಿತ್ರವನ್ನು ನಾಯಕ ಶ್ರೀನಗರ ಕಿಟ್ಟಿ ನಿರ್ಮಿಸುತ್ತಿರುವುದು.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com